Download From : www.kpscvaani.com



ವಾರ್ಷಿಕ ಚಂದಾ ರೂ.25/-

# ಜನಪದ

ಸಂಪುಟ-04 • ಸಂಚಿಕೆ-08 • ಮೇ 2021

ಮೇ 2021

- ಬಸವ ಪ್ರಜ್ಞೆ ಈ-ಕಾಲದ ತುರ್ತು
- ಅಂತರ್ಜಲ ಹೆಚ್ಚಿಸುವ ಜಲಶಕ್ತಿ ಅಭಿಯಾನಕ್ಕೆ ರಾಜ್ಯದಲ್ಲಿ ಚಾಲನೆ
- ಲಸಿಕೆ ಹಾಕಿಸಿಕೊಂಡು ರೋಗ ನಿರೋಧಕ ಶಕ್ತಿ ಹೆಚ್ಚಿಸಿಕೊಳ್ಳಿ
- ಏಸೂರು ಕೊಟ್ಟರೂ ಈಸೂರು ಕೊಡೆವು.



## ಕಾಯಕವೇ ಕೈಲಾಸ

-ಬಸವಣ್ಣ

Download From : www.kpscvaani.com






ಏಪ್ರಿಲ್ 14 ರಂದು ಡಾ: ಬಿ.ಆರ್. ಅಂಬೇಡ್ಕರ್ ಅವರ 130 ನೇ ಜನ್ಮ ದಿನಾಚರಣೆ ಅಂಗವಾಗಿ ವಿಧಾನಸೌಧದ ಮುಂಭಾಗದಲ್ಲಿರುವ ಅಂಬೇಡ್ಕರ್ ಪ್ರತಿಮೆಗೆ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಅವರು ಪುಷ್ಪಾರ್ಚನೆ ಮಾಡಿದರು. ಈ ಸಂದರ್ಭದಲ್ಲಿ ಸಮಾಜ ಕಲ್ಯಾಣ ಸಚಿವರಾದ ಬಿ. ಶ್ರೀರಾಮುಲು, ಬಿ.ಬಿ.ಎಂ.ಪಿ ಮುಖ್ಯ ಆಯುಕ್ತ ಗೌರವ್ ಗುಪ್ತಾ ಆಡಳಿತಾಧಿಕಾರಿ ರಾಕೇಶ್ ಸಿಂಗ್ ಮತ್ತಿತರ ಹಿರಿಯ ಅಧಿಕಾರಿಗಳು ಉಪಸ್ಥಿತರಿದ್ದರು. ಇದೇ ಸಂದರ್ಭದಲ್ಲಿ ಮುಖ್ಯಮಂತ್ರಿಗಳು ಪೌರಕಾರ್ಮಿಕರಿಗೆ ಸಮವಸ್ತ್ರ ಮತ್ತು ಸುರಕ್ಷತಾ ದಿರಿಸುಗಳನ್ನು ಸಾಂಕೇತಿಕವಾಗಿ ವಿತರಿಸಿದರು.

Download From : www.kpscvaani.com

ವಾರ್ಷಿಕ ಚಂದಾ ರೂ.25/-

# ವಾರ್ತಾ ಜನಪದ

ಸಂಪುಟ-04 • ಸಂಚಿಕೆ-08 • ಮೇ 2021

ಮೇ 2021




06
ಕಾರ್ಮಿಕರ ಕಲ್ಯಾಣಕ್ಕಾಗಿ ಕಾರ್ಯಪ್ರವೃತ್ತವಾಗಿರುವ **ಕಾರ್ಮಿಕ ಇಲಾಖೆ**
• ಉಮೇಶ್ ಕೋಲಿಗೆರೆ



10
ಅಂತರ್ಜಲ ಹೆಚ್ಚಿಸುವ ಜಲಶಕ್ತಿ ಅಭಿಯಾನಕ್ಕೆ **ರಾಜ್ಯದಲ್ಲಿ ಚಾಲನೆ**
• ಸ್ಮಿತಾ. ಆರ್

16 ಕೋವಿಡ್ -19
**ಕಹಿ ನೆನಪು ಮರೆತುಬಿಡಿ ಲಸಿಕೆಗೆ ನಿಮ್ಮ ತೋಳು ಕೊಡಿ**
• ಕೆ.ಎಸ್. ರಾಜಮನ್ನಾರ್



20
ಮನೆ ಬಾಗಿಲಿಗೆ ಬರಲಿದೆ **ಮಾವು**
• ಚಂದ್ರಮುಖಿ



23
ಇಹಲೋಕ ತ್ಯಜಿಸುವುದರೊಂದಿಗೆ ನಿಘಂಟು ಲೋಕದೊಡನೆ ಕಳಚಿದ ಮಹಾ ನಂಟು **ಪ್ರೊ ಜಿ ವೆಂಕಟಸುಬ್ಬಯ್ಯ**
• ಡಿ.ಪಿ.ಮುರಳೀಧರ್

29 ಬಸವ ಪ್ರಜ್ಞೆ
**ಈ-ಕಾಲದ ತುರ್ತು**
• ಪ್ರೊ.ಮಂಜುನಾಥ ಉಲವತ್ತಿ ಶೆಟ್ಟರ್

32 ಇನ್ನು ಗೇಟ್ ಸೆಟ್ ಗೋಳಿಲ್ಲ
**ಜೆಇಇ ಪರೀಕ್ಷಾ ತರಬೇತಿಗೂ ಅವಕಾಶ**
• ಬಿ.ಜಿ.ಪೂರ್ಣಿಮ

34 ಕರ್ನಾಟಕ ರಾಜ್ಯ **ಬ್ರಾಹ್ಮಣ ಅಭಿವೃದ್ಧಿ ಮಂಡಳಿಯ ಯೋಜನೆಗಳು**
• ಕೆ. ರೋಹಿಣಿ



36
ಸ್ವಾತಂತ್ರ್ಯದ ಸಂಗ್ರಾಮದ ಬೆಳ್ಳಿಚುಕ್ಕಿ ನಾಡಿನಲ್ಲಿ **ಅಮೃತ ಮಹೋತ್ಸವ**
• ಗುರುನಾಥ ಕಡಬೂರ

39 ಏಸೂರು ಕೊಟ್ಟರೂ
**ಈಸೂರು ಕೊಡೆವು.**
• ಸದಾನಂದ

42 ಹಾಸನ ಜಿಲ್ಲೆಗೆ
**ದೀನ್ ದಯಾಲ್ ಉಪಾಧ್ಯಾಯ ಪ್ರಶಸ್ತಿ**
• ವಿನೋದ್ ಚಂದ್ರ

43 ವಿಧಾನಮಂಡಲ ಚಟುವಟಿಕೆಗಳು ಮತ್ತು ಮಾಧ್ಯಮದ ಕರ್ತವ್ಯ
• ಈಶ್ವರ ದೈತೋಟ

47 ಕೃಷಿಕನ ಕೈಚಳಕದಲ್ಲಿ
**ಅರಳಿದ ವಿಭಿನ್ನ ಕಲಾಕೃತಿ**
• ಗಣಪತಿ ಹಾಸ್ಪುರ

50 ಪದಬಂಧ-18



**ಪ್ರಧಾನ ಸಂಪಾದಕರು**
**ಡಾ॥ ಪಿ. ಎಸ್. ಹರ್ಷ, ಐಪಿಎಸ್**
ಆಯುಕ್ತರು, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ

**ಸಂಪಾದಕೀಯ ಸಲಹೆ**
**ಡಿ.ಪಿ. ಮುರಳೀಧರ್**
ಜಂಟಿ ನಿರ್ದೇಶಕರು

**ಸಹನಾ ಎಂ.**
ಉಪ ನಿರ್ದೇಶಕರು

**ಉಪ ಸಂಪಾದಕರು**
**ಬಿ. ಜಿ. ಪೂರ್ಣಿಮ**

**ಪ್ರಕಾಶಕರು**
ಆಯುಕ್ತರು
ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ
#17, ವಾರ್ತಾ ಸೌಧ, ಭಗವಾನ್ ಮಹಾವೀರ ರಸ್ತೆ, ಬೆಂಗಳೂರು – 560 001
Ph : 080-22028103 / 22028023
email : varthajanapada@yahoo.co.in
https://dipr.karnataka.gov.in

**ಮುದ್ರಕರು**
ಅಭಿಮಾನಿ ಪಬ್ಲಿಕೇಷನ್ಸ್ ಪ್ರೈ. ಲಿ.
ಡಾ॥ ರಾಜ್‌ಕುಮಾರ್ ರಸ್ತೆ, ರಾಜಾಜಿನಗರ, ಬೆಂಗಳೂರು – 560 010


ಲೇಖಕರ ಅಭಿಪ್ರಾಯಗಳು ಸರ್ಕಾರದ ಅಭಿಪ್ರಾಯಗಳಲ್ಲ

Download From : www.kpscvaani.com

# ನಮ್ಮ ಅನಿಸಿಕೆ

ರಾಷ್ಟ್ರವನ್ನು ತೀವ್ರತರ ಸಂಕಷ್ಟಕ್ಕೆ ದೂಡಿದ ಮಹಾಮಾರಿ ಕೋವಿಡ್-19 ರ ಮೊದಲ ಅಲೆಗೆ ಸಿಲುಕಿ ನಲುಗಿ ಹೋಗಿದ್ದ ಈ ಸಮಯದಲ್ಲೂ ಕೂಡ ಹೊಸ ಸಹಜ ದಿನಗಳಲ್ಲಿ ಎದುರಾಗಿದ್ದ ಹತ್ತಾರು ಸಮಸ್ಯೆ, ಸವಾಲುಗಳ ಮಧ್ಯೆ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಅವರು ರಾಜ್ಯ ಸರ್ಕಾರದ 2020-21 ರ ಹಣಕಾಸು ವರ್ಷದ ಬಜೆಟ್ ಮಂಡಿಸುವಲ್ಲಿ ತುಂಬಾ ಜಾಣ್ಮೆ ವಹಿಸಿರುತ್ತಾರೆ. ರೈತಾಪಿ ವರ್ಗ, ಮಹಿಳೆಯರ ಬದುಕು ಹಸನಾಗಲು ಅವರನ್ನು ಸಬಲಗೊಳಿಸಲು ಕ್ರಮಕೈಗೊಂಡಿರುತ್ತಾರೆ. ಸರ್ವರಿಗೂ ಸಮ ಬಾಳು ಸರ್ವರಿಗೂ ಸಮಪಾಲು ಎಂಬಂತೆ ಎಲ್ಲಾ ಜಾತಿ ಜನಾಂಗಗಳಿಗಲ್ಲದೆ, ಎಲ್ಲ ಮಠಗಳು ಹಾಗೂ ಎಲ್ಲಾ ಸಮೂಹದ ನಿಗಮ ಮಂಡಳಿಗಳು ಕೇಳುವ ಮೊದಲೇ ಆಯವ್ಯಯದಲ್ಲಿ ಅನುದಾನ ನೀಡುವುದರಲ್ಲಿ ಯಶಸ್ವಿಯಾಗಿರುತ್ತಾರೆ.

ಲೇಖಕ ಮಾಧವ ಅವರು ಆರ್ಥಿಕ ಸಂಕಷ್ಟಗಳ ಸವಾಲುಗಳ ಮಧ್ಯೆ ಸಮತೋಲನದ ಬಜೆಟ್ ಎಂಬ ಶೀರ್ಷಿಕೆಯಡಿ ಬರೆದಿರುವ ಲೇಖನದಲ್ಲಿ ಯಡಿಯೂರಪ್ಪ ಅವರು ಈ ಸಾಲಿನ ಆಯವ್ಯಯದಲ್ಲಿ ಜನತೆಗೆ ನೀಡಿರುವ ಯೋಜನೆಗಳು, ರಿಯಾಯಿತಿಗಳು, ಅನುದಾನದ ಮಾಹಿತಿಯನ್ನು ಸಂಕ್ಷಿಪ್ತವಾಗಿ ಓದುಗರಿಗೆ ಒದಗಿಸಿದ್ದಾರೆ.

**– ಪ್ರಭುಲಿಂಗಸ್ವಾಮಿ,** ಬಂಗಾರಪೇಟೆ

ಕೆಲವು ವಿಷಯಗಳ ಬಗ್ಗೆ ನಮಗೆ ತಿಳುವಳಿಕೆ ಇಲ್ಲದಿದ್ದರೂ ಕೂಡ ತಂತ್ರಜ್ಞಾನ ಯುಗದಲ್ಲಿ ಅವುಗಳನ್ನು ನಾವು ಬಳಕೆ ಮಾಡುತ್ತಿರುತ್ತೇವೆ. ಡಿಜಿಟಲ್ ಮೀಡಿಯಾ ಮತ್ತು ಸೋಷಿಯಲ್ ಮೀಡಿಯಾ ಇದಕ್ಕೆ ಸರಿಯಾದ ಉದಾಹರಣೆಯಾಗುತ್ತದೆ. ಆದರೆ ಏಪ್ರಿಲ್ 2021 ವಾರ್ತಾ ಜನಪದದಲ್ಲಿ ಪ್ರಕಟವಾಗಿರುವ ಅಂಕಿತ ಮಾಧ್ಯಮಕ್ಕೆ ಅಂಕೆ ಇದೆಯೇ? ಎಂಬ ಶೀರ್ಷಿಕೆಯಡಿ ಪ್ರಕಟವಾಗಿರುವ ಲೇಖನ ಮಹತ್ವಪೂರ್ಣ ಮಾಹಿತಿಯನ್ನು ಒದಗಿಸಿಕೊಟ್ಟಿತು.

ಅಂತರ್ಜಾಲ ಬಳಕೆದಾರರ ಪ್ರಮಾಣ ದಿನೇ ದಿನೇ ತೀವ್ರಗತಿಯಲ್ಲಿ ಏರಿಕೆಯಾಗುತ್ತಿರುವ ಇಂದಿನ ಕಾಲದಲ್ಲಿ ವಿವಿಧ ಮಾಧ್ಯಮಗಳ ಕಾರ್ಯವೈಖರಿಯ ಬಗ್ಗೆ ತಿಳಿದುಕೊಳ್ಳಬೇಕಾದ ವಿಚಾರವಾಗಿದೆ.

**–ಅಪರ್ಣ ನರೇಂದ್ರನಾಥ್,** ಚಿತ್ರದುರ್ಗ

ಏಪ್ರಿಲ್ 2021ರ ವಾರ್ತಾ ಜನಪದ ಸಂಚಿಕೆಯನ್ನು ಕೋವಿಡ್-19 ಲಸಿಕೆ ಅಭಿಯಾನದಲ್ಲಿ ಕರ್ನಾಟಕದ ಮುನ್ನಡೆ ಶೀರ್ಷಿಕೆಯಲ್ಲಿ ಕೋವಿಡ್ ಲಸಿಕೆ ಕುರಿತು ಸವಿಸ್ತಾರವಾಗಿ ಬೆಳಕು ಚೆಲ್ಲಿರುವುದು ಶ್ಲಾಘನೀಯ ಸಂಗತಿ. ಲೇಖಕರು ಲೇಖನದಲ್ಲಿ ಕೊರೊನಾ ಎರಡನೆ ಅಲೆಯ ಬಗ್ಗೆ ಪ್ರಸ್ತಾಪಿಸುತ್ತಾ ಪ್ರಸ್ತುತ ಕರ್ನಾಟಕದಲ್ಲಿ ಪಾಸಿಟೀವ್ ಪ್ರಕರಣ ಅಲ್ಪ ಪ್ರಮಾಣ ಮಟ್ಟದಲ್ಲಿರುವುದರಿಂದ ಸರ್ಕಾರವು ಗಂಭೀರವಾಗಿ ಮುಂಜಾಗೃತಾ ಕ್ರಮಗಳನ್ನು ಕೈಗೊಳ್ಳುತ್ತಿರುವುದರ ಬಗ್ಗೆ ಮತ್ತು ಲಸಿಕೆ ಏಕೆ ಹಾಕಿಸಿಕೊಳ್ಳಬೇಕು ಎಂಬ ಕುರಿತು ಜನರಿಗೆ ಅರಿವು ಮೂಡಿಸಿದ್ದಾರೆ. ಹಾಗಾಗಿ ಲೇಖಕರ ಕಳಕಳಿಯನ್ನು ಮೆಚ್ಚಲೇಬೇಕು.

**–ಸಂಗಮೇಶ್ ಬಡಿಗೇರ,** ಗದಗ

ತಮ್ಮ ಪತ್ರಿಕೆಯಲ್ಲಿ ಕನ್ನಡ ಪುಸ್ತಕ ಪ್ರಾಧಿಕಾರದ ಅಧ್ಯಕ್ಷರೊಂದಿಗೆ ನಡೆಸಿರುವ ಮಾತುಮಂಥನ ಓದಿ ತುಂಬಾ ಸಂತೋಷವಾಯಿತು. ಪ್ರಾಧಿಕಾರದ ಅಧ್ಯಕ್ಷರಾಗಿರುವ ಡಾ. ನಂದೀಶ್ ಹಂಚೆ ಅವರ ಯೋಜನೆಗಳು ಮತ್ತು ಆಲೋಚನೆಗಳು ಉತ್ತಮವಾಗಿವೆ. ಸುಮಾರು ಹತ್ತು ಎಕರೆ ಪ್ರದೇಶದಲ್ಲಿ ಪ್ರಪಂಚದ ಎಲ್ಲಾ ಸಂಶೋಧನಾ ಗ್ರಂಥಗಳು, ಕಾದಂಬರಿಗಳು, ಕಥೆಗಳು, ಲಭ್ಯವಾಗುವಂತೆ ದೇಶದಲ್ಲೇ ಮೊಟ್ಟ ಮೊದಲ ಪುಸ್ತಕೋದ್ಯಾನವನ್ನು ಮಾಡುವಂತಹ ಮಹತ್ವಾಕಾಂಕ್ಷಿ ಯೋಜನೆಯನ್ನು ರೂಪಿಸಲಾಗುತ್ತಿರುವುದು ಸಾಹಿತ್ಯ ಪ್ರೇಮಿಗಳಿಗೆ ಅತ್ಯಂತ ಸಂತೊಷದ ವಿಚಾರ.

ಪುಸ್ತಕ ಮಾರಾಟ ಮೇಳಗಳನ್ನು ಇನ್ನು ಮುಂದೆ ರಾಜ್ಯದ ಬೇರೆ ಬೇರೆ ಜಿಲ್ಲೆ, ತಾಲೂಕು ಮಟ್ಟದಲ್ಲಿ ಏರ್ಪಡಿಸಲು ತೀರ್ಮಾನಿಸಿರುವುದು ಶ್ಲಾಘನೀಯವಾದುದು. ಅದರಲ್ಲೂ ಈ ಬಾರಿ ನಮ್ಮ ಧಾರವಾಡಲ್ಲಿ ಪುಸ್ತಕ ಮೇಳ ಆಯೋಜಿಸಲು ಉದ್ದೇಶಿಸಿರುವುದನ್ನು ತಿಳಿದು ತುಂಬಾ ಸಂತೋಷವಾಯಿತು. ಪ್ರತಿ ಬಾರಿ ಪುಸ್ತಕ ಮೇಳ ಬೆಂಗಳೂರಿನಲ್ಲೇ ಜರುಗುತ್ತಿದ್ದುದರಿಂದ ನಾನು ಧಾರವಾಡದಿಂದ ಬೆಂಗಳೂರಿಗೆ ಬರಬೇಕಾಗುತಿತ್ತು. ಹೀಗೆ ಪುಸ್ತಕ ಮೇಳವನ್ನು ಇತರೆ ಪ್ರದೇಶಗಳಲ್ಲಿ ನಡೆಸುವುದರಿಂದ ಹೆಚ್ಚಿನ ಜನರಲ್ಲಿ ಓದುವ ಅಭಿರುಚಿಯನ್ನು ಬೆಳೆಸಿದಂತ್ತಾಗುತ್ತದೆ. ಒಟ್ಟಿನಲ್ಲಿ ಅಧ್ಯಕ್ಷರೊಂದಿಗೆ ನಡೆಸಿರುವ ಮಾತುಮಂಥನ ಚನ್ನಾಗಿ ಮೂಡಿಬಂದಿದೆ. ಲೇಖಕರಿಗೆ ಅಭಿನಂದನೆಗಳು.

**–ಶಿವಕುಮಾರ್ ಡಿ.ಹೆಚ್,** ಧಾರವಾಡ



ಏಪ್ರಿಲ್ 2021 ರ ಪತ್ರಿಕೆ ಬಂದು ತಲುಪಿದೆ. ಕೋವಿಡ್ ಲಸಿಕೆ ಕುರಿತು ಪತ್ರಿಕೆಯಲ್ಲಿ ಪ್ರಕಟವಾಗಿರುವ ಲೇಖನದಲ್ಲಿ ನಮ್ಮ ದೇಶದ, ರಾಜ್ಯದ, ಪ್ರಮುಖ ರಾಜಕೀಯ ವ್ಯಕ್ತಿಗಳು, ಗಣ್ಯರು ಲಸಿಕೆ ಹಾಕಿಸಿಕೊಳ್ಳುತ್ತಿರುವ ಚಿತ್ರವನ್ನು ಬಳಸಿಕೊಂಡಿರುವುದನ್ನು ನೋಡಿದರೆ ಸಾರ್ವಜನಿಕರು ಲಸಿಕೆಯನ್ನು ಯಾವುದೇ ಭಯವಿಲ್ಲದೆ, ಕಡ್ಡಾಯವಾಗಿ ಕೋವಿಡ್ ಲಸಿಕೆ ಅಭಿಮಾನದಲ್ಲಿ ಭಾಗವಹಿಸಬಹುದು ಎಂಬ ಸಂದೇಶವನ್ನು ಸಾರುವಂತಿದೆ.

ವಿದುರಾಶ್ವತ್ಥದಲ್ಲಿ ಮೊಳಗಿದ 75ನೇ ಸ್ವಾತಂತ್ಯದ ಅಮೃತ ಮಹೋತ್ಸವ ಚಿತ್ರಗಳು ಕೂಡ ಚೆನ್ನಾಗಿ ಮೂಡಿಬಂದಿದೆ. ಇದರ ಬಗ್ಗೆ ಲೇಖನ ಮಾಡಿರುವ ಎಂ.ಕೃಷ್ಣಪ್ಪ ಕೆ.ಎನ್.ಹಳ್ಳಿಯವರು ದಕ್ಷಿಣ ಭಾರತದ ಜಲಿಯನ್ ವಾಲಬಾಗ್ ಎಂದೇ ಖ್ಯಾತಿ ಪಡೆದಿರುವ ರಾಜ್ಯದ ಚಿಕ್ಕಬಳ್ಳಾಪುರ ಜಿಲ್ಲೆಯ ಗೌರಿಬಿದನೂರು ತಾಲೂಕಿನ ಐತಿಹಾಸಿಕ ಪುಣ್ಯ ಕ್ಷೇತ್ರವಾದ ವಿದುರಾಶ್ವತ್ಥದಲ್ಲಿ ರಾಜ್ಯಮಟ್ಟದ ಅಮೃತ ಮಹೋತ್ಸವದ ಮಹತ್ವವನ್ನು ತಿಳಿದುಕೊಳ್ಳಬೇಕಾದ ಅತ್ಯುತ್ತಮ ವಿಷಯವನ್ನು ತಿಳಿಸಿ ಕೊಟ್ಟಿರುತ್ತಾರೆ. ಅವರಿಗೆ ತುಂಬಾ ತುಂಬಾ ಅಭಿನಂದನೆಗಳು.

–ಎಸ್.ಮಹದೇವಶೆಟ್ಟಿ, ಟಿ.ನರಸೀಪುರ

'ವಾರ್ತಾ ಜನಪದ' ಮಾಸಿಕ ಈಗ
www.kanaja.inನಲ್ಲಿ ಲಭ್ಯ

ವಾರ್ತಾ ಜನಪದ ಮಾಸಿಕಕ್ಕೆ ಚಂದಾದಾರರಾಗಲು ಬಯಸುವವರು ರೂ 25/- ಅನ್ನು ಕಡ್ಡಾಯವಾಗಿ ಸೇವಾಸಿಂಧುವಿನ ಮೂಲಕ ಆನ್ ಲೈನ್ ಅರ್ಜಿಯನ್ನು ಸಲ್ಲಿಸಬೇಕು.

ವಾರ್ತಾ ಜನಪದ ಪತ್ರಿಕೆಯ ಸಾಫ್ಟ್ ಕಾಪಿಯನ್ನು ಇ-ಮೇಲ್ ಮೂಲಕ ಉಚಿತವಾಗಿ ಚಂದಾದಾರರಾಗಲು ಇಚ್ಛಿಸುವವರು ತಮ್ಮ ಇ-ಮೇಲ್ ವಿಳಾಸವನ್ನು 9480841210 ಗೆ ಕಳುಹಿಸಿ ನೋಂದಾಯಿಸಿ ಕೊಳ್ಳಬಹುದು.



# ಸಂಪಾದಕೀಯ...

ಪ್ರಿಯ ಓದುಗ ಮಿತ್ರರೆ,

ಕೋವಿಡ್-19 ಎರಡನೆ ಅಲೆಯಿಂದ ದಿನದಿಂದ ದಿನಕ್ಕೆ ಸೋಂಕಿತರ ಸಂಖ್ಯೆ ಏರಿಕೆಯಾಗುತ್ತಿದೆ. ಬೇರೆ ದೇಶಗಳಲ್ಲಿ ಈಗಾಗಲೇ ಮೂರನೆ ಅಲೆ ಕಾಣಿಸಿಕೊಂಡಿದೆ. ನಾವು ಮೂರನೆ ಅಲೆಯಿಂದ ತಪ್ಪಿಸಿಕೊಳ್ಳಬೇಕಿದ್ದರೆ, ವೈದ್ಯರು, ತಜ್ಞರು ತಿಳಿಸಿರುವಂತೆ ಸರ್ಕಾರ ಸಿದ್ಧಪಡಿಸಿರುವ ಕೊರೊನಾ ಮಾರ್ಗಸೂಚಿಯಂತೆ ನಡೆದುಕೊಳ್ಳಬೇಕು. ಉದಾಸೀನ ಮಾಡಿದರೆ ಮುಂದೆ ಉಂಟಾಗುವ ಅನಾಹುತಕ್ಕೆ ನಾವೇ ಜವಾಬ್ದಾರರಾಗುತ್ತೇವೆ. ಹಾಗಾಗಿ ಸ್ವಯಂ ಪ್ರೇರಿತರಾಗಿ ಲಸಿಕೆಯನ್ನು ಪಡೆದುಕೊಳ್ಳಿ. ಆ ಮೂಲಕ ಸೋಂಕು ಹರಡುವುದನ್ನು ಮತ್ತು ಸಾವಿನ ಪ್ರಮಾಣವನ್ನು ಕಡಿಮೆ ಮಾಡಬಹುದು.

ಈ ಮಹಾ ಸಾಂಕ್ರಾಮಿಕ ರೋಗದ ವಿರುದ್ಧ ಹೋರಾಡುತ್ತಲೇ ಸರ್ಕಾರವು ಅಭಿವೃದ್ಧಿ ಕಾರ್ಯಗಳನ್ನು ಸಹ ಚುರುಕುಗೊಳಿಸಿದೆ. ರಾಜ್ಯ ಸರ್ಕಾರದ ಬಹುದಿನದ ಬೇಡಿಕೆಯಾಗಿದ್ದ ಹುಬ್ಬಳ್ಳಿಯಿಂದ ಹೈದರಾಬಾದ್ ನಗರಕ್ಕೆ ವಿಮಾನ ಯಾನ ಸೇವೆಗೆ ಕೇಂದ್ರ ಗಣಿ ಮತ್ತು ಕಲ್ಲಿದ್ದಲು ಸಚಿವರಾದ ಪ್ರಹ್ಲಾದ್ ಜೋಶಿ ಅವರು ಮಾಚ್ 31 ರಂದು ಚಾಲನೆ ನೀಡಿದರು. ಈಗಿನ ರನ್ ವೇ ಟ್ರಾಕ್ ಅನ್ನು ವಿಸ್ತಿರಿಸಿದ ನಂತರ ಹುಬ್ಬಳ್ಳಿ ವಿಮಾನ ನಿಲ್ದಾಣದಿಂದ ನೇರವಾಗಿ ಅಂತರರಾಷ್ಟ್ರೀಯ ವಿಮಾನ ಸೇವೆಯನ್ನು ಆರಂಭಿಸಲು ಸರ್ಕಾರ ನಿರ್ಧರಿಸಿದೆ.

ನಿಸರ್ಗವನ್ನು ಕಾಪಾಡುವುದು ನಮ್ಮ ಮೂಲಭೂತ ಕರ್ತವ್ಯಗಳಲ್ಲಿ ಒಂದು. ರಾಜ್ಯದಲ್ಲಿ ವರ್ಷದಿಂದ ವರ್ಷಕ್ಕೆ ಬರ ಪರಿಸ್ಥಿತಿ ಎದುರಾಗುತ್ತಿರುವುದರಿಂದ ಮುಂದೆ ಜಲಕ್ಷಾಮವನ್ನು ಖಂಡಿತವಾಗಿ ಎದುರಿಸಬೇಕಾಗುತ್ತದೆ. ಇದನ್ನು ಮನಗಂಡಿರುವ ಪ್ರಧಾನಿ ನರೇಂದ್ರ ಮೋದಿ ಅವರು 'ಮಳೆ ನೀರು ಹಿಡಿಯಿರಿ' (ಕ್ಯಾಚ್ ದ ರೈನ್) ಸಲಹೆಯನ್ನು ನೀಡಿದ್ದಾರೆ. ಅವರ ಸಲಹೆಯನ್ನು ಸಾಕಾರಗೊಳಿಸುವ ನಿಟ್ಟಿನಲ್ಲಿ ಗ್ರಾಮೀಣಾಭಿವೃದ್ಧಿ ಇಲಾಖೆ ವತಿಯಿಂದ 'ಜಲಶಕ್ತಿ ಅಭಿಯಾನ'ಕ್ಕೆ ಏಪ್ರಿಲ್ 9 ರಂದು ರಾಜ್ಯದಲ್ಲೂ ಚಾಲನೆ ನೀಡಲಾಯಿತು. ಗ್ರಾಮಾಂತರ ಪ್ರದೇಶಗಳ ಕೆರೆ, ಕಲ್ಯಾಣಿ, ಮತ್ತು ಗೋಕಟ್ಟೆಗಳನ್ನು ಪುನಶ್ಚೇತನಗೊಳಿಸುವ ಮೂಲಕ ಅಂತರ್ಜಲ ಹೆಚ್ಚಿಸುವುದು ಜಲಶಕ್ತಿ ಅಭಿಯಾನದ ಉದ್ದೇಶವಾಗಿದೆ.

ಕಲ್ಯಾಣ ಕರ್ನಾಟಕ ಭಾಗದಲ್ಲಿ ಆರೋಗ್ಯ ಸೇವೆ ಸವಲತ್ತುಗಳ ಸುಧಾರಣೆ ನಿಟ್ಟಿನಲ್ಲಿ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಅವರು ವೈದ್ಯಕೀಯ, ತಾಂತ್ರಿಕ ತಜ್ಞರನ್ನು ಒಳಗೊಂಡಂತೆ ವಿವಿಧ ಹುದ್ದೆಗಳನ್ನು ತುಂಬುವ ಸಲುವಾಗಿ ವಿಶೇಷ ನೇಮಕಕ್ಕೆ ನಿರ್ಧರಿಸಿ ಕರಡು ನಿಯಾವಳಿಗಳ ಅಧಿಸೂಚನೆ ಹೊರಡಿಸಿ, ಆ ಭಾಗದ ಜನರಿಗೆ ಯುಗಾದಿ ಕೊಡುಗೆ ನೀಡಿದ್ದಾರೆ. ಇದರಿಂದ ಏಳು ಜಿಲ್ಲೆಗಳ ನಿರುದ್ಯೋಗಿಗಳಿಗೆ ವಿಶೇಷ ನೇಮಕದಡಿ ಉದ್ಯೋಗದ ಅವಕಾಶ ದೊರಕಲಿದೆ. ಈ ಪ್ರಕ್ರಿಯೆಯನ್ನು ಶೀಘ್ರದಲ್ಲಿ ಪೂರ್ಣಗೊಳಿಸಲು ವಿಶೇಷ ನೇಮಕ ಸಮಿತಿಯನ್ನು ರಚಿಸಲಾಗಿದೆ.

ತುಮಕೂರು-ಶಿವಮೊಗ್ಗ ರಾಷ್ಟ್ರೀಯ ಹೆದ್ದಾರಿ 206 ರ ಚತುಷ್ಪಥ ರಸ್ತೆ ಯೋಜನೆಗೆ ಕೇಂದ್ರ ಸರ್ಕಾರವು ಅನುಮೋದನೆ ನೀಡಿರುವುದರಿಂದ ಮಲೆನಾಡು ಭಾಗದ ಸಂಪರ್ಕವು ಇನ್ನಷ್ಟು ಸುಗಮವಾಗಲಿದೆ. ಕರ್ನಾಟಕ ರಾಜ್ಯವು ದೇಶದಲ್ಲಿ ಎಲೆಕ್ಟ್ರಿಕ್ ವಾಹನಗಳ ನೀತಿಯನ್ನು ಜಾರಿಗೆ ತಂದ ಮೊಟ್ಟ ಮೊದಲ ರಾಜ್ಯ ಎಂಬ ಖ್ಯಾತಿಯನ್ನು ಪಡೆದುಕೊಂಡಿದೆ. ರಾಮನಗರ ಜಿಲ್ಲೆಯ 500 ಎಕರೆ ಪ್ರದೇಶದಲ್ಲಿ ನಿರ್ಮಿಸಲಾಗುತ್ತಿರುವ ಎಲೆಕ್ಟ್ರಿಕ್ ವಾಹನಗಳ ಕ್ಲಸ್ಟರ್‌ನಲ್ಲಿ ಹೂಡಿಕೆ ಮಾಡಲು ಉತ್ಸುಕರಾಗಿರುವ ಅಮೆರಿಕಾದ ಟ್ರೈಟನ್ ಎಲೆಕ್ಟ್ರಿಕ್ ಸಂಸ್ಥೆಯ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳಾದ ಹಿಮಾಂಶು ಪಟೇಲ್ ಅವರೊಂದಿಗೆ ಏಪ್ರಿಲ್ 9 ರಂದು ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಅವರು ರಾಜ್ಯದಲ್ಲಿ ಹೂಡಿಕೆಯ ಅವಕಾಶದ ಬಗ್ಗೆ ವರ್ಚುಯಲ್ ಸಭೆಯನ್ನು ನಡೆಸಿದರು. ಸರ್ಕಾರ ಕೋವಿಡ್-19 ಸಂಕಷ್ಟದಲ್ಲೂ ಇಷ್ಟೆಲ್ಲಾ ಅಭಿವೃದ್ಧಿ ಕೆಲಸಗಳನ್ನು ಮಾಡುತ್ತಿರುವಾಗ ಸಾರ್ವಜನಿಕರು ಸರ್ಕಾರದೊಂದಿಗೆ ಸಹಕರಿಸಬೇಕು. ಜನರ ಸಹಕಾರವಿಲ್ಲದಿದ್ದರೆ ಕಂಡಿತವಾಗಿ ಕೋವಿಡ್‌ನಿಂದ ಮುಕ್ತರಾಗಲು ಸಾಧ್ಯವಿಲ್ಲ. ಹಾಗಾಗಿ ಕೋವಿಡ್ ಮಾರ್ಗಸೂಚಿಯನ್ನು ತಪ್ಪದೇ ಪಾಲಿಸುವಂತೆ ನಾನು ಓದುಗರಲ್ಲಿ ಮತ್ತೊಮ್ಮೆ ವಿನಂತಿ ಮಾಡುತ್ತೇನೆ.

**ಓದುಗರಿಗೆಲ್ಲರಿಗೂ ಕಾರ್ಮಿಕ ದಿನಾಚರಣೆ ಮತ್ತು ಬಸವ ಜಯಂತಿಯ ಹಾರ್ದಿಕ ಶುಭಾಶಯಗಳು...**

**ಡಾ|| ಪಿ. ಎಸ್. ಹರ್ಷ, ಐಪಿಎಸ್**
**ಪ್ರಧಾನ ಸಂಪಾದಕರು**

**ಪ್ರಧಾನ ಸಂಪಾದಕರು,** ವಾರ್ತಾ ಜನಪದ, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ,
#17, ವಾರ್ತಾ ಸೌಧ, ಭಗವಾನ್ ಮಹಾವೀರ ರಸ್ತೆ, ಬೆಂಗಳೂರು – 560 001. email : feedbackjanapada@gmail.com

Download From : www.kpscvaani.com



## ಕಾರ್ಮಿಕರ ಕಲ್ಯಾಣಕ್ಕಾಗಿ

# ಕಾರ್ಯಪ್ರವೃತ್ತವಾಗಿರುವ ಕಾರ್ಮಿಕ ಇಲಾಖೆ

**ಯೋಧ ಕ್ಷೇಮವಾಗಿದ್ದರೆ ದೇಶ ಸುರಕ್ಷಿತವಾಗಿರುತ್ತದೆ, ರೈತ ಸುಭಿಕ್ಷವಾಗಿದ್ದರೆ ಸಂವೃದ್ಧಿ ನೆಲೆಸುತ್ತದೆ, ಕಾರ್ಮಿಕ ಖುಷಿಯಾಗಿದ್ದರೆ ಉತ್ಪಾದನೆ ಅಭಿವೃದ್ಧಿಯಾಗುತ್ತದೆ.**

ಉಮೇಶ್ ಕೋಲಿಗೆರೆ



ಸೈನಿಕರು ಹಾಗೂ ರೈತರಂತೆ ದೇಶದ ಶ್ರೇಯೋಭಿವೃದ್ಧಿಗೆ ಕಾರ್ಮಿಕರು ಪ್ರಮುಖ ಪಾತ್ರವಹಿಸುತ್ತಿದ್ದಾರೆ. ರಾಜ್ಯದಲ್ಲಿ 712 ಬೃಹತ್ ಕೈಗಾರಿಕೆಗಳಲ್ಲಿ 5,02,407 ಕಾರ್ಮಿಕರು ದುಡಿಯುತ್ತಿದ್ದರೆ, ಸೂಕ್ಷ್ಮ, ಸಣ್ಣ ಮತ್ತು ಮಧ್ಯಮ ಕೈಗಾರಿಕೆಗಳಲ್ಲಿ ಪ್ರತ್ಯಕ್ಷವಾಗಿ ಸುಮಾರು 70 ಲಕ್ಷ ಕಾರ್ಮಿಕರಿದ್ದಾರೆ, ಪರೋಕ್ಷವಾಗಿ ಲಕ್ಷಾಂತರ ಅವಲಂಬಿತರಿದ್ದಾರೆ. ಕೃಷಿಯಲ್ಲಿ 71.55 ಲಕ್ಷ, ನಿರ್ಮಾಣ ಕಾಮಗಾರಿಗಳಲ್ಲಿ 29 ಲಕ್ಷ ಕಾರ್ಮಿಕರು ಕೆಲಸ ಮಾಡುತ್ತಿದ್ದಾರೆ.

ಅಸಂಘಟಿತ ವಲಯದಲ್ಲಿ ಲಕ್ಷಾಂತರ ಕಾರ್ಮಿಕರು ಬೆವರು ಸುರಿಸುತ್ತಿದ್ದಾರೆ. ಒಟ್ಟು ಜನಸಂಖ್ಯೆಯಲ್ಲಿ ಶೇ.75ಕ್ಕಿಂತಲೂ ಹೆಚ್ಚಿನ ಜನ ಕಾರ್ಮಿಕ ವಲಯದಲ್ಲಿದೆ. ಉತ್ಪಾದನೆ ಅಥವಾ ಸೇವಾ ವಲಯ ಯಾವುದೇ ಇದ್ದರೂ ಅಲ್ಲಿ ಕಾರ್ಮಿಕರು ಇರಲೇ ಬೇಕಿದೆ.

ಕರ್ನಾಟಕ ರಾಜ್ಯದಲ್ಲಿ ವಾರ್ಷಿಕ 33.81 ಬಿಲಿಯನ್ ಅಮೆರಿಕನ್ ಡಾಲರ್ ಮೊತ್ತದ ಉತ್ಪಾದನೆಯಿದೆ. ಅದಕ್ಕೆ ಪ್ರಮುಖ ಭಾಗಿದಾರರು ಕಾರ್ಮಿಕರೇ ಆಗಿದ್ದಾರೆ. ಕೈಗಾರಿಕೆ ಮತ್ತು ಸೇವಾ ವಲಯದಲ್ಲಿ ಕಾಲಕಾಲಕ್ಕೆ ಏರಿಳಿತಗಳಾಗುತ್ತವೆ. ಏನೇ ಆದರೂ ಜಿಡಿಪಿಗೆ ಅತಿ ಹೆಚ್ಚು ಕೊಡುಗೆ ನೀಡುತ್ತಿರುವುದು ಕೈಗಾರಿಕಾ ವಲಯ. ರಾಜ್ಯದ ಕೈಗಾರಿಕಾ ಕ್ಷೇತ್ರ ಶೇ.5.5ರ ಅಭಿವೃದ್ಧಿ ದರವನ್ನು ಕಾಯ್ದುಕೊಂಡಿದೆ. ಕೈಗಾರಿಕೆ ನಂತರದಲ್ಲಿ ಕೃಷಿ ಕ್ಷೇತ್ರ ಜಿಡಿಪಿಗೆ ಹೆಚ್ಚಿನ ಪಾಲು ನೀಡುತ್ತಿದೆ. ಕೃಷಿ ಕ್ಷೇತ್ರಕ್ಕಂತೂ ಕಾರ್ಮಿಕರು ಅತ್ಯಗತ್ಯ ಹಾಗೂ ಅನಿವಾರ್ಯವಾಗಿದ್ದಾರೆ. ಆದರೂ ಕೃಷಿ ಕಾರ್ಮಿಕರನ್ನು ನೋಂದಾಯಿಸಿ ಅಧಿಕೃತ ಮಾನ್ಯತೆ ನೀಡುವ ವ್ಯವಸ್ಥೆ ಈವರೆಗೂ ಜಾರಿಗೆ ಬಂದಿಲ್ಲ ಎಂಬ ವಿಷಾದವೂ ಇದೆ.

ಮೇ 1ರಂದು ವಿಶ್ವ ಕಾರ್ಮಿಕ ದಿನಾಚರಣೆ ನಡೆಯುತ್ತದೆ. ಜಗತ್ತಿನಾದ್ಯಂತ ಬಹುತೇಕ ದೇಶಗಳು ಅಂದು ಕಾರ್ಮಿಕರಿಗೆ ನಮಿಸುತ್ತವೆ. ಕೋವಿಡ್–19ರ ದುರಿತ ಕಾಲದಲ್ಲಿ ಕಾರ್ಮಿಕರ ಹಿತ ರಕ್ಷಣೆ ಎಲ್ಲಕ್ಕಿಂತ ಬಹುಮುಖ್ಯವಾಗಿದೆ. ಕರ್ನಾಟಕ ಅಪರಿಮಿತವಾದ ನೈಸರ್ಗಿಕ ಸಂಪತ್ತಿನ ಜೊತೆಗೆ ಅಸಂಖ್ಯವಾದ ಮಾನವ ಸಂಪನ್ಮೂಲವನ್ನು ಹೊಂದಿದೆ. ದುಡಿಮೆಗೆ ತಕ್ಕ ಪ್ರತಿಫಲ ಸಿಗಲಿ ಬಿಡಲಿ ಆ ಬಗ್ಗೆ ಹೆಚ್ಚು ಯೋಚಿಸದೆ ಶ್ರಮಿಕ ವರ್ಗ ತನ್ನ ಪಾಲಿನ ಕರ್ತವ್ಯವನ್ನು ಪ್ರಾಮಾಣಿಕವಾಗಿ ನಿಭಾಯಿಸಿಕೊಂಡು ಬರುತ್ತಿದೆ. ಅದರಿಂದಾಗಿಯೇ ಕರ್ನಾಟಕ ಬಂಡವಾಳ ಹೂಡಿಕೆ ಆಕರ್ಷಣೆಯಲ್ಲಿ ಮುಂಚೂಣಿಯಲ್ಲಿದೆ.

ವಿದೇಶಿ ಬಂಡವಾಳವಿರಲಿ, ದೇಶಿಯ ಹೂಡಿಕೆಯಿರಲಿ ಮೊದಲು ಕೇಳಿ ಬರುವ ಹೆಸರು ಕರ್ನಾಟಕ, ಅದರಲ್ಲೂ ಬೆಂಗಳೂರು. ಅದಕ್ಕೆ ಕಾರಣ ಇಲ್ಲಿನ ಮಾನವ ಸಂಪನ್ಮೂಲ. ಕೌಶಲ್ಯ ಭರಿತ ಕಾರ್ಮಿಕ ಶಕ್ತಿ. ಕೊರೊನಾ ನಂತರ ಚೀನಾ ದೇಶದಿಂದ ಬಂಡವಾಳ ವಾಪಾಸ್ ತೆಗೆಯುತ್ತಿರುವ ಬಹುರಾಷ್ಟ್ರೀಯ ಕಂಪನಿಗಳು ಹೂಡಿಕೆಗೆ ಆಯ್ದುಕೊಳ್ಳುತ್ತಿರುವುದು ಭಾರತವನ್ನು, ಹಾಗಾಗಿ ಕರ್ನಾಟಕದ ಮೇಲೆ ಹೆಚ್ಚಿನ ನಿರೀಕ್ಷೆಗಳಿವೆ. ಮತ್ತಷ್ಟು ಉದ್ಯೋಗಗಳು ಸೃಷ್ಟಿಯಾಗುವ ನಿರೀಕ್ಷೆಗಳಿವೆ.

ಕೈಗಾರಿಕೆಗಳಿಗೆ ಪೂರಕವಾಗಿ ಕಾರ್ಮಿಕ ಶಕ್ತಿಯನ್ನು ಸೃಷ್ಟಿಸಲು ಸರ್ಕಾರ ಹಲವು ರೀತಿಯ ಯೋಜನೆಗಳನ್ನು ಹಮ್ಮಿಕೊಳ್ಳುತ್ತಿದೆ. ಶಾಲಾ ಕಾಲೇಜು ಹಂತದಲ್ಲೇ ಕೈಗಾರಿಕೆಗೆ ಅಗತ್ಯವಾದ ಕೌಶಲ್ಯ ತರಬೇತಿ ನೀಡಲು, ಪಠ್ಯದಲ್ಲೇ ತಾಂತ್ರಿಕ ಅಂಶಗಳನ್ನು ಸೇರಿಸಲು ಪ್ರಯತ್ನಗಳು ನಡೆಯುತ್ತಿವೆ. ಜಾಗತಿಕರಣ, ಉದಾರಿಕರಣದಿಂದಾಗಿ ಕೈಗಾರಿಕೆ ಮತ್ತು ಸೇವಾ ವಲಯದಲ್ಲಿ ಸಾಕಷ್ಟು ಉದ್ಯೋಗವಕಾಶಗಳು ಸೃಷ್ಟಿಯಾಗುತ್ತಿವೆ. ಬಿಹಾರ, ಉತ್ತರ ಪ್ರದೇಶ, ಮಧ್ಯ ಪ್ರದೇಶ, ಕೇರಳ, ಅಸ್ಸಾಂ, ಪಶ್ಚಿಮ ಬಂಗಾಳ ಸೇರಿದಂತೆ ದೇಶದ ನಾನಾ ರಾಜ್ಯಗಳಿಂದ ಉದ್ಯೋಗ ಅರಸಿ ರಾಜ್ಯಕ್ಕೆ ಬಂದಿದ್ದಾರೆ.

ಊರು ಯಾವುದೇ ಇರಲಿ ಇಲ್ಲಿಗೆ ಬಂದ ಮೇಲೆ ಅವರು ನಮ್ಮವರೆ ಎಂಬ



**ಈ ವರ್ಷದ ಬಜೆಟ್‌ನಲ್ಲಿ ಕಟ್ಟಡ ಕಾರ್ಮಿಕರ ಮಕ್ಕಳಿಗಾಗಿ 100 ಕಿತ್ತೂರು ರಾಣಿ ಚೆನ್ನಮ್ಮ ಶಿಶುಪಾಲನಾ ಕೇಂದ್ರಗಳನ್ನು ಸ್ಥಾಪಿಸಲು ನಿರ್ಧರಿಸಲಾಗಿದೆ. ಕಟ್ಟಡ ಕಾರ್ಮಿಕರು ಮತ್ತು ಅವರ ಅವಲಂಬಿತರ ವೈದ್ಯಕೀಯ ತಪಾಸಣೆ ಮತ್ತು ಚಿಕಿತ್ಸೆಗೆ ಆಯ್ದ ಕಾರ್ಯನಿರ್ವಹಣಾ ಸ್ಥಳಗಳಲ್ಲಿ 25 ಸಂಚಾರಿ ಆರೋಗ್ಯ ತಪಾಸಣಾ ಕೇಂದ್ರಗಳನ್ನು ಸ್ಥಾಪಿಸಲು ಘೋಷಿಸಲಾಗಿದೆ.**

### ಕಾರ್ಮಿಕ ಸ್ನೇಹಿ ಯೋಜನೆಗಳು:

ಕರ್ನಾಟಕ ಕಾರ್ಮಿಕ ಇಲಾಖೆ ಸರ್ಕಾರದ ಅತ್ಯಂತ ಹಳೆಯ ನಿರ್ದೇಶನಾಲಯಗಳಲ್ಲಿ ಒಂದಾಗಿದೆ. ಕೈಗಾರಿಕೆಗಳ ಬೆಳವಣಿಗೆಗೆ ಪೂರಕ ವಾತಾವರಣ ಸೃಷ್ಟಿಸುವ ಜೊತೆ ಕಾರ್ಮಿಕ ಹಿತರಕ್ಷಣೆಯ ಜವಾಬ್ದಾರಿಯನ್ನೂ ಕಾರ್ಮಿಕ ಇಲಾಖೆ ಸಮಾನಂತರವಾಗಿ ಸಮರ್ಥವಾಗಿ ನಿಭಾಯಿಸಿಕೊಂಡು ಬರುತ್ತಿದೆ. ನಾಲ್ಕು ವಿಭಾಗಗಳಾಗಿ ಕೆಲಸ ಮಾಡುತ್ತಿರುವ ಇಲಾಖೆ ಸರ್ವಜನ ಹಿತಾಯ, ಸರ್ವ ಜನ ಸುಖಾಯ ಸಿದ್ಧಾಂತವನ್ನು ಪಾಲನೆ ಮಾಡುತ್ತಿದೆ. ಹೀಗಾಗಿ ಬಂಡಾಳ ಹೂಡಿಕೆ ಮಾಡುವವರಿಗೆ ಕಾರ್ಮಿಕರ ಸಂಘರ್ಷದಿಂದ ಹೆಚ್ಚಿನ ತೊಂದರೆಯಾಗದೆ ಕಾಲ ಕಾಲಕ್ಕೆ ಕ್ರಮಗಳನ್ನು ಕೈಗೊಳ್ಳುತ್ತಿದೆ.

Download From : www.kpscvaani.com

ಉದಾರತೆ ಕನ್ನಡಿಗರದು. ಅದಕ್ಕಾಗಿಯೇ ಕೋವಿಡ್ ಲಾಕ್‌ಡೌನ್ ಕಾಲದಲ್ಲಿ ತವರಿಗೆ ವಾಪಾಸ್ಸಾಗಿದ್ದ ಲಕ್ಷಾಂತರ ಕಾರ್ಮಿಕರು ಇಲ್ಲಿನ ಸ್ನೇಹಮಯ ವಾತಾವರಣಕ್ಕೆ ಮನಸೋತು ಮತ್ತೆ ರಾಜ್ಯಕ್ಕೆ ವಾಪಾಸ್ಸಾಗಿದ್ದಾರೆ. ಲಾಕ್‌ಡೌನ್ ವೇಳೆ ಕಾರ್ಮಿಕರು ನಡೆದುಕೊಂಡೇ ತಮ್ಮ ಊರುಗಳತ್ತ ಪ್ರಯಾಣ ಮಾಡಿದಾಗ ಅವರು ಮತ್ತೆ ಉದ್ಯೋಗ ಕೇಳಿಕೊಂಡು ಕನ್ನಡನಾಡಿಗೆ ಬರುವುದಿಲ್ಲವೇನೋ ಎಂಬ ಅನುಮಾನ ಕಾಡಿತ್ತು. ಆದರೆ ಅದು ಸುಳ್ಳಾಗಿದೆ. ಕಾರ್ಮಿಕರು ಮರಳಿದ್ದರಿಂದ ಕೈಗಾರಿಕೆ, ನಿರ್ಮಾಣ ಹಾಗೂ ಸೇವಾ ವಲಯದ ಚಟುವಟಿಕೆಗಳು ಮತ್ತಷ್ಟು ಚುರುಕುಗೊಂಡಿತು.

ಕೋವಿಡ್–19 ಸಂದರ್ಭದಲ್ಲಿ ಎಲ್ಲೆಡೆ ಭಾರೀ ಆತಂಕವಿತ್ತು. ಉದ್ಯಮಗಳು ನಷ್ಟದಿಂದ ಕಂಗಾಲಾಗಿದ್ದವು. ಉದ್ಯೋಗ ಸೃಷ್ಟಿ, ಬಂಡವಾಳ ಹೂಡಿಕೆ ಕ್ಷೀಣಿಸಿತ್ತು. ಭವಿಷ್ಯದ ಬಗ್ಗೆ ದೊಡ್ಡ ಪ್ರಶ್ನೆಯೇ ಎದುರಾಗಿತ್ತು. ಆದರೆ ಲಾಕ್‌ಡೌನ್ ತೆರವಾದ ಬಳಿಕ ನಿರೀಕ್ಷೆಗೂ ಮೀರಿ ರಾಜ್ಯದ ಉದ್ಯಮ ವಲಯ ಚೇತರಿಸಿಕೊಂಡಿದೆ. ಸರ್ಕಾರಗಳ ವಿವಿಧ ಪ್ಯಾಕೇಜ್‌ಗಳು, ಸೌಲಭ್ಯಗಳು ಆರ್ಥಿಕ ಚಟುವಟಿಕೆಗಳನ್ನು ಸಹಜ ಸ್ಥಿತಿಗೆ ತರುವಲ್ಲಿ ಯಶಸ್ವಿಯಾಗಿವೆ.

ಕೊರೊನಾ ಕಾಲಘಟ್ಟದಲ್ಲಿ ದೇಶದ ಇತರ ರಾಜ್ಯಗಳಲ್ಲಿ ಬಂಡವಾಳ ಹೂಡಿಕೆಯಲ್ಲಿ ಹಿನ್ನಡೆಯಾಗಿತ್ತು. ಅದಕ್ಕೆ ತದ್ವಿರುದ್ಧವಾಗಿ ಕರ್ನಾಟಕದಲ್ಲಿ ಅತಿ ಹೆಚ್ಚು ಬಂಡವಾಳ ಹೂಡಿಕೆಯಾಗಿ ಮೊದಲ ಸ್ಥಾನ ಪಡೆದಿದೆ. 2020ರ ಜನವರಿಯಿಂದ ನವೆಂಬರ್‌ವರೆಗಿನ ಮಾಹಿತಿಯ ಪ್ರಕಾರ ದೇಶದಲ್ಲಿ 1308 ಪ್ರಸ್ತಾವನೆಗಳು ಬಂದಿದ್ದು, ಸುಮಾರು 4 ಲಕ್ಷ ಕೋಟಿ ಬಂಡವಾಳ ಹೂಡಿಕೆಯ ನಿರೀಕ್ಷೆಯಿದೆ. ಅದರಲ್ಲಿ ಕರ್ನಾಟಕಕ್ಕೆ 103 ಪ್ರಸ್ತಾವನೆಗಳು ಬಂದಿದ್ದು, 1.60 ಲಕ್ಷ ಕೋಟಿ ರೂಪಾಯಿ ಬಂಡವಾಳ ಹೂಡಿಕೆಯಾಗುವ ಲೆಕ್ಕಚಾರ ಕೇಳಿ ಬಂದಿದೆ. ದೇಶದ ಒಟ್ಟು ಹೂಡಿಕೆಯಲ್ಲಿ ಕರ್ನಾಟಕ ಶೇ.41ರಷ್ಟು ಪಾಲು ಪಡೆದಿದೆ. ವಿದೇಶಿ ಬಂಡವಾಳವೂ ನಿರೀಕ್ಷೆ ಮೀರಿ ಹರಿದು ಬಂದಿದ್ದು, ಸುಮಾರು 27 ಸಾವಿರ ಕೋಟಿ ಹೂಡಿಕೆಯಾಗಿದೆ. ಎಫ್‌ಡಿಐನಲ್ಲೂ ಕರ್ನಾಟಕ ದೇಶದಲ್ಲೇ ಎರಡನೇ ಸ್ಥಾನದಲ್ಲಿದೆ. ಈ ಎಲ್ಲಾ ಉದ್ಯಮಗಳು ಆರಂಭಗೊಂಡರೆ ಇನ್ನೂ ಐದು ಲಕ್ಷ ಉದ್ಯೋಗಾವಕಾಶಗಳು ಹೆಚ್ಚಾಗಲಿವೆ.

ದೇಶ ವಿದೇಶಗಳಿಂದ ಉದ್ಯಮಿಗಳು ಕರ್ನಾಟಕದಲ್ಲಿ ಬಂಡವಾಳ ಹೂಡಿಕೆ ಮಾಡಲು ಆಸಕ್ತಿ ತೋರಿಸುತ್ತಿರುವುದಕ್ಕೆ ಕರ್ನಾಟಕದಲ್ಲಿರುವ ಕೈಗಾರಿಕಾ ಸ್ನೇಹಿ ವಾತಾವರಣ ಒಂದು ಕಾರಣವಾದರೆ, ದುಡಿಯುವ ವರ್ಗದ ಧಾರಣ ಸಾಮರ್ಥ್ಯ ಮತ್ತೊಂದು ಕಾರಣವಾಗಿದೆ. ಬೇರೆ ರಾಜ್ಯಗಳಿಗೆ ಹೋಲಿಸಿದರೆ ಕರ್ನಾಟಕದಲ್ಲಿ ಕಾರ್ಮಿಕ ವ್ಯಾಜ್ಯಗಳು ಕಡಿಮೆ ಇವೆ, ವಿವಿಧ ಕಾರ್ಮಿಕ ನ್ಯಾಯಾಲಯಗಳು ಮತ್ತು ಔದ್ಯೋಗಿಕ ನ್ಯಾಯಾಧೀಕರಣಗಳು 1722 ಐತೀರ್ಪುಗಳನ್ನು ನೀಡಿ ವಿವಾದಗಳನ್ನು ಬಗೆ ಹರಿಸಿವೆ. ಬೇರೆ ರಾಜ್ಯಗಳಲ್ಲಿ ಕನಿಷ್ಠವೆಂದರೂ 2 ಸಾವಿರಕ್ಕೂ ಹೆಚ್ಚು ಕಾರ್ಮಿಕ ವಿವಾದಗಳಿರುವುದು ಗಮನಾರ್ಹ.

### ಕರ್ನಾಟಕ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿ:

ಒಂದು ವರ್ಷದಲ್ಲಿ ಕನಿಷ್ಠ 90 ದಿನಗಳ ಕಾಲ ನಿರ್ಮಾಣ ಕಾಮಗಾರಿಗಳಲ್ಲಿ ಕೆಲಸ ಮಾಡಿದ 18 ರಿಂದ 60 ವರ್ಷದೊಳಗಿನ ಯಾವುದೇ ವ್ಯಕ್ತಿ ನಿರ್ಮಾಣ ಕಾರ್ಮಿಕರ ಮಂಡಳಿಯಲ್ಲಿ ನೋಂದಾಯಿಸಿಕೊಳ್ಳಬಹುದು.

ನಮೂನೆ 5ರ ಅರ್ಜಿಯ ಜೊತೆ ಉದ್ಯೋಗ ದೃಢಿಕರಣ ಪತ್ರ ಅಥವಾ ಸ್ವಯಂ ದೃಢಿಕರಣ ಪತ್ರ, ಮೂರು ಪಾಸ್‌ಪೋರ್ಟ್ ಅಳತೆಯ ಫೋಟೋಗಳು, ಆಧಾರ್ ಕಾರ್ಡ್, ವಯಸ್ಸಿನ ದಾಖಲೆಗಳ ಜೊತೆಗೆ ಕಾರ್ಮಿಕ ಅಧಿಕಾರಿಗಳು, ಹಿರಿಯ ಕಾರ್ಮಿಕ ನಿರೀಕ್ಷಕರು, ಕಾರ್ಮಿಕ ನಿರೀಕ್ಷಕರು, ಬೆಂಗಳೂರು ಮೆಟ್ರೋ ರೈಲು ನಿಗಮದ ಮುಖ್ಯ ಅಭಿಯಂತರರು, ಗ್ರಾಹಕ ಸೇವಾ ಕೇಂದ್ರಗಳಲ್ಲಿ ನೋಂದಾಯಿಸಿಕೊಳ್ಳಬುದಾಗಿದೆ.

ನಿರ್ಮಾಣ ಕಾರ್ಮಿಕರು ಮಂಡಳಿಯಲ್ಲಿ ನೋಂದಾಯಿಸಿಕೊಳ್ಳಲು ಕಾರ್ಮಿಕರು 2019ರವರೆಗೂ ಹೆಚ್ಚಿನ ಆಸಕ್ತಿ ತೋರಿಸಿರಲಿಲ್ಲ. ಕೊರೊನಾ ಸಂಕಷ್ಟ ಕಾಲದಲ್ಲಿ ಕಾರ್ಮಿಕರಿಗೆ ಸರ್ಕಾರ ಸ್ಪಂದಿಸಿದ ರೀತಿಯಿಂದ ಕಾರ್ಮಿಕರಲ್ಲಿ ವಿಶ್ವಾಸ ಹೆಚ್ಚಾಗಿದೆ. ಸದಸ್ಯತ್ವ ನೋಂದಣಿ ಪ್ರಮಾಣ ಗಣನೀಯವಾಗಿ ಹೆಚ್ಚಾಗಿದೆ. ಕಳೆದ ವರ್ಷದವರೆಗೂ 8 ಲಕ್ಷ ಇದ್ದ ಸದಸ್ಯರ ಸಂಖ್ಯೆ ಏಕಾಏಕಿ ನಾಲ್ಕು ಪಟ್ಟು ಹೆಚ್ಚಾಗಿದೆ. ಈ ವರ್ಷದ ಮಾರ್ಚ್‌ವರೆಗೆ 25.69 ಲಕ್ಷ ಮಂದಿ ಹಾಗೂ ವಿಶೇಷ ನೋಂದಣಿ ಅಭಿಯಾನದ ಮೂಲಕ 4 ಲಕ್ಷ ಸೇರಿ ಒಟ್ಟು 29.90 ಲಕ್ಷ ಕಾರ್ಮಿಕರು ನೋಂದಣಿ ಮಾಡಿಕೊಂಡಿದ್ದಾರೆ.

ನೋಂದಾಯಿತ ನಿರ್ಮಾಣ ಕಾರ್ಮಿಕರು 60 ವರ್ಷ ಮೀರಿದ್ದು ಮೂರು ವರ್ಷ ನಿರಂತರವಾಗಿ ಸದಸ್ಯತ್ವ ನವೀಕರಣ ಮಾಡಿಕೊಂಡಿದ್ದರೆ ಅವರಿಗೆ ಮಾಸಿಕ 2 ಸಾವಿರ ರೂಪಾಯಿ ಪಿಂಚಣೆ ನೀಡಲಾಗುತ್ತದೆ, ಪಿಂಚಣಿದಾರರು ಮೃತಪಟ್ಟರೆ ಅವರ ಅವಲಂಬಿತ ಪತಿ/ಪತ್ನಿಗೆ ಒಂದು ಸಾವಿರ ರೂಪಾಯಿ ನೀಡಲಾಗುತ್ತದೆ. ನಿರ್ಮಾಣ ಕಾಮಗಾರಿಯ ವೇಳೆ ಅವಗಡಕ್ಕೆ ಸಿಲುಕಿ ಅಂಗವಿಕಲರಾದರೆ ಅವರಿಗೂ ಮಾಸಿಕ 2 ಸಾವಿರ ಪಿಂಚಣಿ ಲಭ್ಯವಾಗಲಿದೆ, ದುರ್ಬಲತೆಯ ಪ್ರಮಾಣ ಆಧರಿಸಿ ಎರಡು ಲಕ್ಷದವರೆಗೂ ಅನುಗ್ರಹ ರಾಶಿ ಸಹಾಯಧನ ನೀಡಲಾಗುತ್ತದೆ. ಕಾರ್ಮಿಕ ಗೃಹ ಭಾಗ್ಯ ಯೋಜನೆಯಡಿ 2 ಲಕ್ಷ ರೂಪಾಯಿ ಸಾಲಸೌಲಭ್ಯ ನೀಡಲಾಗುತ್ತದೆ. ತಾಯಿ ಲಕ್ಷ್ಮೀ ಬಾಂಡ್ ಮೂಲಕ ಮಹಿಳಾ ಫಲಾನುಭವಿಗೆ ಮೊದಲ ಎರಡು ಮಕ್ಕಳಿಗೆ ಆರ್ಥಿಕ ನೆರವು ನೀಡಲಾಗುತ್ತಿದೆ. ಹೆಣ್ಣು ಮಗುವಾದರೆ 30 ಸಾವಿರ, ಗಂಡು ಮಗುವಾದರೆ 20 ಸಾವಿರ ಹೆರಿಗೆ ಸೌಲಭ್ಯವಿದೆ.

ಕಾರ್ಮಿಕ ಆರೋಗ್ಯ ಭಾಗ್ಯ ಯೋಜನೆಯಡಿ 300 ರಿಂದ 10 ಸಾವಿರ ರೂಪಾಯಿವರೆಗೂ ಆರ್ಥಿಕ ನೆರವು ನೀಡುವ ಜೊತೆಗೆ, ಹೃದ್ರೋಗ, ಕಿಡ್ನಿ ಜೋಡಣೆ, ಡಯಾಲಿಸಿಸ್, ಅಪೆಂಡಿಕ್ಸ್, ಕ್ಯಾನ್ಸರ್ ಚಿಕಿತ್ಸೆ, ಕಣ್ಣಿನ ಶಸ್ತ್ರ ಚಿಕಿತ್ಸೆ, ಮೂಳೆ, ಗರ್ಭಕೋಶ ಸೇರಿದಂತೆ ಹಲವಾರು ರೋಗಗಳ ಚಿಕಿತ್ಸೆಗೆ ಎರಡು ಲಕ್ಷ ರೂಪಾಯಿವರೆಗೂ ನೆರವು ನೀಡುವ ಕಾರ್ಮಿಕ ಚಿಕಿತ್ಸಾ ಭಾಗ್ಯ ಯೋಜನೆಯೂ ಜಾರಿಯಲ್ಲಿದೆ.

ಮದುವೆ ವೇಳೆ 50 ಸಾವಿರ ರೂಪಾಯಿವರೆಗೂ ಆರ್ಥಿಕ ನೆರವು ನೀಡಲಾಗುತ್ತಿದೆ. ಮಹಿಳಾ ಫಲಾನುಭವಿಯ ಮಗುವಿನ ಶಾಲಾ ಪೂರ್ವ ಶಿಕ್ಷಣ ಮತ್ತು ಪೌಷ್ಠಿಕತೆಗಾಗಿ ಮೂರು ವರ್ಷಗಳವರೆಗೂ ವಾರ್ಷಿಕ ಆರು ಸಾವಿರ ರೂಪಾಯಿ, ಬೆಂಗಳೂರಿನಲ್ಲಿ ಕೆಲಸ ಮಾಡುವ ಗಾರ್ಮೆಂಟ್ಸ್ ನೌಕರರಿಗೆ ಬಸ್ ಪಾಸ್ ಸೌಲಭ್ಯವನ್ನು ಕಾರ್ಮಿಕ ಇಲಾಖೆ ಒದಗಿಸುತ್ತಿದೆ.

ನೋಂದಾಯಿತ ಕಟ್ಟಡ ನಿರ್ಮಾಣ ಕಾರ್ಮಿಕರಿಗೆ ಸ್ಟೌವ್ ಸಹಿತ ಎಲ್‌ಪಿಜಿ ಸಂಪರ್ಕ, ವಿದ್ಯಾಭ್ಯಾಸ ಮಾಡುತ್ತಿರುವ ಕಾರ್ಮಿಕರ ಇಬ್ಬರು ಮಕ್ಕಳಿಗೆ ಕೆಎಸ್‌ಆರ್‌ಟಿಸಿ ಬಸ್ ಪಾಸ್ ಸೌಲಭ್ಯ, ಕಲಿಕಾ ಭಾಗ್ಯ ಯೋಜನೆಯಡಿ ನರ್ಸರಿಯಿಂದ ಸ್ನಾತಕ್ಕೋತ್ತರ ಪದವಿವರೆಗೂ ಶೈಕ್ಷಣಿಕ ಸಹಾಯ, ಅಂತ್ಯಕ್ರಿಯೆಗೆ ನಾಲ್ಕು ಸಾವಿರ, ಅನುಗ್ರಹ ರಾಶಿಯಡಿ 50 ಸಾವಿರ ರೂಪಾಯಿ ಸಹಾಯಧನ ನೀಡುವ ಮಹತ್ವದ ಯೋಜನೆಗಳು ಜಾರಿಯಲ್ಲಿವೆ.

ಕಳೆದ ವರ್ಷ ಮಂಡಳಿ ಸುಮಾರು 1500 ಕೋಟಿ ಸುಂಕ ಸಂಗ್ರಹ ಮಾಡಿತ್ತು. ಸಂಪನ್ಮೂಲವನ್ನು ಹೆಚ್ಚಿಸಲು ನಿರ್ಮಾಣ ಹಂತದ ಕಟ್ಟಡಗಳಿಗೆ ಜಿಯೋ ಸ್ಪೇಷಿಯಲ್ ತಂತ್ರಜ್ಞಾನ ಅಳವಡಿಸಿ ಸುಂಕ ವಸೂಲಿಯನ್ನು ಹೆಚ್ಚಿಸಲು ನಿರ್ಧರಿಸಲಾಗಿದೆ.

ಕರ್ನಾಟಕ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿ 2020–21ನೇ ಸಾಲಿನಲ್ಲಿ 7,43,321 ಫಲಾನುಭವಿಗಳಿಗೆ 8,63,67,04,012 ರೂಪಾಯಿ ನೆರವನ್ನು ನೀಡಿದೆ. ಇದು ಹಿಂದಿನ ಎಲ್ಲಾ ಪ್ರಗತಿಗಿಂತ ಆರು ಪಟ್ಟು ಹೆಚ್ಚಾಗಿದೆ. 2007 ರಿಂದ 2013ವರೆಗೆ 15,973 ಮಂದಿಗೆ 8,95,92,249 ರೂ.ಗಳನ್ನು, 2013ರಿಂದ 2018ರವರೆಗೆ 2,64,414 ಫಲಾನುಭವಿಗಳಿಗೆ 2,81,01,37,740 ರೂ.ಗಳನ್ನು, 2018–19ನೇ ಸಾಲಿನಲ್ಲಿ 1,19,898 ಮಂದಿಗೆ, 2019–20ನೇ ಸಾಲಿನಲ್ಲಿ 1,51,498 ಫಲಾನುಭವಿಗಳಿಗೆ ನೆರವು ನೀಡಲಾಗಿದೆ. ಸುಮಾರು 2 ಲಕ್ಷ ಸಂಖ್ಯೆಯ ಒಳಗಿದ್ದ ಫಲಾನುಭವಿಗಳ ಸಂಖ್ಯೆ ಈ ವರ್ಷ 7 ಲಕ್ಷ ದಾಟಿರುವುದು ಸ್ವಾಗರ್ತಾಹ ಬೆಳವಣಿಗೆ. ■

## ಕರ್ನಾಟಕ ರಾಜ್ಯ ಅಸಂಘಟಿತ ಕಾರ್ಮಿಕರ ಸಾಮಾಜಿಕ ಭದ್ರತಾ ಮಂಡಳಿ:

ಕರ್ನಾಟಕದಲ್ಲಿ ಸಂಘಟಿತ ಕಾರ್ಮಿಕರ ಸಂಖ್ಯೆಗಿಂತ ಅಸಂಘಟಿತರ ಪ್ರಮಾಣ 10 ಪಟ್ಟು ಹೆಚ್ಚಿದೆ. ಅವರಿಗಾಗಿ ಮಂಡಳಿಯಿಂದ ಆರು ಪ್ರಮುಖ ಯೋಜನೆಗಳನ್ನು ಜಾರಿಗೊಳಿಸಲಾಗಿದೆ. ಕರ್ನಾಟಕ ರಾಜ್ಯ ಸಾರಿಗೆ ಕಾರ್ಮಿಕರ ಅಪಘಾತ ಪರಿಹಾರ ಯೋಜನೆ ಜಾರಿಗೆ ತರಲಾಗಿದ್ದು, ಈವರೆಗೂ 849 ಚಾಲಕರು ಮತ್ತು ಅವರ ಕುಟುಂಬದ ಸದಸ್ಯರಿಗೆ 25.35 ಕೋಟಿ ರೂಪಾಯಿ ಪರಿಹಾರ ವಿತರಣೆ ಮಾಡಲಾಗಿದೆ. ಅಪಘಾತದಲ್ಲಿ ನಿಧನರಾದ ಅಥವಾ ಸಂಪೂರ್ಣ ದುರ್ಬಲತೆ ಹೊಂದಿದ 491 ಮಂದಿಯ ಮಕ್ಕಳಿಗೆ ವಾರ್ಷಿಕ ತಲಾ 10 ಸಾವಿರದಂತೆ 49.10 ಲಕ್ಷ ರೂ.ಗಳ ಶೈಕ್ಷಣಿಕ ಸಹಾಯ ಧನ ನೀಡಲಾಗಿದೆ.

ಅಂಬೇಡ್ಕರ್ ಕಾರ್ಮಿಕ ಸಹಾಯ ಹಸ್ತ ಯೋಜನೆಯ ಅಡಿ ಮನೆಗೆಲಸದವರು, ಹಮಾಲರು, ಚಿಂದಿ ಆಯುವವರು, ಟೈಲರ್ಸ್, ಮೆಕ್ಯಾನಿಕ್, ಅಗಸರು, ಅಕ್ಕಸಾಲಿಗರು, ಕಮ್ಮಾರರು, ಕುಂಬಾರರು, ಕ್ಷೌರಿಕರು, ಭಟ್ಟಿ ಕಾರ್ಮಿಕರನ್ನು ನೋಂದಾಯಿಸಿ ಸ್ಮಾರ್ಟ್ ಕಾರ್ಡ್ ನೀಡಲು ಈವರೆಗೂ 1,99,710 ಅರ್ಜಿಗಳನ್ನು ಸ್ವೀಕರಿಸಲಾಗಿದೆ. ಅದರಲ್ಲಿ 1.26 ಲಕ್ಷ ಕಾರ್ಮಿಕರಿಗೆ ಸ್ಮಾರ್ಟ್ ಕಾರ್ಡ್ ವಿತರಿಸಲಾಗಿದೆ.

ಪ್ರಧಾನ ಮಂತ್ರಿ ಶ್ರಮಯೋಗಿ ಮಾನ್–ಧನ್ ಯೋಜನೆಯಡಿ 60 ವರ್ಷ ಪೂರೈಸಿದ 99,111 ಮಂದಿಯನ್ನು ನೋಂದಾಯಿಸಲಾಗಿದ್ದು, ಅವರಿಗೆ ಮಾಸಿಕ 3 ಸಾವಿರ ಪಿಂಚಣೆ ನೀಡಲು ಕ್ರಮ ಕೈಗೊಳ್ಳಲಾಗಿದೆ. ಸ್ವಯಂ ಉದ್ಯೋಗಿಗಳಿಗಾಗಿ ಜಾರಿಗೊಳಿಸಿದ ಹೊಸ ಪಿಂಚಣಿ ಯೋಜನೆಯಡಿ 1075 ಮಂದಿ ನೋಂದಣೆಯಾಗಿದ್ದಾರೆ. ಇವರಿಗೂ ಮಾಸಿಕ 3 ಸಾವಿರ ನೀಡಲು ಕ್ರಮ ಕೈಗೊಳ್ಳಲಾಗುತ್ತಿದೆ. ಕೋವಿಡ್ ಸಂದರ್ಭದಲ್ಲಿ ವೃತ್ತಿ ಮಾಡಲಾಗದೆ ಸಂಕಷ್ಟಕ್ಕೆ ಸಿಲುಕಿದ 1,41,602 ಮಂದಿ ಅಗಸರು ಮತ್ತು ಕ್ಷೌರಿಕರು ಮುಖ್ಯಮಂತ್ರಿ ಯಡಿಯೂರಪ್ಪ ಅವರು ಘೋಷಿಸಿದ ತಲಾ ಐದು ಸಾವಿರ ರೂಪಾಯಿ ಆರ್ಥಿಕ ನೆರವಿಗೆ ಅರ್ಜಿ ಸಲ್ಲಿಸಿದ್ದು, 1,21,760 ಮಂದಿಗೆ 60.88 ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡಲಾಗಿದ್ದು, ಉಳಿದವರಿಗೆ ನಿಯಮಾನುಸಾರ ನೆರವು ನೀಡಲು ಕ್ರಮ ಕೈಗೊಳ್ಳಲಾಗಿದೆ.

ಆಶಾದೀಪ ಯೋಜನೆಯಡಿ ಪರಿಶಿಷ್ಟ ಜಾತಿ ಮತ್ತು ಪಂಗಡದ 1459 ಅಭ್ಯರ್ಥಿಗಳಿಗೆ ಇಎಸ್‌ಐ ಮತ್ತು ಇಪಿಎಫ್ ಯೋಜನೆಯ ವಂತಿಗೆಗಾಗಿ 1459 ಮಂದಿ ಫಲಾನಭವಿಗಳಿಗೆ 89.41 ಲಕ್ಷ ರೂ.ಗಳನ್ನು ಬಿಡುಗಡೆ ಮಾಡಲಾಗಿದೆ. ತರಬೇತಿ ಪಡೆಯುತ್ತಿರುವ 1056 ಅಭ್ಯರ್ಥಿಗಳ ಶಿಷ್ಯ ವೇತನಕ್ಕಾಗಿ 1.03 ಕೋಟಿ ರೂ,ಗಳನ್ನು ಬಿಡುಗಡೆ ಮಾಡಲಾಗಿದೆ.

29 ವಿವಿಧ ಕಾರ್ಮಿಕ ಕಾನೂನುಗಳನ್ನು ಒಗ್ಗೂಡಿಸಿ ಕೇಂದ್ರ ಸರ್ಕಾರ ವೇತನ ಸಂಹಿತೆ, ಕೆಲಸ ನಿರ್ವಹಣೆಯ ವೇಳೆಯಲ್ಲಿನ ಸುರಕ್ಷತೆ, ಆರೋಗ್ಯ ಮತ್ತು ದೈಹಿಕ ಸಾಮರ್ಥ್ಯ ಸಂಹಿತೆ, ಐಆರ್ ಸಂಹಿತೆ, ಸಾಮಾಜಿಕ ಭದ್ರತಾ ಸಂಹಿತೆ ಸೇರಿ 4 ಕಾರ್ಮಿಕ ಸಂಹಿತೆಗಳನ್ನು ಜಾರಿಗೊಳಿಸಿದ್ದು, ಅದಕ್ಕೆ ರಾಜ್ಯ ಸರ್ಕಾರ ನಿಯಮಾವಳಿಗಳನ್ನು ರೂಪಿಸುತ್ತಿದೆ. ಮಂಗಳೂರು, ಹುಬ್ಬಳ್ಳಿ ನಗರಗಳಲ್ಲಿ ಕಾರ್ಮಿಕ ಭವನಗಳನ್ನು ನಿರ್ಮಿಸಲಾಗುತ್ತಿದ್ದು, ಮುಂದಿನ ವರ್ಷ ಮೈಸೂರು ಮತ್ತು ತುಮಕೂರು ನಗರಗಳಲ್ಲಿ ಕಾರ್ಮಿಕ ಕಚೇರಿಗಳನ್ನು ನಿರ್ಮಿಸಲು ಕ್ರಮ ಕೈಗೊಳ್ಳಲಾಗಿದೆ.

ವಾಣಿಜ್ಯ ಮತ್ತು ಅಂಗಡಿಗಳಲ್ಲಿ ಮಹಿಳೆಯರು ರಾತ್ರಿ ಪಾಳಿಯಲ್ಲಿ ಕೆಲಸ ಮಾಡಲು ಅವಕಾಶ ಕಲ್ಪಿಸಲಾಗಿದೆ. ಮಹಿಳೆಯರು ರಾತ್ರಿ ಪಾಳಿಯಲ್ಲಿ ಕೆಲಸ ಮಾಡುವಾಗ ಅವರಿಗೆ ಅಗತ್ಯ ಮೂಲಸೌಲಭ್ಯಗಳ ಜೊತೆಗೆ ಸೂಕ್ತ ಭದ್ರತಾ ವ್ಯವಸ್ಥೆ ಕಲ್ಪಿಸಲು ಸರ್ಕಾರ ಸೂಚನೆ ನೀಡಿದೆ. ಕಾರ್ಮಿಕ ಕಲ್ಯಾಣ ಮಂಡಳಿಯಿಂದ 27,557 ಫಲಾನುಭವಿಗಳಿಗೆ 10.68 ಕೋಟಿ ರೂಪಾಯಿಗಳ ನೆರವು ನೀಡಲಾಗಿದೆ. ಲಾಕ್‌ಡೌನ್ ಅವಧಿಯಲ್ಲಿ ಕಾರ್ಮಿಕ ಇಲಾಖೆ ಮಾರ್ಚ್ 30 ರಿಂದ ಜುಲೈ 22 ರವರೆಗೆ 26 ಕೋಟಿ ರೂಪಾಯಿ ಖರ್ಚು ಮಾಡಿ ಕಾರ್ಮಿಕರಿಗೆ ಆಹಾರದ ಪೊಟ್ಟಣಗಳನ್ನು ವಿತರಣೆ ಮಾಡಿದೆ.

Download From : www.kpscvaani.com




ಅಂತರ್ಜಲ ಹೆಚ್ಚಿಸುವ

# ಜಲಶಕ್ತಿ ಅಭಿಯಾನಕ್ಕೆ ರಾಜ್ಯದಲ್ಲಿ ಚಾಲನೆ

**ಭೂಮಿಗೆ ಬೀಳುವ ಮಳೆಯ ಒಂದು ಹನಿ ನೀರು ವ್ಯರ್ಥವಾಗದಂತೆ ಮತ್ತೆ ಭೂಮಿಯೊಳಗೆ ಇಂಗಿಸುವ ಮೂಲಕ ಅಂತರ್ಜಲವನ್ನು ಹೆಚ್ಚಿಸುವ ಉದ್ದೇಶದಿಂದ ಕೇಂದ್ರ ಸರ್ಕಾರವು ಜಲಶಕ್ತಿ ಅಭಿಯಾನ (ಕ್ಯಾಚ್ ದಿ ರೇನ್) ಎಂಬ ಮಹತ್ವಾಕಾಂಕ್ಷಿ ಯೋಜನೆಯನ್ನು ಜಾರಿಗೆ ತಂದಿದೆ.**

ಸ್ಮಿತಾ. ಆರ್

ಮಳೆ ನೀರನ್ನು ಸಮರ್ಪಕವಾಗಿ ಬಳಸಿಕೊಳ್ಳುವ ಸದುದ್ದೇಶದಿಂದ ಜಾರಿಗೆ ತರಲಾಗಿರುವ ಈ ಯೋಜನೆಗೆ ಮಾರ್ಚ್ 9 ರಂದು ರಾಜ್ಯದ ಹುಬ್ಬಳ್ಳಿಯಲ್ಲಿ ಚಾಲನೆ ನೀಡಲಾಯಿತು. ಮುಂಗಾರು ಆರಂಭವಾಗುವುದರೊಳಗೆ ಗ್ರಾಮೀಣ ಪ್ರದೇಶದ ಕೆರೆಗಳು, ಕಲ್ಯಾಣಿಗಳು ಸೇರಿದಂತೆ ವಿವಿಧ ಜಲಮೂಲಗಳ ಅತಿಕ್ರಮಣಗಳನ್ನು ತೆರವುಗೊಳಿಸಿ, ಹೂಳು ತೆಗಿಸಿ, ಪುನಶ್ಚೇತನಗೊಳಿಸಲು ನರೇಗಾ ಯೋಜನೆಯಡಿ ಈ ಯೋಜನೆಯನ್ನು ಕೈಗೆತ್ತಿಕೊಳ್ಳಲಾಗುತ್ತಿದೆ.

ಬೇಸಿಗೆ ಸಂದರ್ಭದಲ್ಲಿ ಜನ ಮತ್ತು ಜಾನುವಾರುಗಳು ನೀರಿಗಾಗಿ ಪರಿತಪಿಸುವುದು ಸಾಮಾನ್ಯವಾಗಿದೆ. ಅಕಾಲಿಕ ಮತ್ತು ಅನಿಶ್ಚಿತ ಮಳೆಯಿಂದಾಗಿ ಬೆಳೆಗಳು ಒಣಗಿ ರೈತರು ಸಂಕಷ್ಟಕ್ಕೆ ಸಿಲುಕುತ್ತಾರೆ. ನೀರಿನ ಅಭಾವ ತೀವ್ರಗೊಳ್ಳುತ್ತಿರುವ ಸಂದರ್ಭದಲ್ಲಿ ಜಲ ಸಂರಕ್ಷಣೆಯು ಪ್ರಥಮ ಆದ್ಯತೆ ಆಗಿದೆ.

ದೇಶದಲ್ಲಿ ಕುಸಿಯುತ್ತಿರುವ ಅಂತರ್ಜಲವನ್ನು ವೃದ್ಧಿಸಲು ಮಳೆ ನೀರು ಸಂಗ್ರಹ ಮಾಡುವುದು ಅಗತ್ಯ. ಜಲ ಸಂರಕ್ಷಣೆಯನ್ನು ವ್ಯಾಪಕ ಪ್ರಮಾಣದಲ್ಲಿ ಕೈಗೊಳ್ಳುವ ಉದ್ದೇಶದಿಂದ ಪ್ರಧಾನ ಮಂತ್ರಿಗಳು ದೇಶಾದ್ಯಂತ ಮುಂಗಾರು ಆರಂಭಕ್ಕೂ ಮುನ್ನ ನೀರಿನ ಮೂಲಗಳನ್ನು ಪುನಶ್ಚೇತನಗೊಳಿಸಿ ಮಳೆ ನೀರು ಸಂಗ್ರಹಕ್ಕಾಗಿ  ಮಾರ್ಚ್ 22 ರಂದು "**ಜಲಶಕ್ತಿ ಅಭಿಯಾನ – Catch the Rain**" ಅಭಿಯಾನಕ್ಕೆ ಚಾಲನೆ ನೀಡಿದರು.

ಅಭಿಯಾನದ ಅಡಿಯಲ್ಲಿ ಮುಂದಿನ 100 ದಿನಗಳಲ್ಲಿ ವ್ಯಾಪಕವಾಗಿ ಜಲ ಸಂರಕ್ಷಣೆ ಕಾಮಗಾರಿಗಳನ್ನು ಕೈಗೊಳ್ಳುವ ಕುರಿತು ಎಲ್ಲಾ ಜಿಲ್ಲೆಗಳ ಜಿಲ್ಲಾಧಿಕಾರಿಗಳು ಮತ್ತು ಜಿಲ್ಲಾ ಪಂಚಾಯತಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳಿಗೆ ಸೂಚನೆ ನೀಡಲಾಗಿದೆ.

ಹಬ್ಬಳ್ಳಿಯಲ್ಲಿ ಏಪ್ರಿಲ್ 9 ರಂದು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ, ಧಾರವಾಡ ಜಿಲ್ಲಾ ಪಂಚಾಯತ್ ಸಹಯೋಗದಲ್ಲಿ ರಾಜ್ಯಮಟ್ಟದ ಜಲಶಕ್ತಿ ಅಭಿಯಾನಕ್ಕೆ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರಾದ ಕೆ.ಎಸ್. ಈಶ್ವರಪ್ಪ ಅವರು ಚಾಲನೆ ನೀಡಿದರು. ಈ ಸಂದರ್ಭದಲ್ಲಿ ಕೇಂದ್ರ ಸಂಸದೀಯ ವ್ಯವಹಾರಗಳು, ಗಣಿ ಮತ್ತು ಕಲ್ಲಿದ್ದಲು ಸಚಿವರಾದ ಪ್ರಲ್ಹಾದ ಜೋಷಿ ಅವರು, ಕೈಗಾರಿಕೆ, ಸಾರ್ವಜನಿಕ ಉದ್ದಿಮೆ ಸಚಿವರಾದ ಜಗದೀಶ್ ಶೆಟ್ಟರ್ ಅವರು ಸೇರಿದಂತೆ ಸ್ಥಳೀಯ ಶಾಸಕರು, ಜನಪ್ರತಿನಿಧಿಗಳು, ಹಾಗೂ ವಿವಿಧ ಇಲಾಖೆಯ ಹಿರಿಯ ಅಧಿಕಾರಿಗಳು ಉಪಸ್ಥಿತರಿದ್ದರು. ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದ ಎಲ್ಲರೂ ಜಲಶಕ್ತಿ ಅಭಿಯಾನದಡಿ ಕಾಮಗಾರಿಗಳನ್ನು ನಿಗದಿತ ವೇಳೆಯೊಳಗೆ ಪೂರ್ಣಗೊಳಿಸುವುದಾಗಿ ಮತ್ತು ನೀರನ್ನು ಉಳಿಸುವುದಾಗಿ ಪ್ರತಿಜ್ಞಾವಿಧಿಯನ್ನು ಸ್ವೀಕರಿಸಿದರು.

**ಕೆರೆ ಅಭಿವೃದ್ಧಿ ಪರಿಕಲ್ಪನೆಯಲ್ಲಿ ಈ ಕೆಳಕಂಡ ಚಟುವಟಿಕೆಗಳನ್ನು ಕೈಗೆತ್ತಿಕೊಳ್ಳಲಾಗಿದೆ:**

- **ಕೆರೆಗೆ ನೀರು ಹರಿದು ಬರುವ ಕಾಲುವೆಗಳ ಪುನಶ್ಚೇತನ.**
- **ಗೂಗಲ್ ಅರ್ಥ್ ಅಥವಾ ದಿಶಾಂಕ್ ಮೊಬೈಲ್ ಅಪ್ಲಿಕೇಶನ್ ಬಳಸಿಕೊಂಡು ಕೆರೆಗೆ ನೀರು ಹರಿದು ಬರುವ ಕಾಲುವೆ/ಹಳ್ಳಗಳನ್ನು ಗುರುತಿಸಿ ಅವುಗಳನ್ನು ದುರಸ್ತಿಗೊಳಿಸಲು ಮತ್ತು ಹೂಳು ತೆಗೆಯುವುದು. ಈ ಕಾಲುವೆ/ಹಳ್ಳಗಳ ನೀರು ಕೆರೆಗೆ ಪ್ರವೇಶಿಸುವ ಸ್ಥಳದಲ್ಲಿ Silt Trap ನಿರ್ಮಿಸಲಾಗುವುದು.**
- **ಕೆರೆಯಲ್ಲಿನ ಹೂಳನ್ನು ವೈಜ್ಞಾನಿಕವಾಗಿ ಅಂದಾಜು ಮಾಡಿ ಹೂಳು ತೆಗೆಯಲು ಕ್ರಮವಹಿಸುವುದು.**
- **ಕೆರೆ ಏರಿಯನ್ನು ದುರಸ್ತಿಗೊಳಿಸುವುದು ಮತ್ತು ಏರಿಯನ್ನು ಸ್ಥಿರೀಕರಣಗೊಳಿಸಲು ಇಳಿಜಾರುಗಳಲ್ಲಿ ಗಿಡಗಳನ್ನು ನೆಡುವುದು.**
- **ಕೆರೆ ಕೋಡಿ ಮತ್ತು ರೈತರ ಜಮೀನುಗಳಿಗೆ ನೀರು ಹರಿದು ಹೋಗುವ ಕಾಲುವೆಗಳನ್ನು ದುರಸ್ತಿಗೊಳಿಸುವುದು.**
- **ಕೆರೆ ಅಂಚಿನ ಖಾಲಿ ಪ್ರದೇಶಗಳಲ್ಲಿ ಸಸಿಗಳನ್ನು ಬೆಳೆಸುವುದು.**
- **ಗ್ರಾಮೀಣ ಪ್ರದೇಶಗಳಲ್ಲಿ ಸಾರ್ವಜನಿಕ ಸ್ಥಳಗಳು ಹಾಗೂ ಅರಣ್ಯ ಪ್ರದೇಶಗಳಲ್ಲಿ ಹೊಸ ಕೆರೆಗಳನ್ನು ನಿರ್ಮಾಣ ಮಾಡಲಾಗುತ್ತದೆ.**

ಗ್ರಾಮೀಣ ಜನರಿಗೆ ಉದ್ಯೋಗ ಒದಗಿಸುವ ಸರ್ಕಾರದ ಮಹತ್ವಾಕಾಂಕ್ಷಿ ಯೋಜನೆಯಾದ ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಯ ವೆಚ್ಚದಲ್ಲಿ ಕನಿಷ್ಟ ಶೇ.65ರಷ್ಟನ್ನು ನೈಸರ್ಗಿಕ ಸಂಪನ್ಮೂಲ ನಿರ್ವಹಣೆ ಕಾಮಗಾರಿಗಳಿಗೆ ಮೀಸಲಿಡುವುದು ಕಡ್ಡಾಯವಾಗಿದೆ. ಜಲಶಕ್ತಿ ಅಭಿಯಾನದ ಅಡಿಯಲ್ಲಿ ಮಹಾತ್ಮಗಾಂಧಿ ನರೇಗಾ ಯೋಜನೆಯಲ್ಲಿ ಈ ಕೆಳಕಂಡ ಚಟುವಟಿಕೆಗಳನ್ನು ಕೈಗೆತ್ತಿಕೊಳ್ಳಲಾಗುವುದು.

### ಸಮಗ್ರ ಕೆರೆ ಅಭಿವೃದ್ಧಿ:

ಕೆರೆಗಳು ಗ್ರಾಮೀಣ ಪ್ರದೇಶಗಳ ಜೀವನಾಡಿ. ಕೆಲವೇ ವರ್ಷಗಳ ಹಿಂದೆ ಸಮೃದ್ಧವಾಗಿದ್ದ ಕೆರೆಗಳು ನಿರ್ವಹಣೆಯ ಕೊರತೆಯಿಂದ ಬತ್ತಿ ಬರಡಾಗಿವೆ. ಕೆರೆಗಳಿಗೆ ಮತ್ತೆ ಜೀವಕಳೆ ನೀಡಲು ಕೆರೆಗಳನ್ನು ಸಮಗ್ರವಾಗಿ ಅಭಿವೃದ್ಧಿ ಪಡಿಸುವುದು ಅಗತ್ಯವಿರುತ್ತದೆ. ಹಾಗಾಗಿ ಗ್ರಾಮ ಪಂಚಾಯತಿಗಳ ವ್ಯಾಪ್ತಿಯ ಕೆರೆಗಳನ್ನು ಸಮಗ್ರವಾಗಿ ಅಭಿವೃದ್ಧಿ ಪಡಿಸುವ ಉದ್ದೇಶದಿಂದ ಹೂಳು ತೆಗೆಯುವುದು, ಕೆರೆ ಏರಿ ದುರಸ್ತಿ, ಕೆರೆ ಅಂಚಿನಲ್ಲಿ ಸಸಿ ನೆಡುವುದು ಇವೇ ಮುಂತಾದ ವಿವಿಧ ಚಟುವಟಿಕೆಗಳನ್ನು ಕೈಗೆತ್ತಿಕೊಳ್ಳಲಾಗುವುದು.

### ಬದು ನಿರ್ಮಾಣ ಅಭಿಯಾನ:

ಗ್ರಾಮೀಣ ಕರ್ನಾಟಕ ಕೃಷಿಯನ್ನೇ ಹೆಚ್ಚಾಗಿ ಅವಲಂಬಿಸಿದ್ದು, ದೇಶದ ಎರಡನೇ ಶುಷ್ಕ ರಾಜ್ಯವಾಗಿದೆ. ಹವಾಮಾನ ವೈಪರೀತ್ಯದಿಂದ ಮಳೆ ಬೀಳುವ ಅಂತರ ಬದಲಾಗುತ್ತಿದೆ. ರಭಸವಾಗಿ ಹರಿಯುವ ಮಳೆ ನೀರಿನ ಜೊತೆ ಕೃಷಿ ಭೂಮಿಯ ಫಲವತ್ತಾದ ಮಣ್ಣು ಕೊಚ್ಚಿಹೋಗುತ್ತದೆ. ಮಣ್ಣಿನಲ್ಲಿ ತೇವಾಂಶ ಮತ್ತು ಫಲವತ್ತತೆ ಕುಸಿದು, ಬಿತ್ತಿದ ಬೆಳೆಯಿಂದ ನಿರೀಕ್ಷಿತ ಇಳುವರಿ ಕ್ಷೀಣಿಸಿ ಮುಂದೆ ಬೆಳೆಯೇ ಬೆಳೆಯಲಾಗದ ಬಂಜರು ಭೂಮಿಯಾಗಲಿದೆ.

"ಓಡುವ ನೀರನ್ನು ನಡೆಯುವಂತೆ ಮಾಡು, ನಡೆಯುವ ನೀರನ್ನು ನಿಲ್ಲುವಂತೆ ಮಾಡು, ನಿಂತ ನೀರನ್ನು ಇಂಗುವಂತೆ ಮಾಡು" ಎಂಬ ನಾಣ್ಣುಡಿಯಂತೆ ಬಿದ್ದ ಮಳೆ ನೀರನ್ನು ಅದೇ ಸ್ಥಳದಲ್ಲಿ ಇಂಗಿಸಿದಲ್ಲಿ ಮಣ್ಣಿನಲ್ಲಿ ತೇವಾಂಶ ಹೆಚ್ಚಿ

Download From : www.kpscvaani.com



ಬೆಳೆ ಒಣಗದೇ, ಹೆಚ್ಚು ಕಾಲ ಹಸಿರಾಗಿರಲು ಕಂದಕ ಬದು ರಚನೆಗಳು ಪ್ರಮುಖ ಪಾತ್ರವಹಿಸುತ್ತವೆ. ಪ್ರತಿ ತಾಕಿನಲ್ಲಿ ಇಳಿಜಾರಿಗೆ ಅಡ್ಡಲಾಗಿ ಮಣ್ಣಿನಿಂದ ನಿರ್ಮಿಸಲಾದ ಸಣ್ಣದಾದ ಒಡ್ಡನ್ನು ಬದು ಎನ್ನುತ್ತೇವೆ.

ಬದು ಪ್ರವಾಹ ಮತ್ತು ಮಣ್ಣಿನ ಸವೆತ ತಡೆಯುತ್ತದೆ. ಬದು ನಿರ್ಮಾಣದಿಂದ ಮಳೆ ನೀರು ಸಂಗ್ರಹವಾಗಿ ಭೂಮಿಯ ತೇವಾಂಶ ಹೆಚ್ಚುತ್ತದೆ. ಮಣ್ಣಿನ ಫಲವತ್ತತೆ ಹೆಚ್ಚಾಗಿ ಇಳುವರಿ ಜಾಸ್ತಿಯಾಗುತ್ತದೆ. ಬದು ಬೇಸಾಯಕ್ಕೆ ಅನುಕೂಲವಾಗುತ್ತದೆ. ಸಣ್ಣ ಪ್ರಮಾಣದ ಅಂತರ್ಜಲ ಮರುಪೂರಣಕ್ಕೆ ಪೂರಕವಾಗುತ್ತದೆ.

ಭೂಮೇಲ್ಮೈ ಲಕ್ಷಣದ ಆಧಾರದ ಮೇಲೆ ಬದುಗಳನ್ನು ಸಮಪಾತಳಿ ಬದು, ಗುಂಡುಕಲ್ಲಿನ ಬದು, ಕಂದಕದೊಂದಿಗೆ ಬದು ಎಂದು ವರ್ಗೀಕರಿಸಲಾಗುತ್ತದೆ. ವೈಯಕ್ತಿಕ ಜಮೀನುಗಳಲ್ಲಿ ಮಣ್ಣಿನ ಸವಕಳಿ ತಡೆದು ತೇವಾಂಶವನ್ನು ಹಿಡಿದಿಡುವ ಸಲುವಾಗಿ ಕಂದಕ ಬದುಗಳನ್ನು ನಿರ್ಮಾಣ ಮಾಡಲಾಗುತ್ತದೆ.

ಬದು ಒಂದು ಸಾಂಪ್ರದಾಯಿಕ ಮಣ್ಣು ಮತ್ತು ಜಲ ಸಂರಕ್ಷಣೆಯ ವಿಧಾನವಾಗಿದೆ. ರೈತರ ಜಮೀನುಗಳಲ್ಲಿ ಇಳಿಜಾರಿಗೆ ಅಡ್ಡಲಾಗಿ ಬದು ನಿರ್ಮಿಸುವುದರಿಂದ ಮಳೆ ನೀರು ಸಂಗ್ರಹಣೆ ಮತ್ತು ಭೂಮಿಯ ತೇವಾಂಶ ಹೆಚ್ಚಿಸಿ ಮಣ್ಣಿನ ಸವಕಳಿಯನ್ನು ತಡೆಯಬಹುದು. ಒಂದು ಎಕರೆ ಪ್ರದೇಶದಲ್ಲಿ ಕಂದಕ ಬದು ನಿರ್ಮಾಣದಿಂದ ಎರಡು ಲಕ್ಷ ಲೀಟರ್ ಮಳೆನೀರನ್ನು ಸಂಗ್ರಹಿಸಬಹುದು.

### ಕಲ್ಯಾಣಿ ಪುನಶ್ಚೇತನ

ಕಲ್ಯಾಣಿಗಳು ಹಳ್ಳಿಗಳ ಸಂಸ್ಕೃತಿ ಮತ್ತು ಪರಂಪರೆಯ ಪ್ರತೀಕ. ಪ್ರತಿಯೊಂದು ಕಲ್ಯಾಣಿಯೂ ಅದರದೇ ಆದ ಇತಿಹಾಸ ಮತ್ತು ಸಾಂಪ್ರದಾಯಿಕ ಆಚರಣೆಗಳನ್ನು ಒಳಗೊಂಡಿದೆ. ಕಲ್ಯಾಣಿಗಳನ್ನು ವಿಶಿಷ್ಟ ಮತ್ತು ವೈಜ್ಞಾನಿಕವಾದ ವಾಸ್ತುಶೈಲಿಯಲ್ಲಿ ನಿರ್ಮಿಸಲಾಗಿರುತ್ತದೆ. ಅಂತರ್ಜಲ ಕುಸಿತ ಹಾಗು ನಿರ್ವಹಣೆಯಲ್ಲಿನ ನಿರ್ಲಕ್ಷ್ಯದಿಂದ ಕಲ್ಯಾಣಿಗಳು ಉಪಯೋಗಕ್ಕೆ ಬಾರದಂತ್ತಾಗಿವೆ. ಮೊದಲಿನಂತೆ ಈ ಕಲ್ಯಾಣಿ/ಪುಷ್ಕರಣಿಗಳನ್ನು ಉಪಯೋಗಕ್ಕೆ ಬರುವಂತೆ ಪುನಶ್ಚೇತನವನ್ನು ನರೇಗಾ ಯೋಜನೆಯಡಿ ಕಲ್ಯಾಣಿಗಳಲ್ಲಿ ಸಂಗ್ರಹವಾಗಿರುವ ಹೂಳನ್ನು ತೆಗೆದು, ಮುಚ್ಚಿರುವ ನೀರಿನ ಒರತೆಗಳನ್ನು ತೆರವುಗೊಳಿಸಿ ನೀರು ಸಂಗ್ರಹವಾಗುವಂತೆ ಮಾಡಲಾಗುವುದು.

### ನಾಲಾ ಪುನಶ್ಚೇತನ:

ನಾಲಾ ಪುನಶ್ಚೇತನದ ಅಡಿಯಲ್ಲಿ ನಾಲಾಗಳ ಅಗಲೀಕರಣ, ಹೂಳು ತೆಗೆಯುವುದು, ನಾಲಾ ಬದುಗಳ ಸ್ಥಿರೀಕರಣ ಮತ್ತು ನಾಲ ಬದುಗಳ ಮೇಲೆ ಸಸಿಗಳನ್ನು ನೆಡುವ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳುವುದು. ನಾಲಾಗಳಲ್ಲಿ ಪ್ರತಿ 30 ರಿಂದ 50 ಮೀಟರ್ ಅಂತರದಲ್ಲಿ Boulder Check ಗಳನ್ನು ನಿರ್ಮಾಣ ಮಾಡುವುದು.

**ಚಿಕ್ಕ ಕೃಷಿಹೊಂಡದ ದೊಡ್ಡ ಉಪಯೋಗಗಳು**

- ಪ್ರವಾಹ ಮತ್ತು ಮಣ್ಣಿನ ಸವಕಳಿ ತಡೆಯುತ್ತದೆ.
- ಮಣ್ಣಿನಲ್ಲಿ ತೇವಾಂಶ ಮತ್ತು ಬೆಳೆ ಇಳುವರಿ ಹೆಚ್ಚುತ್ತದೆ.
- ಆಪತ್ಕಾಲದಲ್ಲಿ ಬೆಳೆ ಕಾಪಾಡಲು ಹಾಗೂ ಹೆಚ್ಚುವರಿ ಬೆಳೆ ತೆಗೆಯಲು ಅನುಕೂಲ.
- ಕೃಷಿ ಹೊಂಡದಿಂದ ಕನಿಷ್ಠ 1.40 ಲಕ್ಷ ಲೀಟರ್ ಮಳೆ ನೀರು ಸಂಗ್ರಹಿಸಬಹುದು.
- ಸಣ್ಣ ಪ್ರಮಾಣದಲ್ಲಿ ಮೀನುಗಾರಿಕೆಯನ್ನು ಮಾಡಿಕೊಳ್ಳಲು ಅನುಕೂಲ.





**ಪ್ರಧಾನಮಂತ್ರಿಗಳ ಆಶಯಕ್ಕೆ ಅನುಗುಣವಾಗಿ ರಾಜ್ಯದಲ್ಲಿ ಜಲಶಕ್ತಿ ಅಭಿಯಾನಡಿಯಲ್ಲಿ 4310 ಕೋಟಿ ರೂಗಳ ವೆಚ್ಚದಲ್ಲಿ ಕೆರೆ, ಕಲ್ಯಾಣಿ ನಾಲಾ ಪುನಶ್ಚೇತನ, ಗೋಕಟ್ಟೆ ನಿರ್ಮಾಣ ಸೇರಿದಂತೆ ಸಾಂಪ್ರದಾಯಿಕ ಹಾಗೂ ಇತರೆ ಜಲಮೂಲಗಳ ಸಂರಕ್ಷಣೆ ಹಾಗೂ ಪುನಶ್ಚೇತನ ಮುಂತಾದ 3 ಲಕ್ಷಕ್ಕೂ ಅಧಿಕ ವಿವಿಧ ಕಾಮಗಾರಿಗಳನ್ನು ಹಮ್ಮಿಕೊಳ್ಳಲಾಗಿದ್ದು, ಈ ಎಲ್ಲಾ ಕಾಮಗಾರಿಗಳನ್ನು ಮುಂಬರುವ 100 ದಿನಗಳಲ್ಲಿ ಪೂರ್ಣಗೊಳಿಸಲು ಉದ್ದೇಶಿಸಲಾಗಿದೆ.**

**-ಕೆ.ಎಸ್. ಈಶ್ವರಪ್ಪ,** ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು

### ಗೋಕಟ್ಟೆಗಳ ನಿರ್ಮಾಣ:

ಗ್ರಾಮೀಣ ಪ್ರದೇಶಗಳಲ್ಲಿ ಬೇಸಿಗೆ ಕಾಲದಲ್ಲಿ ಜಾನುವಾರು ಮತ್ತು ಪಕ್ಷಿಗಳು ಕುಡಿಯುವ ನೀರು ಸಿಗದೇ ಬಳಲಿ ಜೀವ ಕಳೆದುಕೊಳ್ಳುತ್ತಿವೆ. ಜಾನುವಾರುಗಳಿಗೆ ಕುಡಿಯಲು ಮೇಲ್ಮೈ ನೀರು ಲಭ್ಯವಾಗುವಂತೆ ಮಾಡಲು ಗ್ರಾಮಗಳಲ್ಲಿ ಗೋಕಟ್ಟೆಗಳನ್ನು ನಿರ್ಮಾಣ ಮಾಡಲಾಗಿದೆ.

ಆದರೆ ಗೋಕಟ್ಟೆಗಳು ನಿರ್ವಹಣೆಯಿಲ್ಲದೆ ನೀರು ಸಂಗ್ರಹ ಸಾಮರ್ಥ್ಯ ಕುಗ್ಗಿದೆ. ಜಲ ಅಭಿಯಾನ ಯೋಜನೆಯಡಿ ಗೋಕಟ್ಟೆಗಳ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳುವುದರ ಮೂಲಕ ನೀರು ಸಂಗ್ರಹಣಾ ಸಾಮರ್ಥ್ಯ ಹೆಚ್ಚಿಸುವುದು. ಗೋಕಟ್ಟೆ ಇಲ್ಲದ ಹಳ್ಳಿಗಳಲ್ಲಿ ಗೋಕಟ್ಟೆ ನಿರ್ಮಾಣಕ್ಕೆ ಆದ್ಯತೆ ನೀಡಲಾಗುವುದು.

ಗೋಕಟ್ಟೆಯಿಂದ ಜಾನುವಾರುಗಳಿಗೆ ಸುಲಭವಾಗಿ ಕುಡಿಯಲು ನೀರು ಲಭ್ಯವಾಗುವಂತೆ ಮಾಡಬಹುದು. ಅಲ್ಲದೇ ಮಳೆ ನೀರು ಸಂಗ್ರಹದಿಂದ ಅಂತರ್ಜಲವೂ ವೃದ್ಧಿಯಾಗುತ್ತದೆ. ಗೋಕಟ್ಟೆಯ ಸುತ್ತಲಿನ ಖಾಲಿ ಪ್ರದೇಶಗಳಲ್ಲಿ ಗಿಡಗಳನ್ನು ಬೆಳೆಸಿ ಉತ್ತಮ ಪರಿಸರವನ್ನು ನಿರ್ಮಾಣ ಮಾಡಲಾಗುವುದು.

### ಕೃಷಿ ಹೊಂಡ

ರೈತರ ಜಮೀನುಗಳಲ್ಲಿ ಮಳೆನೀರು ಸಂಗ್ರಹಿಸಲು ಇದೊಂದು ವೈಜ್ಞಾನಿಕ ಮತ್ತು ಪರಿಣಾಮಕಾರಿ ವಿಧಾನ. ಮಳೆ ಕೈಕೊಟ್ಟ ಸಂದರ್ಭಗಳಲ್ಲಿ ಕೃಷಿಹೊಂಡದಲ್ಲಿ ಸಂರಕ್ಷಿಸಿದ ಮಳೆನೀರಿನಿಂದ ಬೆಳೆಗಳನ್ನು ಕಾಪಾಡಿಕೊಳ್ಳಬಹುದು. ಮಳೆನೀರು ಸಂಗ್ರಹಿಸುವುದರಿಂದ ಭೂಮಿಯಲ್ಲಿ ತೇವಾಂಶ ಹೆಚ್ಚಾಗಿ ರೈತರಿಗೆ ಇಳುವರಿ ಹೆಚ್ಚಾಗಿ ಆದಾಯವು ಹೆಚ್ಚುವುದು.

### ಕೃಷಿ ಹೊಂಡ ನಿರ್ಮಾಣ

ಸಾಮಾನ್ಯವಾಗಿ ಒಂದು ಹೆಕ್ಟೇರ್ ಪ್ರದೇಶದಲ್ಲಿ ಕೆಂಪು ಮಣ್ಣಿನಲ್ಲಿ 166 ಘ.ಮೀ ಹಾಗೂ ಕಪ್ಪು ಮಣ್ಣಿನಲ್ಲಿ 300 ಘ.ಮೀ. ನೀರು ಹರಿದು ಬರುವುದಾಗಿ ಪರಿಗಣಿಸಬಹುದಾಗಿದೆ. ಹರಿದು ಬರುವ ನೀರಿನ ಪ್ರಮಾಣಕ್ಕನುಗುಣವಾಗಿ ಕೃಷಿಹೊಂಡದ ಅಳತೆ ಹಾಗೂ ಗಾತ್ರವನ್ನು ನಿರ್ಧರಿಸಲಾಗುತ್ತದೆ. ಕೃಷಿ ಹೊಂಡ ನಿರ್ಮಾಣಕ್ಕೆ ಸೂಕ್ತ ಸ್ಥಳ, ಜಮೀನಿನ ನೀರು ಸುಲಭವಾಗಿ ಹೊಂಡಕ್ಕೆ ಹರಿದು ಬರುವಂತೆ ನೀರಿನ ದಾರಿಗಳು, ನೀರಿನೊಂದಿಗೆ ಮಣ್ಣು ಸೇರದಂತೆ ಸಿಲ್ಟ್ ಟ್ರಾಪ್, ಹೆಚ್ಚುವರಿ ನೀರು ಹೊರಹೋಗಲು ಕೋಡಿ ವ್ಯವಸ್ಥೆಯನ್ನು ಕಲ್ಪಿಸಬೇಕಾಗುತ್ತದೆ.

ಮಹಾತ್ಮಗಾಂಧಿ ನರೇಗಾ ಯೋಜನೆಯಡಿ ಕೃಷಿ ಹೊಂಡವನ್ನು

**“ಮುಂಗಾರು ಪ್ರಾರಂಭವಾಗುವ ಮೊದಲೇ ಮಳೆ ನೀರನ್ನು ಸಂಗ್ರಹಿಸುವ ಉದ್ದೇಶದಿಂದ ಸಾಂಪ್ರದಾಯಿಕ ಜಲಸಂಪನ್ಮೂಲಗಳನ್ನು ಪುನಶ್ಚೇತನಗೊಳಿಸಲು ಪ್ರದಾನಮಂತ್ರಿಯವರು ಕಳೆದ ಮಾರ್ಚ್ 22ರಂದು ‘ಜಲಶಕ್ತಿ ಅಭಿಯಾನ-catch the rain ಕಾರ್ಯಕ್ರಮಕ್ಕೆ ಚಾಲನೆ ನೀಡಿದ್ದಾರೆ. ಮುಂದಿನ ನವೆಂಬರ್ 30ರವರೆಗೂ ಈ ಕಾರ್ಯಕ್ರಮ ಬೃಹತ್ ಪ್ರಮಾಣದಲ್ಲಿ ಮುಂದುವರಿಯಲಿದೆ”**



Download From : www.kpscvaani.com

ಕೂಲಿಕಾರರೇ ನಿರ್ಮಾಣ ಮಾಡುವುದರಿಂದ ಹೂಳು ತೆಗೆಯಲು ಅನುಕೂಲವಾಗುವಂತೆ ಮೆಟ್ಟಿಲು ಮಾದರಿಯ ಕೃಷಿ ಹೊಂಡ ರಚನೆಯನ್ನು ಮಾಡಲಾಗುತ್ತಿದೆ.

ಕೃಷಿ ಭೂಮಿಯಲ್ಲಿ ಕೃಷಿ ಹೊಂಡ ನಿರ್ಮಾಣ ರಚನೆಯಿಂದ ಹೆಚ್ಚು ಭೂಮಿ ಹಾಳಾಗುತ್ತದೆ ಎಂದು ಹಿಂಜರಿಯುತ್ತಿದ್ದ ರೈತರು ಅದರ ಲಾಭಗಳನ್ನು ಅರಿತು ಮಹಾತ್ಮಗಾಂಧಿ ನರೇಗಾ ಯೋಜನೆಯಡಿ ಪ್ರಸ್ತುತ ಸಾಲಿನಲ್ಲಿ 67,000ಕ್ಕೂ ಹೆಚ್ಚಿನ ಕೃಷಿ ಹೊಂಡ ನಿರ್ಮಾಣ ಮಾಡಿಕೊಂಡಿದ್ದಾರೆ. ಕೃಷಿ ಹೊಂಡದಿಂದ ಕೆಲ ರೈತರು ಸಂಗ್ರಹಿತ ಮಳೆ ನೀರನ್ನು ಹನಿ ನೀರಾವರಿ ಮಾಡಿಕೊಂಡು ಸಕಾಲಕ್ಕೆ ಬಿತ್ತನೆ, ಬೆಳೆಗೆ ರಕ್ಷಣಾತ್ಮಕ ನೀರು ಪೂರೈಕೆ ಮಾಡಿಕೊಂಡು ಅಧಿಕ ಇಳುವರಿಯನ್ನು ಗಳಿಸಿರುವುದು ಕಂಡುಬಂದಿದೆ.

### ಕೆರೆ ನಿರ್ಮಾಣ

ಗ್ರಾಮ ಮಂಚಾಯತಿ ವ್ಯಾಪ್ತಿಯ ಸರ್ಕಾರಿ ಜಾಗದಲ್ಲಿ ಮತ್ತು ಅರಣ್ಯ ಪ್ರದೇಶಗಳಲ್ಲಿ ಹೊಸದಾಗಿ ಕೆರೆಗಳನ್ನು ನಿರ್ಮಿಸುವುದು ಕೂಡ ಜಲಶಕ್ತಿ ಅಭಿಯಾನದ ಯೋಜನೆಗಳಲ್ಲಿ ಒಂದು.

### ಸೋಕ್ ಪಿಟ್ ನಿರ್ಮಾಣ

ಪ್ರಸ್ತುತ ಪ್ರಗತಿಯಲ್ಲಿರುವ ಸೋಕ್ ಪಿಟ್ ಕಾಮಗಾರಿಗಳನ್ನು ಪೂರ್ಣಗೊಳಿಸಿ ಈ ಯೋಜನೆಯಡಿ ಹೊಸ ಸೋಕ್ ಪಿಟ್ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲು ಉದ್ದೇಶಿಸಲಾಗಿದೆ.

### ಮಲ್ಟಿ ಆರ್ಚ್ ಚೆಕ್ ಡ್ಯಾಂ

ನಾಲಾ, ಹಳ್ಳ, ನದಿಗಳಲ್ಲಿ ನೀರಿನ ಪ್ರವಾಹ ಉಂಟಾಗಿ ದಂಡೆಗಳ ಪಕ್ಕದ ಜಮೀನುಗಳಿಗೆ ಹೆಚ್ಚು ಹಾನಿಯಾಗುತ್ತಿದೆ. ಈ ಹಾನಿಯನ್ನು ತಡೆಯಲು ಹಾಗೂ ನೀರಿನ ಮೂಲಗಳಿಗೆ ಹೂಳು ಹರಿದು ಬರುವುದನ್ನು ತಡೆಯಲು ಚೆಕ್ ಡ್ಯಾಂ ನಿರ್ಮಾಣ ಮಾಡಬೇಕಾಗುತ್ತದೆ. ನೀರಿನ ರಭಸದಿಂದ ಹಾಳಾಗದಂತೆ ಬಹು ಬಾಳಿಕೆ ಹಾಗೂ ಕಡಿಮೆ ವೆಚ್ಚದ ಬಹು ಕಮಾನು ಮತ್ತು ಗೇಬಿಯಾನ್ ತಡೆಗೋಡೆಗಳನ್ನು ಮಹಾತ್ಮ ಗಾಂಧಿ ನರೇಗಾ ಯೋಜನೆಯಡಿ ನಿರ್ಮಾಣ ಮಾಡಲಾಗುತ್ತಿದೆ.

ಈಗಾಗಲೇ ಪ್ರತಿ ಗ್ರಾಮ ಪಂಚಾಯತಿಗೆ ಕನಿಷ್ಠ ಒಂದು ಮಲ್ಟಿ ಆರ್ಚ್ ಚೆಕ್ ಡ್ಯಾಂ ನಿರ್ಮಾಣ ಮಾಡಲು ಸಕಾರಿ ಆದೇಶವನ್ನು ಹೊರಡಿಸಲಾಗಿದೆ.

### ಬೋರ್‌ವೆಲ್ ರಿಚಾರ್ಜ್

ಗ್ರಾಮೀಣ ಪ್ರದೇಶಗಳಲ್ಲಿ ಕೃಷಿ ಮತ್ತು ಕುಡಿಯುವ ನೀರಿಗಾಗಿ ನಿರಂತರವಾಗಿ ಬೋರ್‌ವೆಲ್‌ಗಳನ್ನು ಕೊರೆಯಲಾಗುತ್ತಿದೆ. ಇದರಿಂದ ಅಂತರ್ಜಲದ ಮಟ್ಟ ವ್ಯಾಪಕವಾಗಿ ಕುಸಿಯುತ್ತಿದೆ. ಬೇಸಿಗೆ ಕಾಲದಲ್ಲಿ ಕುಡಿಯುವ ನೀರು ಪೂರೈಕೆಗಾಗಿ ಟ್ಯಾಂಕರ್‌ಗಳ ಮೇಲಿನ ಅವಲಂಬನೆ ಹೆಚ್ಚುತ್ತಿದೆ. ಕೆಲವು ಪ್ರದೇಶಗಳಲ್ಲಿ 1000–1500 ಆಳದವರೆಗೂ ಬೋರ್‌ವೆಲ್ ಕೊರೆದರೂ ನೀರು ಲಭ್ಯವಾಗದ ಪರಿಸ್ಥಿತಿ ಇದೆ.

ನೀರಿಲ್ಲದೇ ಬತ್ತಿಹೋಗಿರುವ ಬೋರ್‌ವೆಲ್‌ಗಳಿಗೆ ಜಲ ಮರುಪೂರಣ ಮಾಡುವ ಮೂಲಕ ಅವುಗಳಲ್ಲಿ ಮತ್ತೆ ನೀರು ಲಭ್ಯವಾಗುವಂತೆ ಮಾಡಬಹುದಾಗಿದೆ. ಇದರಿಂದಾಗಿ ಕುಡಿಯುವ ನೀರಿಗೆ ಹೊಸ ಬೋರ್‌ವೆಲ್ ಕೊರೆಯುವ ಅಥವಾ ಟ್ಯಾಂಕರ್ ಮೂಲಕ ಪೂರೈಕೆ ಮಾಡುವ ವೆಚ್ಚದಲ್ಲಿ ಉಳಿತಾಯವಾಗುತ್ತದೆ. ರೈತರು ಕೂಡಾ ಬೋರ್‌ವೆಲ್ ಕೊರೆಸಲು ಸಾಲದ ಸಂಕಷ್ಟಕ್ಕೆ ಸಿಲುಕುವುದು ತಪ್ಪುತ್ತದೆ. ಹಾಗಾಗಿ ಬೋರ್‌ವೆಲ್ ರಿಚಾರ್ಜ್ ಯೋಜನೆಯಡಿ ಗ್ರಾಮ ಪಂಚಾಯತಿ ವ್ಯಾಪ್ತಿಯಲ್ಲಿ ಕುಡಿಯುವ ನೀರಿಗೆ ಬಳಸುವ ಬೋರ್‌ವೆಲ್‌ಗಳಿಗೆ ಆದ್ಯತೆಯ ಮೇರೆಗೆ ರಿಚಾರ್ಜ್ ಪಿಟ್ ನಿರ್ಮಾಣ ಮಾಡುವುದು.

### ಮಳೆ ನೀರು ಕೊಯ್ಲು

ಪ್ರಸ್ತುತ ಸಂದರ್ಭದಲ್ಲಿ ಗ್ರಾಮೀಣ ಮತ್ತು ನಗರ ಪ್ರದೇಶಗಳಲ್ಲಿ ಮಳೆನೀರನ್ನು ಸಂಗ್ರಹಿಸಲು ಕಟ್ಟಡಗಳಲ್ಲಿ ಮಳೆನೀರು ಕೊಯ್ಲು ಅಳವಡಿಸುವುದು ಅತ್ಯವಶ್ಯಕವಾಗಿದೆ. ಗ್ರಾಮೀಣ ಪ್ರದೇಶಗಳಲ್ಲೂ ಬಹಳಷ್ಟು ಕಟ್ಟಡಗಳು ತಲೆಯೆತ್ತಿದ್ದು ಮಳೆನೀರು ಕೊಯ್ಲಿನಿಂದ ಸಾಕಷ್ಟು ನೀರನ್ನು ಸಂರಕ್ಷಣೆ, ಶೇಖರಣೆ ಮತ್ತು ಮರುಬಳಕೆ ಮಾಡುವುದರಿಂದ ಸಾಂಪ್ರದಾಯಿಕ ಜಲಮೂಲಗಳಾದ ಕೆರೆ–ಕಟ್ಟೆ, ಬಾವಿ ಮುಂತಾದುವುಗಳ ಮೇಲಿನ ಅವಲಂಬನೆಯನ್ನು ತಗ್ಗಿಸಬಹುದಾಗಿದೆ.

ನರೇಗಾ ಯೋಜನೆಯಡಿ ಗ್ರಾಮೀಣ ಪ್ರದೇಶಗಳಲ್ಲಿನ ಸರ್ಕಾರಿ ಕಟ್ಟಡಗಳಲ್ಲಿ ಮೇಲ್ಛಾವಣಿ ಮಳೆ ನೀರು ಕೊಯ್ಲು ಪದ್ಧತಿಯನ್ನು ಅಳವಡಿಸಲು ಅವಕಾಶವಿರತ್ತದೆ. ಸಂಗ್ರಹಿಸಿದ ಮಳೆ ನೀರನ್ನು ಬಳಕೆ ಮಾಡುವುದರಿಂದ ಸಾಂಪ್ರದಾಯಿಕ ಜಲಮೂಲಗಳಲ್ಲಿ ಅಷ್ಟು ಪ್ರಮಾಣದ ನೀರನ್ನು ಉಳಿತಾಯ ಮಾಡಿದಂತೆ. ಗ್ರಾಮ ಪಂಚಾಯತಿ ವ್ಯಾಪ್ತಿಯ ಸರ್ಕಾರಿ ಕಟ್ಟಡಗಳಿಗೆ ಮಳೆ ನೀರು ಕೊಯ್ಲು ರಚನೆಗಳನ್ನು ನಿರ್ಮಿಸಲು ಕ್ರಮಕೈಗೊಳ್ಳಲಾಗುವುದು.

### ಅರಣ್ಯೀಕರಣ ಕಾಮಗಾರಿಗಳು

ಭೂಮಿಯ ಮೇಲೆ ಸ್ವಾಭಾವಿಕ ಸಮತೋಲನ ಕಾಪಾಡಲು ಒಟ್ಟು ಭೌಗೋಳಿಕ ಪ್ರದೇಶದ ಶೇ. 33 ರಷ್ಟು ಅರಣ್ಯ ಪ್ರದೇಶ ಹೊಂದಿರುವುದು ಅತ್ಯಗತ್ಯ. ಆದರೆ ಇತ್ತೀಚಿನ ವರದಿಯ ಪ್ರಕಾರ ಕರ್ನಾಟಕವು ಶೇ.20.11 ರಷ್ಟು ಮಾತ್ರ ಅರಣ್ಯ ಪ್ರದೇಶ ಹೊಂದಿದೆ. ನಿರಂತರ ಅರಣ್ಯ ನಾಶದಿಂದಾಗಿ ಜಾಗತಿಕ ತಾಪಮಾನ ಹೆಚ್ಚಳ, ಸಮುದ್ರ ಮಟ್ಟದಲ್ಲಿ ಏರಿಕೆ, ಮಳೆಯಲ್ಲಿ ಅನಿಶ್ಚಿತತೆ, ಪ್ರಕೃತಿ ವಿಕೋಪಗಳು ಸಂಭವಿಸುತ್ತಿವೆ.

ಅರಣ್ಯ ಪ್ರದೇಶವನ್ನು ಹೆಚ್ಚಿಸುವ ಉದ್ದೇಶದಿಂದ ರಸ್ತೆ ಬದಿ ನೆಡುತೋಪು, ಸಾರ್ವಜನಿಕ ಪ್ರದೇಶಗಳಲ್ಲಿ ನೆಡುತೋಪು, ರೈತರ ಜಮೀನುಗಳಲ್ಲಿ ಗಿಡಗಳನ್ನು ಬೆಳೆಸುವುದು ಮತ್ತು ಅರಣ್ಯ ಪ್ರದೇಶಗಳಲ್ಲಿ ಮಳೆ ನೀರು ಇಂಗುವಂತೆ ಮಾಡಲು ಕಂದಕಗಳನ್ನು ನರೇಗಾ ಯೋಜನೆಯಡಿ ನಿರ್ಮಾಣ ಮಾಡಲಾಗುವುದು.

### ಚೆಕ್ ಡ್ಯಾಂಗಳ ಹೂಳು ತೆಗೆಯುವುದು

ಚೆಕ್ ಡ್ಯಾಂಗಳ ಹಿಂಭಾಗದಲ್ಲಿನ ಹೂಳು ತೆಗೆಯುವುದು ಮತ್ತು ನಾಲಾಗಳನ್ನು ದುರಸ್ತಿಗೊಳಿಸುವ ಕಾರ್ಯವನ್ನು ಕೈಗೊಳ್ಳಲಾಗುವುದರಿಂದ ಚೆಕ್ ಡ್ಯಾಂಗಳಲ್ಲಿ ನೀರಿನ ಶೇಖರಣೆ ಪ್ರಮಾಣ ಹೆಚ್ಚಾಗಲಿದೆ.

### ಅಂತರ್ಜಲ ಚೇತನ

ಇತ್ತೀಚಿನ ವರ್ಷದಲ್ಲಿ ಹವಾಮಾನ ಬದಲಾವಣೆಯಿಂದ ಶುಷ್ಕ ವಾತಾವರಣ ಹಾಗೂ ಅತಿಯಾದ ಅಂತರ್ಜಲ ಬಳಕೆ ಹೆಚ್ಚಾಗುತ್ತಿದೆ. ಹೆಚ್ಚುತ್ತಿರುವ ಅಂತರ್ಜಲ ಬಳಕೆಯನ್ನು ತಗ್ಗಿಸಲು ಮೇಲ್ಮೈ ಮಳೆ ನೀರು ಸಂರಕ್ಷಣೆಯನ್ನು ವೈಜ್ಞಾನಿಕವಾಗಿ ಅನುಷ್ಠಾನಿಸಲು ಸಮುದಾಯ ಭೂಮಿಯಲ್ಲಿ ನದಿ ಪುನಶ್ಚೇತನ ಕಾಮಗಾರಿಗಳು, ವೈಯುಕ್ತಿಕ ನಿರ್ಮಾಣದಿಂದ ಮಳೆ ನೀರು ಮರುಪೂರಣಗೊಳಿಸಿ ಅಂತರ್ಜಲ ವೃದ್ಧಿಸಲಾಗುತ್ತಿದೆ.




### ತೆರೆದ ಬಾವಿ

ಪಶ್ಚಿಮ ಘಟ್ಟ ಮತ್ತು ಕರಾವಳಿ ಪ್ರದೇಶಗಳಲ್ಲಿ ತೆರೆದ ಬಾವಿಯು ಕೃಷಿ ನೀರಾವರಿಯ ಪ್ರಮುಖ ಮೂಲವಾಗಿದೆ. ಕಡಿಮೆ ಆಳದಲ್ಲಿ ನೀರಿನ ಮೂಲ ಸಿಗುವ ಪ್ರದೇಶಗಳಲ್ಲಿ ತೆರೆದ ಬಾವಿಗಳನ್ನು ಅನುಷ್ಠಾನಿಸಲಾಗುತ್ತಿದೆ. ತೆರೆದ ಬಾವಿಯಲ್ಲಿ ನೀರು ಬತ್ತಿದಲ್ಲಿ ಬಾವಿಯ ಆಳವನ್ನು ಹೆಚ್ಚಿಸಿ ಮತ್ತೆ ನೀರು ಲಭ್ಯವಾಗುವಂತೆ ಮಾಡಬಹುದಾಗಿರುತ್ತದೆ.

### ಬೌಲ್ಡರ್ ಚೆಕ್ (ಕಲ್ಲು ತಡೆ)

ಕಲ್ಲು ತಡೆಯು ನೀರಿನ ಸಂರಕ್ಷಣೆ ಮಾಡಲು ನಿರ್ಮಿಸುವ ಸರಳವಾದ ಒಂದು ವಿಧಾನ. ಸ್ಥಳೀಯ ಲಭ್ಯ ಕಲ್ಲುಗಳನ್ನು ಬಳಸಿ ನಿರ್ಮಿಸುವುದರಿಂದ ಸಾಮಗ್ರಿ ವೆಚ್ಚವೂ ಉಳಿತಾಯವಾಗುತ್ತದೆ. ವೇಗವಾಗಿ ಹರಿಯುವ ನೀರಿನ ರಭಸವನ್ನು ತಡೆಯುವುದರಿಂದ, ಮಣ್ಣಿನ ಸವಕಳಿಯನ್ನು ತಡೆಯಬಹುದು. ತಡೆದ ನೀರನ್ನು ಭೂಮಿಯಲ್ಲಿ ಇಂಗಿಸುವುದರಿಂದ ಅಂತರ್ಜಲ ಮಟ್ಟ ಮತ್ತು ಭೂಮಿಯ ತೇವಾಂಶ ಹೆಚ್ಚುವುದು.

### ಜಲ ಸಂರಕ್ಷಣೆ ಕಾಮಗಾರಿಗಳ ದುರಸ್ತಿ

ಒಟ್ಟಿನಲ್ಲಿ ಮಹಾತ್ಮಗಾಂಧಿ ನರೇಗಾ ಯೋಜನೆಯಡಿ ನಿರ್ಮಿಸಲಾಗಿರುವ 03 ಅಥವಾ ಅದಕ್ಕಿಂತ ಹಿಂದಿನ ವರ್ಷಗಳ ಜಲ ಸಂರಕ್ಷಣೆ ಕಾಮಗಾರಿಗಳನ್ನು ದುರಸ್ತಿಗೊಳಿಸುವುದು. ಕಳೆದ ಮೂರು ವರ್ಷಗಳಲ್ಲಿ ನಿರ್ಮಿಸಿರುವ ಜಲ ಸಂರಕ್ಷಣೆ ಕಾಮಗಾರಿಗಳು ಪ್ರಕೃತಿ ವಿಕೋಪದಿಂದ ಹಾನಿಯಾಗಿದ್ದಲ್ಲಿ ಅವುಗಳನ್ನು ದುರಸ್ತಿಗೊಳಿಸಲು ಕ್ರಮವಹಿಸುವುದು.

ಜಲಶಕ್ತಿ ಅಭಿಯಾನ **'ಕ್ಯಾಚ್ ದಿ ರೇನ್'** ಅನುಷ್ಠಾನಗೊಳಿಸಲು ವಿವಿಧ ಇಲಾಖೆಗಳ ನಡುವೆ ಸಮನ್ವಯತೆ ತರುವ ಜವಾಬ್ದಾರಿಯನ್ನು ಜಿಲ್ಲಾಧಿಕಾರಿಗಳಿಗೆ ನೀಡಲಾಗಿದೆ. ಹಾಗೆಯೇ ಸಾಂಪ್ರದಾಯಿಕ ಜಲ ಮೂಲಗಳ ಒತ್ತುವರಿಯನ್ನು ತೆರವುಗೊಳಿಸಿ ಪುನಶ್ಚೇತನಗೊಳಿಸಲು ಕಂದಾಯ ಇಲಾಖೆ ನೆರವು ನೀಡಲಿದೆ. ಜಲಶಕ್ತಿ ಅಭಿಯಾನಕ್ಕೆ ಜಿಲ್ಲಾ ಮಟ್ಟದಲ್ಲಿ ಜಿಲ್ಲಾ ಉಸ್ತುವಾರಿ ಸಚಿವರ ನೇತೃತ್ವದಲ್ಲಿ ಮತ್ತು ತಾಲ್ಲೂಕು ಮಟ್ಟದಲ್ಲಿ ಸ್ಥಳೀಯ ಶಾಸಕರ ನೇತೃತ್ವದಲ್ಲಿ ಚಾಲನೆ ನೀಡಲಾಗಿದೆ. ಅಭಿಯಾನದ ಪ್ರಗತಿಯ ಕುರಿತು ನಿರಂತರ ಮೇಲ್ವಿಚಾರಣೆ ಮತ್ತು ಪರಿಶೀಲನೆ ಮಾಡುವ ಮೂಲಕ ಈ ಯೋಜನೆಯನ್ನು ಮಳೆಗಾಲ ಪ್ರಾರಂಭವಾಗುವುದರೊಳಗೆ ಮಾಡಿ ಮುಗಿಸಲಾಗುವುದು.

ಒಟ್ಟಿನಲ್ಲಿ ಅಂತರ್ಜಲ ಹೆಚ್ಚಿಸುವ ಉದ್ದೇಶದಿಂದ ಕೇಂದ್ರ ಸರ್ಕಾರವು **'ಕ್ಯಾಚ್ ದಿ ರೇನ್'** ಎಂಬ ವಿನೂತನ ಯೋಜನೆಯನ್ನು ಹಮ್ಮಿಕೊಂಡಿರುವುದರಿಂದ ಅಂತರ್ಜಲ ಹೆಚ್ಚಿ, ಕೆರೆ ಕಟ್ಟೆಗಳು ತುಂಬಲಿವೆ. ಅಲ್ಲದೆ ಬೋರ್ ವೆಲ್‌ಗಳು ರಿಚಾರ್ಜ್ ಆಗುವುದರಿಂದ ಸಹಜವಾಗಿ ಮುಂದಿನ ವರ್ಷಗಳಲ್ಲಿ ಬರಗಾಲದ ಪರಿಸ್ಥಿತಿ ಎದುರಾಗುವುದಿಲ್ಲ.

> **ವ್ಯರ್ಥವಾಗುವ ಮಳೆನೀರನ್ನು ವೈಜ್ಞಾನಿಕವಾಗಿ ತಡೆದು, ಸಂಗ್ರಹಿಸುವುದರಿಂದ ಅಂತರ್ಜಲವು ಹೆಚ್ಚುವುದಲ್ಲದೇ, ಬೇಸಿಗೆ ಕಾಲದಲ್ಲಿ ಜಾನುವಾರು ಹಾಗೂ ರೈತರ ಬೆಳೆಗಳಿಗೆ ನೀರಿನ ಅನುಕೂಲವಾಗಲಿದೆ.**

Download From : www.kpscvaani.com



# ಕೋವಿಡ್-19

## ಕಹಿನೆನಪು ಮರೆತುಬಿಡಿ ಲಸಿಕೆಗೆ ನಿಮ್ಮ ತೋಳು ಕೊಡಿ




**ಕೋವಿಡ್-19 ಈಗ ಮರು ರೂಪಾಂತರಗೊಂಡು ಶೇಕಡ 70 ರಷ್ಟು ಹೆಚ್ಚು ಹರಡುವ ಕ್ಷಮತೆ ಹೊಂದಿದೆ. ಮೇಲಾಗಿ ಮಕ್ಕಳು, ಯುವಕರಿಗೂ ತಗಲುತ್ತಿದೆ. ಮೊದಲ ಅಲೆ ಸಣ್ಣ ಬೆಂಕಿ ಕಿಡಿಯಾಗಿದ್ದರೇ, ಎರಡನೇ ಅಲೆ ಕಾಳ್ಗಿಚ್ಚಿನಂತಾಗಿದೆ. ಲೇಖನ ಮುದ್ರಣಕ್ಕೆ ಹೋಗುವತನಕ ದೇಶದಲ್ಲಿ ಸುಮಾರು 10 ಕೋಟಿ ಜನತೆ ಲಸಿಕೆ ಪಡೆದುಕೊಂಡಿದ್ದರು. ಲಸಿಕೆ ಪಡೆದುಕೊಳ್ಳದಿದ್ದರೆ ಪರಿಸ್ಥಿತಿ ಏನಾಗುತ್ತಿತ್ತು ಎಂಬುದನ್ನು ಕ್ಷಣಕಾಲ ಯೋಚಿಸಿದರೆ ಲಸಿಕೆಯಿಂದ ಎಷ್ಟು ಕೋಟಿ ಜೀವ ಉಳಿದಿದೆ ಎಂಬ ಲೆಕ್ಕ ಸಿಗಬಹುದು.**

ಕೆ.ಎಸ್. ರಾಜಮನ್ನಾರ್




ಕೋವಿಡ್–19 ದೇಶಕ್ಕೆ ಕಾಲಿಟ್ಟು ವರ್ಷ ಉರುಳಿದೆ. ಕೊರೊನಾ ಸಂಹಾರಕ್ಕಾಗಿ ಬಲುಬೇಗನೆ ದೇಶಿಯ ಲಸಿಕೆಯೂ ಬಂದಿದೆ. ಇದರ ಹಿಂದೆ ವಿಜ್ಞಾನಿಗಳ ಅಪಾರ ಪರಿಶ್ರಮವಿದೆ. ಲಸಿಕೆ ಯಾವಾಗ ಬರುತ್ತದೆ ಎಂಬ ಮಾತುಗಳು ಇಲ್ಲಿಯವರೆಗೂ ನಿತ್ಯ ಮಂತ್ರವಾಗಿತ್ತು. ಆದರೆ ಈಗ ಲಸಿಕೆ ಬಂದಿದ್ದರೂ ನೂರೆಂಟು ಕೊಂಕು ಮಾತುಗಳು, ಸತ್ಯಕ್ಕೆ ದೂರವಾದ, ತಲೆಬುಡವಿಲ್ಲದ ಹರಟೆಯೂ ಸಾಗಿದೆ. ಲಸಿಕೆ ಪಡೆಯಲು ಮೀನ ಮೇಷ ಎಣಿಸಲಾಗುತ್ತಿದೆ. ಜನರಿಗೆ ಕೊರೊನಾ ಸೋಂಕು ಉಂಟುಮಾಡಬಹುದಾದ ಅಪಾಯಗಳ ಬಗ್ಗೆ ಸರಿಯಾದ ತಿಳುವಳಿಕೆ ಇಲ್ಲದಿರುವುದೇ ಇದಕ್ಕೆ ಕಾರಣ ಎಂದೇ ಹೇಳಬೇಕು.

ಲಸಿಕೆ ಏಕೆ ಹಾಕಿಸಿಕೊಳ್ಳಬೇಕು? ಹಾಕಿಸಿಕೊಳ್ಳದಿದ್ದರೆ ಏನಾಗಲಿದೆ ಎಂಬ ವಾದವೂ ಹೆಚ್ಚು ಬೆಳೆಯುತ್ತಿದೆ. ಕಳೆದ ವರ್ಷ ಕೊರೊನಾ ದೇಶವನ್ನು ಎಡಬಿಡದೆ ಕಾಡಿದ ಸಮಯದಲ್ಲಿ ಲಸಿಕೆ ಬಂದಿರಲಿಲ್ಲ. ಆದರೆ ಲಸಿಕೆ ಬೇಗ ಬರಲಿ ಎಂಬ ಹಾರೈಕೆ ಮಾತ್ರ ಎಲ್ಲರ ಬಾಯಲ್ಲೂ ನಲಿದಾಡುತ್ತಿತ್ತು. ಜನರಿಗೆ ಅಸಲಿ ಸತ್ಯ ತಿಳಿಯದೆ ಇರುವ ಕಾರಣ ಲಸಿಕೆ ಸುರಕ್ಷತೆಯ ಬಗ್ಗೆ ಕೇವಲ ಹಗುರವಾಗಿ ಮಾತನಾಡುತ್ತಿರಬಹುದು. ಈಗ ವಾಸ್ತವ ಸಂಗತಿಗಳ ಕಡೆಗೆ ಗಮನ ಹರಿಸೋಣ, ನಂತರ ಲಸಿಕೆ ಬೇಕೆ, ಬೇಡವೇ ಎಂಬುದನ್ನು ಜನರ ವಿವೇಚನೆಗೆ ಬಿಟ್ಟುಬಿಡುವುದೇ ಒಳಿತು.

ಕಳೆದ ವರ್ಷ ಕೊರೊನಾ ಕಾಡಿದ ಸಮಯದಲ್ಲಿ ಸಾಮಾನ್ಯ ಜನ ಮೃತಪಟ್ಟಿದ್ದು ಮತ್ತು ಕೊರೊನಾ ವಾರಿಯರ್‌ಗಳ ಸಾವಿನ ಅನುಪಾತ ನೋಡಿದರೆ ಲಸಿಕೆ ಏಕೆ ಬೇಕು ಎಂಬುದು ಬಹಳ ಸರಳವಾಗಿ ಅರ್ಥವಾಗಲಿದೆ. ಸಾಮಾನ್ಯ ಜನರ ಸಾವಿನ ಪ್ರಮಾಣ ಶೇಕಡ 1.5 ರಷ್ಟಿದ್ದರೆ, ಕೊರೊನಾ ವಾರಿಯರ್‌ಗಳ ಸಾವಿನ ಪ್ರಮಾಣ ಶೇಕಡ 18 ರಷ್ಟು ಇತ್ತು ಎಂಬ ಸಂಗತಿ ತಿಳಿಯಬೇಕು. ಲಸಿಕೆ ಇಲ್ಲದ ಸಮಯದಲ್ಲಿ ವೈದ್ಯರು, ದಾದಿಯರು, ಅರೆವೈದ್ಯಕೀಯ ಸಿಬ್ಬಂದಿ ಮತ್ತು ಪೊಲೀಸರು ಜನರ ಪ್ರಾಣ ಉಳಿಸಲು ಹೋಗಿ ಕಡೆಗೆ ತಮ್ಮ ಜೀವವನ್ನೇ ಕಳೆದುಕೊಂಡರು.

ಒಂದು ವೇಳೆ ಆ ಸಮಯದಲ್ಲಿ ಲಸಿಕೆ ಲಭ್ಯವಾಗಿದ್ದರೆ ವೈದ್ಯರು, ದಾದಿಯರು ಈ ಪರಿ ಲೆಕ್ಕದಲ್ಲಿ ಸಾವಿನ ಮನೆಯ ಕದ ತಟ್ಟ ಬೇಕಿರಲಿಲ್ಲ. ದೇಶದಲ್ಲಿ ಕಳೆದ ಜನವರಿ 16 ರಿಂದ ಲಸಿಕೆ ಅಭಿಯಾನ ಪ್ರಾರಂಭವಾಗಿದೆ. ಮಾರ್ಚ್ ಒಂದರಿಂದ ಎರಡನೇ

**ಭಾರತ ದೇಶಿಯವಾಗಿ ಅಭಿವೃದ್ಧಿಪಡಿಸಿದ ಎರಡು ಲಸಿಕೆಯನ್ನು 4 ರಿಂದ 8 ವಾರಗಳ ಅವಧಿಯಲ್ಲಿ ಎರಡು ಡೋಸ್ ತೆಗೆದುಕೊಂಡರೆ ರೋಗ ನಿರೋಧಕ ಶಕ್ತಿ ಶೇಕಡ 91 ರಷ್ಟು ಹೆಚ್ಚಾಗಲಿದೆ ಎಂದು ಜಾಗತಿಕ ವೈದ್ಯಕೀಯ ಸಂಶೋಧನಾ ವರದಿ ಮುದ್ರೆ ಒತ್ತಿದೆ. ಲಸಿಕೆ ಎಂಬುದು ಚಿಕಿತ್ಸೆ ಅಲ್ಲ. ಅದು ಮುನ್ನೆಚ್ಚರಿಕೆ ಕ್ರಮ. ನನ್ನಿಂದ ಮನೆಯವರು, ನೆರೆ–ಹೊರೆಯವರು, ಇತರರ ಆರೋಗ್ಯವೂ ಚೆನ್ನಾಗಿರಬೇಕು ಎಂಬ ಕನಿಷ್ಠ ಕಾಳಜಿಯಿದ್ದರೆ ಲಸಿಕೆ ಹಾಕಿಸಿಕೊಳ್ಳಿ. ಹಾಗೆಯೇ ಕಳೆದ ವರ್ಷ ಲಾಕಡೌನ್ ಸಮಯಲ್ಲಿ ಅನುಭವಿಸಿದ ಯಮಯಾತನೆ, ಮನೆಯಿಂದ ಹೊರ ಹೋಗದಂತೆ ಕೂಡಿ ಹಾಕಿದ ಕಹಿ ದಿನಗಳು ಪುನರಾವರ್ತನೆಯಾಗುವುದನ್ನು ತಡೆಯಿರಿ.**



**ನೀವು 18 ವರ್ಷ ಮೇಲ್ಪಟ್ಟವರಾಗಿದ್ದರೆ ಸ್ವಯಂ ಪ್ರೇರಿತರಾಗಿ ಕೋವಿಡ್–19 ಲಸಿಕೆಯನ್ನು ಪಡೆಯಬೇಕು. ಲಸಿಕೆ ಪಡೆಯಲು www.cowin.gov.in ಗೆ ಭೇಟಿ ನೀಡಿ ಹೆಸರು ನೋಂದಾಯಿಸಿಕೊಳ್ಳಬೇಕು. ಲಸಿಕೆ ಪಡೆದ ಕೂಡಲೇ ರೋಗ ಬರುವುದಿಲ್ಲ ಎಂದು ಹೇಳಲಾಗದು. ಆದರೆ ಲಸಿಕೆ ಪಡೆಯುವುದರಿಂದ ರೋಗದ ವಿರುದ್ಧ ಹೋರಾಡಲು ಶಕ್ತಿ ದೊರಕಲಿದೆ. ಹಾಗಾಗಿ ಲಸಿಕೆ ಪಡೆದ ನಂತರವೂ ಕಡ್ಡಾಯವಾಗಿ ಕೋವಿಡ್–19 ಸುರಕ್ಷತಾ ಕ್ರಮಗಳನ್ನು ಪಾಲಿಸಬೇಕು. ಜ್ವರ, ನೆಗಡಿ, ಕೆಮ್ಮು ಮುಂತಾದ ಕೋವಿಡ್–19 ಲಕ್ಷಣಗಳು ಕಂಡುಬಂದಲ್ಲಿ ಆಪ್ತಮಿತ್ರ ಸಹಾಯವಾಣಿ 14410 ಗೆ ಕರೆ ಮಾಡಬಹುದು.**

Download From : www.kpscvaani.com

ಅಭಿಯಾನ ಶುರುವಾಗಿ, ಈಗ ಏಪ್ರಿಲ್ ತಿಂಗಳಲ್ಲಿ ಮೂರನೇ ಅಭಿಯಾನ ಆರಂಭವಾಗಿದೆ. ಮೊದಲ ಅಭಿಯಾನದಲ್ಲಿ ಕೊರೊನ ವಾರಿಯರ್‌ಗಳಿಗೆ ಲಸಿಕೆ ನೀಡುವ ತೀರ್ಮಾನ ತೆಗೆದುಕೊಳ್ಳಲಾಯಿತು. ಆನಂತರ 60 ವರ್ಷ ದಾಟಿದವರು ಮತ್ತು ಗಂಭೀರ ಆರೋಗ್ಯ ಸಮಸ್ಯೆಯಿಂದ ಬಳಲುತ್ತಿರುವವರಿಗೆ, ನಂತರ ಈಗ ಏಪ್ರಿಲ್ ಒಂದರಿಂದ 45 ವರ್ಷ ಮೇಲ್ಪಟ್ಟವರಿಗೆ, ಮೇ 1 ರಿಂದ 18 ವರ್ಷ ಮೇಲ್ಪಟ್ಟವರಿಗೆ ಲಸಿಕೆ ಕೊಡುವ ತೀರ್ಮಾನ ತೆಗೆದುಕೊಳ್ಳಲಾಗಿದೆ. ಏಕೆ ಹೀಗೆ ಮಾಡಲಾಗಿದೆ ಅಂದರೆ, ಎಲ್ಲಾ ವಯೋಮಾನದವರಿಗೂ ಒಂದೇ ಸಲ ಲಸಿಕೆ ಕೊಡಲು ಆರಂಭ ಮಾಡಿದರೆ ನೂಕು-ನುಗ್ಗಲು ಉಂಟಾಗಿ ಸಿಕ್ಕವರಿಗೆ ಸೀರುಂಡೆ ಆಗಬಹುದು. ಅರ್ಹರಿಗೆ ಲಸಿಕೆ ದೊರೆಯದೇ ಇರಲೂಬಹುದು. ಈ ಎಲ್ಲಾ ಅಂಶಗಳನ್ನು ಸರ್ಕಾರ ಮತ್ತು ಪರಿಣಿತ ವೈದ್ಯರ ತಂಡ ಗುಣಾಕಾರ, ಭಾಗಾಕಾರ ಮಾಡಿ ಹಂತ-ಹಂತವಾಗಿ ಲಸಿಕೆ ಕೊಡುವ ಪಟ್ಟಿಯನ್ನು ಬಹಳ ಲೆಕ್ಕಾಚಾರದ ಮೇಲೆ ಪ್ರಕಟಿಸಿದೆ.





**ಲಸಿಕೆ ಏಕೆ ಪಡೆಯಬೇಕು?**

ಈಗ ಪ್ರಮುಖ ವಿಚಾರಕ್ಕೆ ಬರೋಣ. ಕೊರೊನಾ ದೇಶದಲ್ಲಿ ಎರಡನೆ ಅಲೆಯ ಆತಂಕ ತಂದಿಟ್ಟಿದೆ. ಈವರೆಗೆ ಸರಿ ಸುಮಾರು 10 ಕೋಟಿ ಜನರಿಗೆ ಲಸಿಕೆ ನೀಡಲಾಗಿದೆ. ಕೊರೊನಾ ಮೊದಲನೇ ಅಲೆ ಕೇವಲ ಕಿಡಿಯಾಗಿದ್ದರೆ, ಎರಡನೇ ಅಲೆ ಕಾಳ್ಗಿಚ್ಚು ಎಂಬ ವಾಸ್ತವ ಅರಿತರೆ, ಲಸಿಕೆ ಹಾಕಿಸಿಕೊಳ್ಳಬೇಕು ಎಂಬ ಸಾಮಾಜಿಕ ಜಾಗೃತಿ ಸ್ವಯಂ ಪ್ರೇರಿತವಾಗಿ ಮೂಡಿ ಬರಬಹುದೆನೋ. ಲಸಿಕೆ ಬಾರದಿದ್ದರೆ ಎರಡನೇ ಅಲೆಯು ಈಗಾಗಲೇ ಎಷ್ಟೋ ಜನರ ಪ್ರಾಣವನ್ನು ಅಪೋಶಮನ ಮಾಡಿ ಬಿಡುತಿತ್ತು. ಲಸಿಕೆಯಿಂದಾಗಿ ಎಷ್ಟೋ ಕೋಟಿ ಜೀವಗಳು ಉಳಿದುಕೊಂಡಿದೆ. ಹಾಗಾಗಿ ಲಸಿಕೆ ಪಡೆಯಲು ಇನ್ನೂ ಮೀನ ಮೇಷ ಮಾಡಬಾರದು. ರೈಲು ಹೋದ ಮೇಲೆ ಟಿಕೆಟ್ ತೆಗೆದುಕೊಂಡರು ಎಂಬಂತೆ ಮಾಡಿಕೊಳ್ಳದೇ ರೋಗ ಬರುವ ಮುಂಚೆಯೇ ಲಸಿಕೆ ಹಾಕಿಸಿಕೊಂಡು ರೋಗದ ವಿರುದ್ಧ ಹೋರಾಡುವ ಶಕ್ತಿಯನ್ನು ಪಡೆದುಕೊಳ್ಳಬೇಕು.

**ಮೀನ ಮೇಷಕ್ಕೆ ಮುನ್ನ ಒಂದು ಕ್ಷಣ ಯೋಚಿಸಿ:**

ಒಂದು ಲಸಿಕೆಯನ್ನು ಅಂತಿಮಗೊಳಿಸುವ ಮುನ್ನ ಅದನ್ನು ಪ್ರಾಣಿಗಳ ಮೇಲೆ ನಂತರ ಮುನುಷ್ಯರ ಮೇಲೆ ಪ್ರಯೋಗ ಮಾಡಲಾಗುತ್ತದೆ. ಕನಿಷ್ಠ 30 ಸಾವಿರ ಜನರ ಮೇಲೆ ಪ್ರಯೋಗ ಮಾಡಿ ಅದರ ಸಾಧಕ - ಭಾದಕಗಳ ಸಮಗ್ರ ಪರಿಶೀಲನೆ ನಂತರವೇ ಅಂತಿಮವಾಗಿ ಲಸಿಕೆಯನ್ನು ರೋಗಿಗಳಿಗೆ ಕೊಡುವ ತೀರ್ಮಾನ ತೆಗೆದುಕೊಳ್ಳಲಾಗಿದೆ.

ಭಾರತ ದೇಶಿಯವಾಗಿ ಅಭಿವೃದ್ಧಿ ಪಡಿಸಿರುವ ಎರಡು ಲಸಿಕೆಗಳು ಮತ್ತು ಅದರ ಕಾರ್ಯಕ್ಷಮತೆಯನ್ನು ಜಗತ್ತಿನ ವಿಜ್ಞಾನಿಗಳು, ವೈದ್ಯ ಸಮುದಾಯ ಓರೆಗಲ್ಲಿಗೆ ಹಚ್ಚಿದೆ. ಮತ್ತು ಮೇಲಾಗಿ ಲಸಿಕೆ ಎಷ್ಟರ ಮಟ್ಟಿಗೆ ಕೆಲಸ ಮಾಡುತ್ತದೆ, ಅದರಿಂದ ಹೇಗೆ ರಕ್ಷಣೆ ದೊರೆಯಲಿದೆ ಎಂಬುದನ್ನು ಅಳತೆ ಮಾಡಿದ್ದಾರೆ. ಜಗತ್ತಿನಾದ್ಯಂತ ಭಾರತದ ಲಸಿಕೆ ಕಾರ್ಯ ಕ್ಷಮತೆ ಕುರಿತು 11 ಸಂಶೋಧನಾ ಪ್ರಬಂಧಗಳು ಬೇರೆ, ಬೇರೆ ದೇಶದಲ್ಲಿ ಪ್ರಕಟವಾಗಿ, ಅದರ ಪ್ರಕಾರ ಎರಡೂ ಲಸಿಕೆಗಳು ಶೇಕಡ 91 ರಷ್ಟು ಸಕ್ಸಸ್ ಎಂದು ಹೇಳಿರುವ ಸಂಗತಿಯನ್ನು ಅರಿತರೆ ಲಸಿಕೆಗಳು ಎಷ್ಟು ಸುರಕ್ಷಿತ ಮತ್ತು ಪರಿಣಾಮಕಾರಿ ಮತ್ತು ಅದರ ತುರ್ತು ಅಗತ್ಯದ ಅರಿವಾಗಲಿದೆ.

**ಲಸಿಕೆಯಿಂದ ಯಾವ ರೀತಿ ರಕ್ಷಣೆ?**

ಆರೋಗ್ಯ ತಜ್ಞರ ಪ್ರಕಾರ, ಒಮ್ಮೆ ಲಸಿಕೆ ಪಡೆದ ಮೇಲೆ ಇದರ ಪರಿಣಾಮ 6 ತಿಂಗಳವರೆಗೆ ಇರಲಿದೆ ಎಂಬ ಮಾತು ಕೇಳಿ ಬಂದರೂ, ಇದು ಹೊಸ ವೈರಸ್ ಆದ ಕಾರಣ ನಿಖರವಾಗಿ ಮುಂದಿನದನ್ನು ಹೀಗೆಯೇ ಎಂದು ಹೇಳಲು ಯಾರಿಂದಲೂ ಸಾಧ್ಯವಿಲ್ಲ, ಆದರೆ ಲಸಿಕೆ ತೆಗೆದುಕೊಂಡವರಲ್ಲಿ ರೋಗ ನಿರೋಧಕ ಶಕ್ತಿ ಹೆಚ್ಚಾಗುತ್ತದೆ.

ರೋಗ ನಿರೋಧಕ ಶಕ್ತಿ ಹೆಚ್ಚುವುದರಿಂದ ಕೊರೊನಾ ಸೋಂಕಿತರಾಗುವ ಸಾಧ್ಯತೆ ಕಡಿಮೆ. ಅಲ್ಲದೇ ಕೊರೊನಾ ಹರಡುವಿಕೆ ಪ್ರಮಾಣ ಕೂಡ ಬಹಳ ಕಡಿಮೆ.

ಲಸಿಕೆ ತೆಗೆದುಕೊಂಡ ಮೇಲೆ ದೇಹದಲ್ಲಿ ರೋಗ ನಿರೋಧಕ ಶಕ್ತಿ ಹೆಚ್ಚುತ್ತದೆ. ಹಾಗೆಯೇ ದೇಹದಲ್ಲಿ ಆ್ಯಂಟಿಬಾಡಿಯನ್ನು ಉತ್ಪತ್ತಿ ಮಾಡುತ್ತದೆ. ಲಸಿಕೆ ಪಡೆದ ನಂತರ ಎಲ್ಲಾ ಭಾರವನ್ನು ಲಸಿಕೆ ಮೇಲೆ ಹಾಕಿ ಮನಬಂದಂತೆ ಅಡ್ಡಾಡುವುದು ಸರಿಯಲ್ಲ. ಕೊರೊನಾ ಹೋಗುವವರೆಗೂ ಮಾಸ್ಕ್ ಧರಿಸಿರಬೇಕು, ಸಾಮಾಜಿಕ ಅಂತರವನ್ನೂ ಕಾಪಾಡಬೇಕು, ಆರೋಗ್ಯ ಇಲಾಖೆಯ ಇತರ ಎಲ್ಲ ಮಾರ್ಗಸೂಚಿಗಳನ್ನು ಕಡ್ಡಾಯವಾಗಿ ಪಾಲಿಸಲೇಬೇಕು.

ಕೊರೊನಾ ಎರಡನೇ ಅಲೆ ತೀವ್ರಗತಿಯಲ್ಲಿ ಕಾಡುತ್ತಿದ್ದರೂ ಜನರು ಇನ್ನು ಲಸಿಕೆ ಪಡೆಯುವ ಬಗ್ಗೆ ಹಿಂದೆ-ಮುಂದೆ ನೋಡುವುದು ಸರಿಯಲ್ಲ, ಸಮಂಜಸವೂ ಅಲ್ಲ. ಕೋವಾಕ್ಸಿನ್, ಕೋವಿಶೀಲ್ಡ್ ಯಾವುದನ್ನು ಹಾಕಿಸಿಕೊಳ್ಳಬೇಕು? ಯಾವುದು ಸುರಕ್ಷಿತ?, ಯಾವುದು ಅಸುರಕ್ಷಿತ?, ಎಂಬ ಒಣ ಚರ್ಚೆಗಳು ಕೇಳಿಬರುತ್ತಿವೆ. ಎರಡೂ ಲಸಿಕೆಗಳ ಉದ್ದೇಶ ಒಂದೆ, ಆದರೆ ಕೆಲಸ ಮಾಡುವ ವಿಧಾನ ಮಾತ್ರ ಬೇರೆಯಾಗಿರುತ್ತದೆ. ಹಾಗಾಗಿ ಎರಡು ಲಸಿಕೆಗಳು ಸುರಕ್ಷಿತ ಮತ್ತು ಪರಿಣಾಮಕಾರಿಯಾಗಿವೆ. ಲಸಿಕೆಯು ಸೋಂಕು ದೇಹದ ಒಳಗೆ ಹೋಗದಂತೆ ತಡೆಗಟ್ಟುವುದಲ್ಲದೆ, ರೋಗ ನಿರೋಧಕ ಶಕ್ತಿಯನ್ನು ಹೆಚ್ಚಿಸುತ್ತದೆ. ಹಾಗಾಗಿ ಸೋಂಕು ತಗುಲಿದರೂ ಸಾವು ಸಂಭವಿಸುವುದನ್ನು ತಪ್ಪಿಸುತ್ತದೆ.

ಇನ್ನು ಲಸಿಕೆ ಸಿದ್ಧವಾದ ನಂತರ ಲಕ್ಷ ಸಿಬ್ಬಂದಿಗೆ ತರಬೇತಿ ನೀಡಲಾಗಿದೆ. ಒಂದು ಕೇಂದ್ರದಲ್ಲಿ 11 ಸಿಬ್ಬಂದಿಯನ್ನು ನೇಮಕ ಮಾಡಿ ಬಹಳ ಅಚ್ಚುಕಟ್ಟಾಗಿ ನಡೆಸಲಾಗುತ್ತಿದೆ. ಲಸಿಕೆ ನೀಡುವ ಕಾರ್ಯತಂತ್ರ ವಿಧಾನವನ್ನು ವಿಜ್ಞಾನಿಗಳು ಮತ್ತು ಭಾರತೀಯ ವೈದ್ಯಕೀಯ ಸಂಶೋಧನಾ ಮಂಡಳಿಯ ಸಿಬ್ಬಂದಿ, ವಿಜ್ಞಾನಿಗಳು ಹಗಲು-ಇರುಳು ಚಿಂತನೆ ಮಾಡಿ ರೂಪಿಸಿದ್ದಾರೆ. ಹೀಗಾಗಿ ಪ್ರತಿ ಹಂತದಲ್ಲೂ ಅಚ್ಚುಕಟ್ಟು, ಕಾಪಾಡಿಕೊಂಡು ಬರಲಾಗಿದೆ. ಇದರ ಹಿಂದೆ ಸಾವಿರಾರು ಜನರ ಪರಿಶ್ರಮ ಮತ್ತು ಆಲೋಚನೆ ಇದೆ. ಯಾವುದನ್ನೂ ಮನಸ್ಸಿಗೆ ಬಂದಂತೆ ಮಾಡಲಾಗಿಲ್ಲ.

**ಚೀನಾದ ಕೊರೊನಾಗೆ ಭಾರತದ ಲಸಿಕೆ**

ಭಾರತ ದೇಶಿಯವಾಗಿ ಅಭಿವೃದ್ಧಿಪಡಿಸಿದ ಲಸಿಕೆಗಳಿಗೆ ವಿಶ್ವದ್ಯಾಂತ ಬೇಡಿಕೆ ಹೆಚ್ಚಿದೆ. ಈಗಾಗಲೇ ಸುಮಾರು 80ಕ್ಕೂ ಹೆಚ್ಚು ರಾಷ್ಟ್ರಗಳಿಗೆ ಲಸಿಕೆಯನ್ನು ಭಾರತ ಪೂರೈಸಿದೆ. ಆದರೂ ನಿತ್ಯವೂ ಒಂದಲ್ಲಾ ಒಂದು ರಾಷ್ಟ್ರದಿಂದ ಬೇಡಿಕೆ ಬರುತ್ತಲೇ ಇದೆ. ಇದು ಭಾರತೀಯ ವಿಜ್ಞಾನಿಗಳ ಅವಿರತ ಪ್ರಯತ್ನಕ್ಕೆ ದೊರಕಿದ ದೊಡ್ಡ ಪ್ರತಿಫಲ. ಇದು ವಿಶ್ವಕ್ಕೆ ಭಾರತ ಕೊಟ್ಟ ದೊಡ್ಡ ಕೊಡುಗೆ ಎಂದರೂ ಅತಿಶಯೋಕ್ತಿ ಅಲ್ಲ.

> **ಕನಿಷ್ಠ 60 ಪ್ರತಿಶತದಷ್ಟು ಜನರಾದರೂ ಮಾಸ್ಕ್ ಧರಿಸಿ ಸಾಮಾಜಿಕ ಅಂತರ ಕಾಯ್ದುಕೊಂಡರೆ ಕೊರೊನಾ ವೈರಸ್ ಹರಡುವಿಕೆಯನ್ನ ತಡೆಗಟ್ಟಬಹುದು, ಎಂದು ಅಧ್ಯಯನವೊಂದು ತಿಳಿಸಿದೆ. ಆದ ಕಾರಣ ಲಸಿಕೆ ಹಾಕಿಸಿಕೊಂಡರೂ ನಿಯಮ ಪಾಲಿಸುವುದನ್ನು ಮರೆಯಬಾರದು**



ನಮ್ಮ ದೇಶದಲ್ಲಿ ಕೊರೊನಾ ಎರಡನೇ ಅಲೆ ವ್ಯಾಪಕವಾಗಿರುವಾಗ ಬೇರೆ ದೇಶಗಳಿಗೆ ಏಕೆ ಲಸಿಕೆ ಪೂರೈಸಬೇಕು ಎಂಬ ಪ್ರಶ್ನೆಯೂ ಕೇಳಿ ಬರುತ್ತಿದೆ. ಹೇಳಿ-ಕೇಳಿ ವಿಶ್ವದಲ್ಲಿ ಭಾರತ ಬಹಳ ದೊಡ್ಡ ಪ್ರಮಾಣದಲ್ಲಿ ಕೊರೊನಾ ಲಸಿಕೆ ತಯಾರಿಸುತ್ತಿದೆ. ನಿರ್ದಿಷ್ಟ ಕಾಲಮಿತಿಯಲ್ಲಿ ಲಸಿಕೆಯನ್ನು ಉಪಯೋಗಿಸದಿದ್ದರೆ ಅದು ವ್ಯರ್ಥವಾಗುತ್ತದೆ. ಈ ಕಾರಣದಿಂದಲೇ ಬೇಡಿಕೆ ಮೇರೆಗೆ ಇತರೆ ರಾಷ್ಟ್ರಗಳಿಗೂ ಜರೂರಾಗಿ ಲಸಿಕೆಯನ್ನು ಭಾರತ ಪೂರೈಸುತ್ತಿದೆ. ಇದರ ಅರ್ಥ ನಮ್ಮ ದೇಶದ, ನಮ್ಮ ಜನರ ಬೇಡಿಕೆ, ಅಗತ್ಯ ಕಡೆಗಣಿಸಿ ಬೇರೆಯವರಿಗೆ ಸುಖಾಸುಮ್ಮನೆ ದಾನ ಮಾಡುತ್ತಿದೆ ಎಂಬುದಲ್ಲ.

ಸರ್ಕಾರ ಮೊದಲು ಕೊರೊನಾ ವಾರಿಯರ್‌ಗಳಿಗೆ ಆದ್ಯತೆ ಮೇರೆಗೆ ಲಸಿಕೆ ನೀಡಲು ಅನುಮತಿ ನೀಡಿತ್ತು. ನಂತರ 60 ವರ್ಷ ಮೇಲ್ಪಟ್ಟವರು ಹಾಗೂ ಗಂಭೀರ ಆರೋಗ್ಯ ಸಮಸ್ಯೆಗಳಿಂದ ಬಳಲುತ್ತಿರುವವರಿಗೆ ಲಸಿಕೆ ನೀಡಲಾಯಿತು. ಇದು ಕೇವಲ ಶಾಲಾ-ಕಾಲೇಜಿನ ಟೈಮ್ ಟೇಬಲ್ ಅಲ್ಲ. ಖಾಯಿಲೆ ಸ್ವರೂಪ, ಮರಣ ಪ್ರಮಾಣದ ಆಧಾರದ ಮೇಲೆ ಮತ್ತು ಭಾರತೀಯ ವೈದ್ಯಕೀಯ ಸಂಶೋಧನಾ ಮಂಡಳಿ ನಡೆಸಿದ ನಿರಂತರ ಅಧ್ಯಯನದ ಆಧಾರದ ಮೇಲೆ ವಯೋಮಾನ, ಮಾನದಂಡ ಮತ್ತು ಆದ್ಯತೆ ಪರಿಗಣಿಸಿ ಲಸಿಕೆ ಪಡೆಯಲು ವಯೋಮಾನ ನಿಗದಿಯಾಗಿದೆ.

ಲಸಿಕೆ ಕೊಟ್ಟ ತಕ್ಷಣ ಕೊರೊನಾ ಸಂಪೂರ್ಣ ಹೋಗಿ ಬಿಡುತ್ತದೆ ಎಂಬ ಭಾವನೆ ಸರಿಯಲ್ಲ. ಜನರೂ ಜಾಗೃತರಾಗಿ ಆರೋಗ್ಯ ಇಲಾಖೆಯ ಮಾರ್ಗಸೂಚಿಗಳನ್ನು ಕಡ್ಡಾಯವಾಗಿ ಪಾಲಿಸಿ ವೈಯಕ್ತಿಕ ಸ್ವಚ್ಚತೆಗೆ ಆದ್ಯತೆ ಕೊಟ್ಟರೆ ಮಾತ್ರ ಸೋಂಕು ನಿವಾರಣೆಯಾಗಲಿದೆ. ಇನ್ನು ಒಂದೇ ಮಾತಿನಲ್ಲಿ ಹೇಳಬೇಕೆಂದರೆ ಲಸಿಕೆ ಪಡೆಯುವುದು ಎಷ್ಟು ಮುಖ್ಯವೋ, ನಿಯಮಗಳನ್ನು ಪಾಲಿಸುವುದೂ ಅಷ್ಟೇ ಮುಖ್ಯವಾಗಿದೆ. ಒಂದು ಕೈಯಲ್ಲಿ ಚಪ್ಪಾಳೆ ಸಾಧ್ಯವಿಲ್ಲ. ಜಗತ್ತಿಗೆ ಕಂಟಕಪ್ರಾಯವಾಗಿರುವ ಕೊರೊನಾ ತೊಲಗಿಸಲು ಮಾನವ ಸಮುದಾಯ ಟೊಂಕ ಕಟ್ಟಿ ನಿಲ್ಲಬೇಕು. ಸಂಕಲ್ಪ ಮಾಡಬೇಕು. ಹೀಗಾದರೆ ಮಾತ್ರ ಕೊರೊನಾ ವಿರುದ್ಧದ ಸಮರದಲ್ಲಿ ಮನುಕುಲಕ್ಕೆ ಜಯ ಕಟ್ಟಿಟ್ಟ ಬುತ್ತಿ.

ಹೆಚ್ಚಿನ ಸಂಖ್ಯೆಯ ಸೋಂಕುಗಳಿಂದ ಬಳಲುತ್ತಿರುವ ರಾಜ್ಯಗಳು ಸಾರ್ವಜನಿಕ ಆರೋಗ್ಯ ಮಾರ್ಗಸೂಚಿಗಳನ್ನು ಅನುಸರಿಸುತ್ತಿಲ್ಲ ಎಂದು ಅಧ್ಯಯನವೊಂದು ತಿಳಿಸಿದೆ. ಹಾಗಾಗಿ ತಜ್ಞರ ಸಲಹೆಯಂತೆ ಸರ್ಕಾರ ಸಿದ್ದಪಡಿಸಿರುವ ಮಾರ್ಗಸೂಚಿಯಂತೆ ನಾವೆಲ್ಲರೂ ನಡೆದುಕೊಳ್ಳೋಣ. ಆ ಮೂಲಕ ಕೊರೊನಾ ವೈರಸ್ ಹರಡುವಿಕೆಯನ್ನು ತಪ್ಪಿಸೋಣ. ■

Download From : www.kpscvaani.com



# ಮನೆ ಬಾಗಿಲಿಗೇ ಬರಲಿದೆ ಮಾವು!

ಚಂದ್ರಮುಖಿ

ಬಿರುಬೇಸಿಗೆ ಬಂತೆಂದರೆ ಸಾಕು ನಿಮ್ಮ ದೇಹವನ್ನು ತಂಪು ಮಾಡುವ ನಾನಾ ಜಾತಿಯ ರಾಶಿ ರಾಶಿ ಹಣ್ಣುಗಳು ಮಾರುಕಟ್ಟೆಗೆ ದಾಂಗುಡಿ ಇಡುತ್ತವೆ. ಕಲ್ಲಂಗಡಿ, ರಸಾಯನದ ಹಣ್ಣುಗಳು ಹೀಗೆ ಪಟ್ಟಿ ಬೆಳೆಯುತ್ತವೆ. ಜನರಿಗೆ ಎಲ್ಲಕ್ಕಿಂತ ಹೆಚ್ಚು ನಿರೀಕ್ಷೆ ಇರುವುದು ಹಣ್ಣುಗಳ ರಾಜ ಮಾವು ಆಗಮನಕ್ಕಾಗಿ. ಏಪ್ರಿಲ್ ಮೊದಲ ವಾರದಿಂದಲೇ ಶುರುವಾಗುವ ಮಾವಿನ ಹಂಗಾಮು ಮಳೆ ಬಿದ್ದು ಭೂಮಿಯ ಒಡಲು ತಂಪಾಗುವ ತನಕವೂ ಮುಂದುವರಿಯುತ್ತದೆ. ಬಂಗನಪಲ್ಲಿ, ಕೇಸರ್, ಆಮ್ರಪಾಲಿ, ಬಾದಾಮ್, ಮಲ್ಲಿಕಾದಿಂದ ಆರಂಭಗೊಂಡು ತೋತಾಪುರಿ ತನಕ ವಿವಿಧ ತಳಿಯ ಮಾವಿನ ಹಣ್ಣುಗಳು ನಿಜಕ್ಕೂ ಬಾಯಲ್ಲಿ ನೀರೂರಿಸುತ್ತವೆ.

ಆದರೆ ಫಲ ಭರಿತ ಹಣ್ಣುಗಳು ಮಾರುಕಟ್ಟೆಗೆ ಪ್ರವೇಶ ಪಡೆಯುವ ಹೊತ್ತಿಗೆ ಸರಿಯಾಗಿ ಊರೆಲ್ಲ ಕೊರೊನಾ ಸೋಂಕು ವ್ಯಾಪಿಸಿ ಆತಂಕ ಸೃಷ್ಟಿಯಾಗಿದೆ. ಇಂತಹ ಸಂದರ್ಭದಲ್ಲಿ ಮಾವು ಬೆಳಗಾರರು ಮತ್ತು ಗ್ರಾಹಕರ ನಡುವೆ ಸಂಪರ್ಕ ಸೇತುವಾಗಿ ನಿಂತು ಕೆಲಸ ಮಾಡುತ್ತಿರುವ ಮಾವು ಅಭಿವೃದ್ಧಿ ಮತ್ತು ಮಾರುಕಟ್ಟೆ ನಿಗಮವು ಆನ್‌ಲೈನ್ ಪೋರ್ಟ್‌ಲ್ ತೆರೆದು ಗ್ರಾಹಕರ ಮನೆಗೇ ಅವರು ಬಯಸಿದ ಮಾವಿನಹಣ್ಣು ಸರಬರಾಜು ಮಾಡುವ ವ್ಯವಸ್ಥೆಗೆ ಚಾಲನೆಯನ್ನು ನೀಡಿದೆ.







ಈ ಬಗ್ಗೆ ಜನಪದದ ಮಾತು–ಮಂಥನದೊಂದಿಗೆ ಮಾತಿಗೆ ಸಿಕ್ಕವರು ನಿಗಮದ ಅಧ್ಯಕ್ಷ ಕೆ.ವಿ.ನಾಗರಾಜು ಅವರು.

**ಹಿಂದೆಲ್ಲ ಮಾವಿನ ಹಣ್ಣಿನ ಋತು ಶುರುವಾಯಿತೆಂದರೆ ನಿಗಮವು ಒಂದರ ಹಿಂದೆ ಇನ್ನೊಂದು ಮಾವಿನ ಮೇಳಗಳನ್ನು ಹಮ್ಮಿಕೊಳ್ಳುತ್ತಿತ್ತು. ಈಗ ಮೇಳಗಳನ್ನು ನಡಸದೇ ಇರುವ ಪರಿಸ್ಥಿತಿಯಿದೆ. ಅದಕ್ಕೆ ಪರ್ಯಾಯವಾಗಿ ಯಾವ ವ್ಯವಸ್ಥೆಯನ್ನು ಮಾಡಿಕೊಳ್ಳಲಾಗಿದೆ?**

ಹೌದು ನಿಜ. ಮಾವಿನ ಮೇಳಗಳನ್ನು ಹಮ್ಮಿಕೊಳ್ಳಬೇಕು ಎಂದು ನಾವು ಬಹಳ ಹಿಂದೆಯೇ ಯೋಜನೆ ಮಾಡಿಕೊಂಡಿದ್ದೆವು. ಆದರೆ ಕೊರೊನಾ ಇರುವುದರಿಂದ ಜಾಸ್ತಿ ಜನ ಯಾರೂ ಸೇರುವಂತಿಲ್ಲ. ಹಾಗಾಗಿ ಪರ್ಯಾಯ ಮಾರ್ಗವನ್ನು ನಾವು ಅನುಸರಿಸಲೇಬೇಕಾಗಿತ್ತು. ಈ ಕಾರಣದಿಂದ ನಿಗಮದ ವತಿಯಿಂದ ಆರಂಭ ಮಾಡಲಾಗಿರುವ ಪೋರ್ಟಲ್‌ನಲ್ಲಿ ಈಗಾಗಲೇ ಮಾವಿನ ಹಣ್ಣಿನ ಮಾರಾಟಕ್ಕೆ ಚಾಲನೆ ನೀಡಲಾಗಿದೆ. ಈ ವೆಬ್ ತಾಣದಲ್ಲಿ ಮಾವಿನ ಹಣ್ಣುಗಳಿಗೆ ಸಂಬಂಧಿಸಿದಂತೆ ದರ ಎಷ್ಟು, ಯಾವ ಜಾತಿಯ ತಳಿ, ಎಷ್ಟು ಖರೀದಿ ಮಾಡಬೇಕು ಮುಂತಾದ ವಿವರಗಳು ಲಭ್ಯವಿರುತ್ತವೆ. ಜೊತೆಗೆ ಅತ್ಯುತ್ತಮ ಗುಣಮಟ್ಟದ ಮಾವಿನ ಹಣ್ಣುಗಳನ್ನು ಗ್ರಾಹಕರ ಮನೆ ಬಾಗಿಲಿಗೇ ತಲುಪಿಸಲು ಅಂಚೆ ಕಚೇರಿಯೊಂದಿಗೆ ಒಪ್ಪಂದ ಮಾಡಿಕೊಳ್ಳಲಾಗಿದೆ. ಪೋರ್ಟಲ್‌ನಲ್ಲಿ ಮಾವಿನ ಹಣ್ಣಿನ ಪ್ರಮಾಣವನ್ನು ಬುಕ್ ಮಾಡಿದರೆ ಅಂಚೆಯವರು ಮನೆಗೇ ಪೂರೈಕೆ ಮಾಡುತ್ತಾರೆ. ಆರಂಭದಿಂದಲೇ ನಮಗೆ ಇದಕ್ಕೆ ಉತ್ತಮ ಪ್ರತಿಕ್ರಿಯೆ ವ್ಯಕ್ತವಾಗಿದೆ. ಮೊದಲ ದಿನದಿಂದಲೇ ಎಂಟು ವೆರೈಟಿ ಮಾವು ಲಭ್ಯವಿದೆ.



ಕೆ.ವಿ.ನಾಗರಾಜು, ಅಧ್ಯಕ್ಷರು
ಮಾವು ಅಭಿವೃದ್ಧಿ ಮತ್ತು ಮಾರುಕಟ್ಟೆ ನಿಗಮ

## ವೆಬ್‌ನಲ್ಲಿ ಮಾವಿನ ಹಣ್ಣಿನ ಗುಣಗಳ ವಿವರ

ಕರ್ನಾಟಕ ಮಾವು ಅಭಿವೃದ್ಧಿ ಮತ್ತು ಮಾರುಕಟ್ಟೆ ನಿಗಮವು ಆನ್‌ಲೈನ್ ಪೋರ್ಟ್‌ಲ್‌ನಲ್ಲಿ ರಾಜ್ಯದಲ್ಲಿ ಲಭ್ಯವಾಗುವ ಎಲ್ಲ ಮಾವಿನ ತಳಿಗಳ ವಿವರಗಳು ಲಭ್ಯವಿವೆ. ಉದಾಹರಣೆಗೆ ಮಾವಿನ ಹಣ್ಣಿನಲ್ಲಿಯೇ ರಾಜ ಎಂದು ಪರಿಗಣಿಸಲಾಗಿರುವ ಬಾದಾಮಿ, ಆಲ್ಫೋನ್ಸ್, ಆಪೂಸ್ ಎಂದು ಕರೆಯಲಾಗುವ ಮಾವಿನಲ್ಲಿ ವಿಟಮಿನ್ ಸಿ ಮತ್ತು ಎ ಜೀವಸತ್ವ ಅಡಕವಾಗಿದೆ ಎಂಬುದರಿಂದ ಆರಂಭಿಸಿ ಅದರ ಗುಣಗಳನ್ನು ತಿಳಿಸಲಾಗಿದೆ. ಇದು ಏಪ್ರಿಲ್‌ನಿಂದ ಜೂನ್ ತನಕವೂ ಈ ತಳಿ ಲಭ್ಯವಿರುತ್ತದೆ ಹಾಗೂ ಹೆಚ್ಚಿನ ಪ್ರಮಾಣದಲ್ಲಿ ರಫ್ತು ಮಾಡಲಾಗುತ್ತದೆ. ಹೀಗೆ ಸೆಂದೂರ, ತೋತಾಪುರಿ, ಮಲ್ಲಿಕಾ, ಬಂಗನಪಲ್ಲಿ, ದಸೇಹರಿ, ಹಿಮಾಮ್ ಪಸಂದ್ ಸೇರಿದಂತೆ ಅನೇಕ ಮಾವಿನ ಹಣ್ಣಿನ ವಿವರಗಳು ಲಭ್ಯ.

ಈಗಾಗಲೇ ಈ ವೆಬ್ ತಾಣಕ್ಕೆ ಹನ್ನೆರಡು ಲಕ್ಷಕ್ಕೂ ಅಧಿಕ ಜನ ಭೇಟಿ ನೀಡಿರುವುದರಿಂದ ಮುಂದಿನ ದಿನಗಳಲ್ಲಿ ಗ್ರಾಹಕರಿಂದ ಹೆಚ್ಚಿನ ಪ್ರೋತ್ಸಾಹ ದೊರೆಯಲಿದೆ ಎಂಬುದು ನಿಮಗದ ಆಶಯವಾಗಿದೆ.



ಈ ಬಾರಿ ನಾವು ದೆಹಲಿಯಲ್ಲಿಯೂ ಕರ್ನಾಟಕದ ಮಾವು ಮೇಳ ಆಯೋಜಿಸಬೇಕು ಎಂದು ಯೋಚನೆ ಮಾಡಿ ಕಾರ್ಯಕ್ರಮ ರೂಪಿಸಿದ್ದೆವು. ಕೋವಿಡ್‌ನಿಂದಾಗಿ ದೆಹಲಿ ಲಾಕ್‌ಡೌನ್ ಆಗಿದ್ದರಿಂದ ಇದು ಸಾಧ್ಯವಾಗಲಿಲ್ಲ. ಜಿಲ್ಲೆಗಳಲ್ಲಿಯೂ ಮೇಳಗಳನ್ನು ಹಮ್ಮಿಕೊಳ್ಳಬೇಕು ಎನ್ನುವ ಯೋಚನೆ ಇತ್ತು. ಮೇ ತಿಂಗಳ ಕೊನೆಯ ವಾರ ಅಥವಾ ಜೂನ್ ತಿಂಗಳಲ್ಲಿ ಕೊರೊನಾ ಸೋಂಕು ಕಡಿಮೆಯಾದರೆ ಮೇಳಗಳನ್ನು ನಡೆಸುವ ಯೋಚನೆ ಕೂಡ ಇದೆ.

**ಬಳಕೆದಾರರಿಗೆ ಪೂರೈಕೆ ಮಾಡುವ ಕೆಲಸದಲ್ಲಿ ನಿಗಮ ಬೇರೆ ಯಾವ ರೀತಿ ಸಹಾಯ ಮಾಡಲಿದೆ?**

ನಿಗಮದ ಕಡೆಯಿಂದ ಪೋರ್ಟಲ್ ವ್ಯವಸ್ಥೆ ಮಾಡುತ್ತೇವೆ. ಇದು ಅತ್ಯಂತ ಪಾರದರ್ಶಕವಾಗಿರುತ್ತದೆ. ನಮ್ಮಲ್ಲಿ ನೋಂದಣಿ ಮಾಡಿಕೊಂಡ ಮಾವು ಬೆಳಗಾರರಿಗೆ ಮಾತ್ರ ಇದರಲ್ಲಿ ಅವಕಾಶವಿರುತ್ತದೆ. ಪೋರ್ಟಲ್‌ನಲ್ಲಿ ಮಾವು ಮಾರಾಟ ಮಾಡುತ್ತಿರುವ ರೈತರ ವಿವರ ಕೂಡ ಇರುತ್ತದೆ. ಆ ಮಾಹಿತಿಯನ್ನು ರೈತರೇ ಪಡೆದು ಅವರೇ ಅಂಚೆ ಕಚೇರಿಗೆ ಮಾವಿನ ಹಣ್ಣನ್ನು ಪ್ಯಾಕ್ ಮಾಡಿ ಕೊಡುತ್ತಾರೆ. ಹಾಗಾಗಿ ಇಲ್ಲಿ ನಿಗಮ ಖರೀದಿ, ಸಾಗಾಟ, ಸಂಗ್ರಹ ಮಾಡುವುದಿಲ್ಲ. ಒಂದು ರೀತಿಯಲ್ಲಿ ಇದು ರೈತರಿಂದಲೇ ನೇರವಾಗಿ ಬಳಕೆದಾರರಿಗೆ ಸರಬರಾಜು ಮಾಡಿದಂತೆ.

ಇದರ ಜೊತೆಗೆ ಇನ್ನೂ ಒಂದು ಯೋಜನೆಯಿದೆ. ಬೆಂಗಳೂರು ಅಪಾರ್ಟ್‌ಮೆಂಟ್‌ಗಳ ಅಸೋಸಿಯೇಷನ್ ಜೊತೆ ಒಪ್ಪಂದ ಮಾಡಿಕೊಳ್ಳಲಿದ್ದೇವೆ. ಅವರು ಎಲ್ಲ ಅಪಾರ್ಟ್‌ಮೆಂಟ್‌ಗಳಿಂದಲೂ ಮಾವಿನ ಹಣ್ಣಿನ ಆರ್ಡರ್‌ನ್ನು ಪಡೆದುಕೊಂಡು ನಮಗೆ ವಿವರವನ್ನು ನೀಡುತ್ತಾರೆ. ಎಷ್ಟು ಪ್ರಮಾಣದ ಹಣ್ಣಿನ ಅಗತ್ಯವಿದೆ ಎಂಬ ವಿವರಗಳನ್ನು ನಾವು ರೈತರಿಗೆ ಕೊಡುತ್ತೇವೆ. ರೈತರೇ ನೇರವಾಗಿ ಅಪಾರ್ಟ್‌ಮೆಂಟ್‌ಗಳಿಗೆ ತಲುಪಿಸಲಿದ್ದಾರೆ. ಇದರಿಂದ ರೈತರಿಗೆ ತುಂಬ ಸಹಾಯವಾಗಲಿದೆ. ನಿಗಮವು ರೈತರಿಗೆ ಸಾಧ್ಯವಾದಷ್ಟು ರೀತಿಯಲ್ಲಿ ನೆರವಾಗುವ ಉದ್ದೇಶ ಇದಾಗಿದೆ.

Download From : www.kpscvaani.com



## ಪಾರದರ್ಶಕ ವೆಬ್ ತಾಣ

ಕರಸಿರಿ ಮ್ಯಾಂಗೋಸ್ ಎಂಬ ಹೆಸರಿನ ಮಾವಿನ ಹಣ್ಣು ಮಾರಾಟ ಮಾಡುವ ವೆಬ್ ಪೋರ್ಟಲ್ ಹೆಚ್ಚು ಪಾರದರ್ಶಕವಾಗಿದೆ. ಮಾವಿನ ಹಣ್ಣನ್ನು ಕೊಳ್ಳುವ ಬಳಕೆದಾರರಿಗೆ ಅದನ್ನು ಬೆಳೆಯುವ ರೈತ ಯಾರು ಎಂಬುದು ಕೂಡ ತಿಳಿದಿರುತ್ತದೆ. ಉದಾಹರಣೆಗೆ ಸೆಂದೂರ ಮಾವಿನಹಣ್ಣು ಬೆಳೆಯುವ ರೈತ ಚಿಕ್ಕಬಳ್ಳಾಪುರದ ನಾರಾಯಣ ಸ್ವಾಮಿ ಎಂಬ ಮಾಹಿತಿ ಕೂಡ ಅಲ್ಲಿಯೇ ಲಭ್ಯವಿರುತ್ತದೆ ಮತ್ತು ಹಣ ಕೂಡ ಆ ರೈತನಿಗೆ ಪಾವತಿಯಾಗುತ್ತದೆ. ಮೂರು ಕೇಜಿ ಬಾಕ್ಸ್‌ಗಳನ್ನು ಪ್ರತ್ಯೇಕವಾಗಿ ಸರಬರಾಜು ಮಾಡುವ ವ್ಯವಸ್ಥೆ ಮಾಡಲಾಗಿದ್ದು ಅದರಲ್ಲಿ ಶಿಪ್ಪಿಂಗ್ ಚಾರ್ಜ್ ಒಳಗೊಂಡಿರುತ್ತದೆ.

ಆರಂಭದಲ್ಲಿಯೇ ರಾಮನಗರ ಜಿಲ್ಲೆಯಿಂದ 60 ಟನ್ ಮಾವು ಬಂದಿದ್ದು ಎಲ್ಲವೂ ಮಾರಾಟವಾಗಿರುವುದು ಉತ್ತೇಜನಕಾರಿ ಅಂಶವಾಗಿದೆ.

**ಆನ್‌ಲೈನ್ ಪೋರ್ಟಲ್‌ನಲ್ಲಿ ಯಾವ ರೀತಿಯ ಬೇಡಿಕೆ ವ್ಯಕ್ತವಾಗಿದೆ? ಈ ಋತುವಿನಲ್ಲಿ ಎಷ್ಟು ಟನ್ ಮಾವು ಮಾರಾಟ ಮಾಡುವ ಗುರಿ ಹೊಂದಲಾಗಿದೆ?**

ನಿಜಕ್ಕೂ ಉತ್ತಮ ಪ್ರತಿಕ್ರಿಯೆಯಿದೆ. ಜನರಿಗೆ ಉತ್ತಮ ತಳಿಯ ಮಾವಿನ ಹಣ್ಣಿನ ಅಗತ್ಯವಿದೆ ಎಂಬುದರ ಸೂಚನೆ ಇದಾಗಿದೆ. ಕಳೆದ ಬಾರಿ ಆನ್‌ಲೈನ್ ಮೂಲಕವೇ 100 ಟನ್ ಮಾವಿನ ಹಣ್ಣನ್ನು ಮಾರಾಟ ಮಾಡಿದ್ದೆವು. ಈಗ ಬೇಗ ಇದಕ್ಕೆ ಚಾಲನೆ ಸಿಕ್ಕಿರುವುದರಿಂದ ಈ ಋತುವಿನಲ್ಲಿ ಕನಿಷ್ಠ ಏಳುನೂರು ಟನ್ ಮಾರಾಟ ಮಾಡುವ ಗುರಿ ಇಟ್ಟುಕೊಂಡಿದ್ದೇವೆ.

ಹಿಂದಿನ ವರ್ಷಗಳಲ್ಲಿ ನಾವು ಬಳಕೆದಾರರನ್ನು ನೇರವಾಗಿ ಮಾವಿನ ತೋಪಿಗೇ ಕರೆದೊಯ್ದು ಮರದಿಂದಲೇ ಹಣ್ಣುಗಳನ್ನು ಕಿತ್ತು ತಿನ್ನುವ ವ್ಯವಸ್ಥೆ ಮಾಡುತ್ತಿದ್ದೆವು. ರೈತರಿಗೆ ಅಲ್ಲಿಯೇ ಖರೀದಿ ಮತ್ತು ಹಣ ಪಾವತಿಯೂ ಆಗುತ್ತಿತ್ತು ಮತ್ತು ಬಳಕೆದಾರರಿಗೆ ಒಂದು ಭಿನ್ನ ಅನುಭವವೂ ಆಗುತ್ತಿತ್ತು. ಈ ಬಾರಿ ಕೊರೊನಾ ಕಾರಣದಿಂದ ಅದು ಕಷ್ಟವಾಗಿದೆ.

**ಈ ಬಾರಿ ಮಾವಿನ ಇಳುವರಿ ಹೇಗಿದೆ? ಎಷ್ಟು ಟನ್ ಬೆಳೆ ಬರುವ ನಿರೀಕ್ಷೆ ಇದೆ?**

ಈ ಬಾರಿ ಕೆಲವು ಭಾಗಗಳಲ್ಲಿ ಅಕಾಲಿಕವಾಗಿ ಮಳೆ ಸುರಿದಿದ್ದರಿಂದ ತೊಂದರೆಯಾಗಿದೆ. ಹಾಗಾಗಿ ಮಾವಿನ ಇಳುವರಿ ಕಡಿಮೆಯಾಗಲಿದೆ. ಸುಮಾರು ಹದಿನಾಲ್ಕು ಲಕ್ಷ ಟನ್ ಮಾವು ಇಳುವರಿಯಾಗಲಿದೆ ಎಂದು ನಿರೀಕ್ಷೆ ಮಾಡಿದ್ದೆವು. ಮಳೆ ಬಂದಿದ್ದರಿಂದ ಕಡಿಮೆಯಾಗಬಹುದು. ಆರಂಭಿಕವಾಗಿ ರಾಮನಗರ, ಚಿಕ್ಕ ಬಳ್ಳಾಪುರ ಮತ್ತು ಧಾರವಾಡ ಜಿಲ್ಲೆಗಳಿಂದ ಈಗ ಮಾವಿನ ಬೆಳೆ ಬರಲು ಶುರುವಾಗಿದೆ.

**ಬಳಕೆದಾರರಿಗೆ ರಾಸಾಯನಿಕ ಮುಕ್ತವಾದ, ನಿಸರ್ಗದತ್ತವಾಗಿ ಹಣ್ಣು ಮಾಡಲಾದ ಮಾವಿನಹಣ್ಣನ್ನು ನೀಡುವ ಬಗ್ಗೆ ನಿಗಮ ಕಾಳಜಿ ವಹಿಸಿದೆ?**

ಈಗ ರಾಸಾಯನಿಕವನ್ನು ಬಳಸಿ ಹಣ್ಣು ಮಾಡುವ ಪದ್ಧತಿಯೇ ಇಲ್ಲ. ಮೊದಲು ಹಣ್ಣು ಮಾಡಲು ಕಾರ್ಬೈಡ್ ಬಳಸುತ್ತಿದ್ದರು. ಅವನ್ನೆಲ್ಲ ಈಗ ನಿಷೇಧಿಸಲಾಗಿದೆ. ಫಲಭರಿತವಾದ ಮಾವಿನಕಾಯಿಯ ಪೆಟ್ಟಿಗೆಗೆ ಎನ್‌ರೈಪ್ ಎಂಬ ದ್ರಾವಣವನ್ನು ಸಿಂಪಡಣೆ ಮಾಡುತ್ತಾರೆ. ಅದು ಎಥಿನಾಲ್ ಬಿಡುಗಡೆ ಮಾಡುತ್ತದೆ. ಅದನ್ನು ಹಾಕಿದರೆ ಮೂರು ದಿನಕ್ಕೆ ಚೆನ್ನಾಗಿ ಹಣ್ಣಾಗುತ್ತದೆ ಮತ್ತು ಇದರಿಂದ ಯಾವುದೇ ಹಾನಿ ಇರುವುದಿಲ್ಲ.

**ಕರ್ನಾಟಕದಲ್ಲಿ ಹೆಚ್ಚು ಮಾವಿನ ಇಳುವರಿಯಾಗುವ ಜಿಲ್ಲೆಗಳು ಯಾವುವು?**

ರಾಜ್ಯದಲ್ಲಿ ಹೆಚ್ಚು ಮಾವಿನ ಬೆಳೆಯಾಗುವ ಜಿಲ್ಲೆಗಳೆಂದರೆ ಕೋಲಾರ ಮತ್ತು ಚಿಕ್ಕ ಬಳ್ಳಾಪುರ. ಕೋಲಾರ ಜಿಲ್ಲೆಯ ಶ್ರೀನಿವಾಸಪುರದಿಂದ ಹೆಚ್ಚು ಮಾವಿನ ಬೆಳೆ ಬರುತ್ತದೆ. ಇಲ್ಲಿ ಎಲ್ಲಾ ವೆರೈಟಿ ಮಾವು ಬೆಳೆಯುತ್ತಾರೆ. ತೋತಾಪುರಿ ಹೆಚ್ಚಿನ ಪ್ರಮಾಣದಲ್ಲಿ ಬರುತ್ತದೆ. ಜುಲೈ ತಿಂಗಳ ವರೆಗೂ ತೋತಾಪುರಿ ಹಣ್ಣು ಬರುತ್ತದೆ. ಹಾಗಾಗಿಯೇ ಕೊರೊನಾ ಸೋಂಕು ಕಡಿಮೆಯಾದರೆ ಜೂನ್ ಮಧ್ಯಭಾಗದಲ್ಲಿಯೂ ಕೂಡ ನಾವು ಮಾವು ಮೇಳವನ್ನು ಮಾಡಬಹುದು.

**ಅಕಾಲಿಕ ಮಳೆ ಬಿದ್ದಿದ್ದರಿಂದ ಮಾವು ಬೆಳೆಗಾರರಿಗೆ ಆದ ನಷ್ಟವನ್ನು ತುಂಬಲು ಅವರಿಗೆ ಆರ್ಥಿಕ ನೆರವನ್ನು ಒದಗಿಸುವ ಬಗ್ಗೆ ಏನಾದರೂ ಯೋಚನೆ?**

ಆರ್ಥಿಕ ನೆರವು ನೀಡುವುದು ಕಷ್ಟವಾಗುತ್ತಿದೆ. ಕೋವಿಡ್ ಬಂದಿದ್ದರಿಂದ ಹಣಕಾಸಿನ ಕೊರತೆ ಇದೆ. ಹಾಗಾಗಿ ಸರ್ಕಾರ ನಮಗೆ ಬಿಡುಗಡೆ ಮಾಡಿರುವ ನಿಧಿ ಕೂಡ ಕಡಿಮೆ. ಆದ್ದರಿಂದ ನಾವು ಆರ್ಥಿಕವಾಗಿ ಸಹಾಯ ಮಾಡುವ ಸ್ಥಿತಿಯಲ್ಲಿ ಇಲ್ಲ. ಆದರೆ ಬೆಳಗಾರರಿಗೆ ಶೇ.50ರ ಸಹಾಯಧನದಲ್ಲಿ ಮಾವಿನ ಹಣ್ಣಿನ ಸಂಗ್ರಹಕ್ಕೆ ಕ್ರೇಟ್‌ಗಳನ್ನು ಸರಬರಾಜು ಮಾಡುತ್ತಿದ್ದೇವೆ. ಜೊತೆಗೆ ಕಾರಿಗೇಟೆಡ್ ಬಾಕ್ಸ್‌ಗಳನ್ನು ವಿತರಣೆ ಮಾಡುತ್ತೇವೆ. ಇದಕ್ಕೆ ಜಿಲ್ಲೆಗಳಲ್ಲಿಯೇ ಬೆಳೆಗಾರರಿಂದ ಅರ್ಜಿಗಳನ್ನು ಪಡೆದು ವ್ಯವಸ್ಥೆ ಮಾಡುತ್ತಿದ್ದೇವೆ.

ಪೋರ್ಟಲ್ ವಿವರ:
https://www.karsirimangoes.karnataka.gov.in/







## ಇಹಲೋಕ ತ್ಯಜಿಸುವುದರೊಂದಿಗೆ ನಿಘಂಟು ಲೋಕದೊಡನೆ ಕಳಚಿದ ಮಹಾನಂಟು

# ಪ್ರೊ. ಜಿ. ವೆಂಕಟಸುಬ್ಬಯ್ಯ

ಡಿ. ಪಿ. ಮುರಳೀಧರ್


**ಅತ್ಯುತ್ತಮ ಅನುವಾದಕ, ಖ್ಯಾತ ಬರಹಗಾರ, ನಿಘಂಟು ಪಿತಾಮಹ, ಪದ ಬ್ರಹ್ಮ, ಸರ್ವಶ್ರೇಷ್ಠ ವ್ಯಾಕರಣಕಾರ, ಸುಪ್ರಸಿದ್ಧ ಸಂಶೋಧನಾಕಾರ, ಹೆಸರಾಂತ ವಿಮರ್ಶಕ, ಶಿಕ್ಷಣ ತಜ್ಞ, ಕಟ್ಟಾ ಗಾಂಧೀವಾದಿ ಹಾಗೂ ಶತಾಯುಷಿ ಪ್ರೊಫೆಸರ್ ಜಿ. ವೆಂಕಟಸುಬ್ಬಯ್ಯ ಅವರು ಇನ್ನಿಲ್ಲ. ವಯೋಸಹಜ ಕಾಯಿಲೆಯಿಂದ ಬೆಂಗಳೂರಿನಲ್ಲಿ ಏಪ್ರಿಲ್ 19 ರಂದು ನಸುಕಿನಲ್ಲಿಯೇ ಇಹಲೋಕ ತ್ಯಜಿಸುವುದರೊಂದಿಗೆ ಪ್ರೊ ವೆಂಕಟಸುಬ್ಬಯ್ಯ ಅವರು ನಿಘಂಟು ಲೋಕದೊಡನೆ ಇರಿಸಿಕೊಂಡಿದ್ದ ಮಹಾ ನಂಟು ಕಳಚಿದಂತಾಗಿದೆ.**

ಹಿನ್ನೆಲೆ

ಗಂಜಾಂ ತಿಮ್ಮಣ್ಣಯ್ಯ ಮತ್ತು ಸುಬ್ಬಮ್ಮ ದಂಪತಿಯ ಮಗನಾಗಿ 1913 ರ ಆಗಸ್ಟ್ 23 ರಲ್ಲಿ ವೆಂಕಟಸುಬ್ಬಯ್ಯ ಅವರು ಜನಿಸಿದರು. ತಂದೆ ತಿಮ್ಮಣ್ಣಯ್ಯ ಅವರು ಮೈಸೂರು ಅರಮನೆಯ ವಿದ್ವಾಂಸರು. ಕನ್ನಡ ಮತ್ತು ಸಂಸ್ಕೃತ ಭಾಷಾ ಪಂಡಿತರು. ವೇದ ಮತ್ತು ಉಪನಿಷತ್ತುಗಳ ಪಾರಾಂಗತರು. ಪುರಾಣ ಕಥಾವಳಿ ಎಂಬ ಮಾಸ ಪತ್ರಿಕೆಯನ್ನು ಸ್ಥಾಪಿಸಿದ್ದರು. ಶಿವ ಮಹಾ ಪುರಾಣ, ವಿಷ್ಣು ಪುರಾಣದಲ್ಲಿನ ಆಧ್ಯಾತ್ಮಿಕ ಕಥನಗಳನ್ನು ಸಂಸ್ಕೃತ ಭಾಷೆಯಿಂದ ಕನ್ನಡ ಭಾಷೆಗೆ ಅನುವಾದ ಮಾಡಿ ಪ್ರಕಟಿಸುತ್ತಿದ್ದರು. ರಘುವೀರ ಚರಿತೆ ನಾಟಕವನ್ನು ರಚಿಸಿದ್ದ ತಿಮ್ಮಣ್ಣಯ್ಯ ಅವರು ಮಾಲತಿ–ಮಾಧವ ನಾಟಕವನ್ನು ಅನುವಾದಿಸಿ ಪ್ರಕಟಿಸಿದ್ದರು. ಅಂದಿನ ಕಾಲದಲ್ಲಿಯೇ ಅನೇಕ ಮುದ್ರಣಗಳನ್ನು ಕಂಡ ಗಣೇಶ ಪುರಾಣದ ಕಥೆ ತಿಮ್ಮಣ್ಣಯ್ಯ ಅವರಿಗೆ ಕೀರ್ತಿ–ಗೌರವಗಳನ್ನು ತಂದುಕೊಟ್ಟ ಜನಪ್ರಿಯ ಪುಸ್ತಕ. ತಾಯಿ ಸುಬ್ಬಮ್ಮ ಗೃಹಿಣಿ.

Download From : www.kpscvaani.com





## ಗುರುಗಳಿಗೆ ಗುರು !

ವೆಂಕಟಸುಬ್ಬಯ್ಯ ಅವರು ಮೈಸೂರಿನ ಮಹಾರಾಜಾ ಮಹಾವಿದ್ಯಾಲಯದಲ್ಲಿ 1937 ರಲ್ಲಿ ಕನ್ನಡ ಭಾಷೆಯಲ್ಲಿ ಸ್ನಾತಕ ಪದವಿ ಪಡೆದದ್ದು ಮಾತ್ರವಲ್ಲ, ಪ್ರಥಮ ಸ್ಥಾನ ಗಳಿಸಿ ಸುವರ್ಣ ಪದಕದ ಗೌರವಕ್ಕೂ ಭಾಜನರಾಗಿದ್ದರು. ನಂತರ, 1939 ರಲ್ಲಿ ಮೈಸೂರು ವಿಶ್ವವಿದ್ಯಾಲಯದಲ್ಲಿ ಶಿಕ್ಷಣದಲ್ಲಿ ಪದವಿ (ಬ್ಯಾಚುಲರ್ ಆಫ್ ಟೀಚಿಂಗ್ ) ಯನ್ನೂ ಗಳಿಸಿದರು. ತದನಂತರ, ಅದೇ ವರ್ಷ ತಾವು ವ್ಯಾಸಂಗ ಮಾಡಿದ ಮೈಸೂರಿನ ಮಹಾರಾಜಾ ಮಹಾವಿದ್ಯಾಲಯದಲ್ಲಿಯೇ



ಉಪನ್ಯಾಸಕರಾಗಿ ವೃತ್ತಿ ಪ್ರಾರಂಭಿಸಿದ ವೆಂಕಟಸುಬ್ಬಯ್ಯ ಅವರು 1943 ರಿಂದ 1973 ರ ವರೆಗೆ ಬೆಂಗಳೂರಿನ ವಿಜಯಾ ಮಹಾವಿದ್ಯಾಲಯದಲ್ಲಿ ಉಪನ್ಯಾಸಕರ ಹುದ್ದೆಯಿಂದ ಪ್ರಾಧ್ಯಾಪಕರ ಹುದ್ದೆಯವರೆಗೆ ಸತತ ಮೂರು ದಶಕಗಳ ಕಾಲ ಸೇವೆ ಸಲ್ಲಿಸಿದರಲ್ಲದೆ, ವಿಜಯಾ ಸಂಜೆ ಮಹಾವಿದ್ಯಾಲಯದ ಪ್ರಾಂಶುಪಾಲರಾಗಿಯೂ ಕಾರ್ಯ ನಿರ್ವಹಿಸಿದರು. ರಾಷ್ಟ್ರೀಯ ಶಿಕ್ಷಣ ಮಹಾವಿದ್ಯಾಲಯದಲ್ಲಿ ಕನ್ನಡ ಭಾಷಾ ಬೋಧನಾ ಮಾರ್ಗಗಳ ವಿಶೇಷ ಪ್ರಾಧ್ಯಾಪಕರಾಗಿ ಹಾಗೂ ಭಾರತ ಶಿಕ್ಷಣ ಮಹಾವಿದ್ಯಾಲಯಗಳಲ್ಲಿ ಸಂದರ್ಶಕ ಪ್ರಾಧ್ಯಾಪಕರಾಗಿ ಸೇವೆ ಸಲ್ಲಿಸಿ ಭವಿಷ್ಯದ ಗುರುಗಳಿಗೆ ಗುರುಗಳಾದರು.

## ನಿಘಂಟು ಎಂಬುದಕ್ಕೆ ಪರ್ಯಾಯವೂ ಉಂಟು !

ತಮ್ಮ ವಯೋನಿವೃತ್ತಿಯ ನಂತರ, ನಿಘಂಟು ಕ್ಷೇತ್ರವನ್ನು ಪ್ರವೇಶಿಸಿದ ಪ್ರೊ ಜಿ ವೆಂಕಟಸುಬ್ಬಯ್ಯ ಅವರು ಕರ್ನಾಟಕ ಸರ್ಕಾರದಿಂದ ಒಂದು ಕೋಟಿ ರೂ ಆರ್ಥಿಕ ನೆರವು ಪಡೆದ ಕನ್ನಡ ಸಾಹಿತ್ಯ ಪರಿಷತ್ ನ ಕನ್ನಡ-ಕನ್ನಡ ಬೃಹತ್ ನಿಘಂಟು ಯೋಜನೆಯಲ್ಲಿ 1973 ರಿಂದ 1992 ರವರೆಗೆ ಈ ಯೋಜನೆಯ ಪ್ರಧಾನ ಸಂಪಾದಕರಗಿ ತಮ್ಮನ್ನು ತಾವು ತೊಡಗಿಸಿಕೊಂಡು ಸರಿ ಸುಮಾರು ಎರಡು ದಶಕಗಳ ಕಾಲ ಸದ್ದು ಮಾಡದೆಯೇ ಶಬ್ದಲೋಕದಲ್ಲಿ ಪಯಣಿಸಿ ಏಳು ಸಂಪುಟಗಳನ್ನು ಸಿದ್ಧಪಡಿಸಿಕೊಡುವಲ್ಲಿ ಯಶಸ್ವಿಯಾದರು. ಇದೀಗ 9000 ಪುಟಗಳ ನಿಘಂಟು ಸಿದ್ಧವಾಗಿದೆ. ಅಲ್ಲದೆ, 2010 ರಲ್ಲಿಯೇ ಮರು ಮುದ್ರಣಗೊಂಡಿದೆ.

ನಿಘಂಟು ಎಂಬುದಕ್ಕೆ ಪರ್ಯಾಯ ಅಥವಾ ಸಮಾನಾರ್ಥಕವೂ ಇದೆಯೇ ? ಎಂಬುದು ನಿಮ್ಮ ಪ್ರಶ್ನೆಯಾದರೆ, ಏಕಿಲ್ಲ ? ಎಂಬ ಮರು ಪ್ರಶ್ನೆಯೇ ನನ್ನ ಉತ್ತರ !

ಯಾವುದೇ ಭಾಷೆಯಲ್ಲಿ ಪ್ರತಿಯೊಂದು ಪದಕ್ಕೂ ಕನಿಷ್ಠ ಒಂದು ಪರ್ಯಾಯ ಅಥವಾ ಸಮಾನಾರ್ಥಕ ಪದ ಇರುತ್ತದೆ. ಅಂತೆಯೇ, ನಿಘಂಟು ಎಂಬ ಪದಕ್ಕೂ ಹಲವು ಪರ್ಯಾಯ ಅಥವಾ ಸಮಾನಾರ್ಥಕ ಪದಗಳಿವೆ !

## ನಡೆದಾಡುವ ನಿಘಂಟು !

ನಿಘಂಟು ಎಂಬ ಪದವನ್ನು ಪದ ಕೋಶ, ಶಬ್ದ ಕೋಶ, ಅರ್ಥ ಕೋಶ ಅಥವಾ ಶಬ್ದಾರ್ಥ ಕೋಶ ಎಂದೂ ಕರೆಯಬಹುದು. ಆದರೆ, ನಿಘಂಟು ಎಂಬ ಮೂರಕ್ಷರದ ಪದ ಮನದಲ್ಲಿ ಮೂಡಿಸುವ ಪೂರ್ಣ ಪ್ರಮಾಣದ ಛಾಪು ಮಾತ್ರ ಈ ನಾಲ್ಕೂ ಪರ್ಯಾಯ ಅಥವಾ ಸಮಾನಾರ್ಥಕ ಪದಗಳು ಮೂಡಿಸುವುದಿಲ್ಲ ಎಂಬುದನ್ನು ಸಂಪೂರ್ಣವಾಗಿ ಅರಿತೂ ಕೂಡಾ ನಿಘಂಟು ಎಂಬ ಪದಕ್ಕೆ ಪರ್ಯಾಯ ಅಥವಾ ಸಮಾನಾರ್ಥಕವೂ ಇದೆ ಎಂದು ಸ್ಪಷ್ಟವಾಗಿ ಹೇಳುವ ಧೈರ್ಯ ತಮಗಿದೆಯೇ ?

ಹೌದು ! ನಿಘಂಟು ಎಂಬುದಕ್ಕೆ ಪರ್ಯಾಯ ಅಥವಾ ಸಮಾನಾರ್ಥಕ ಮಾತ್ರವಲ್ಲ, ಮುಂಜಾನೆಯಿಂದ ಮುಸ್ಸಂಜೆಯವರೆಗೂ ಸದಾ ಪದಗಳ ಜೊತೆ ಬಂಧವಿರಿಸಿಕೊಂಡಿರುವ ನಡೆದಾಡುವ ನಿಘಂಟನ್ನೇ ನಾವು ಕಂಡಿದ್ದೇವೆ ! ಅವರೊಂದಿಗೆ ಮಾತನಾಡಿದ್ದೇವೆ !! ಭಾಷಾ ಪ್ರಯೋಗ ಕುರಿತ ನಮ್ಮ ಹಲವು ಅನುಮಾನಗಳನ್ನು ಪರಿಹರಿಸಿಕೊಂಡಿದ್ದೇವೆ !!! ಪದ ಪ್ರಯೋಗ ಕುರಿತ ನಮ್ಮ ಹಲವು ಸಂದೇಹಗಳನ್ನು ಬಗೆಹರಿಸಿಕೊಂಡಿದ್ದೇವೆ !!!!

ಓಹ್ ! ಈ ನಡೆದಾಡುವ ನಿಘಂಟು ಎಲ್ಲಿದೆ ? ಹೇಗಿದೆ ? ಎಂದು ಶಂಕಿಸುವುದು ಬೇಡ ! ಅದುವೇ ಪ್ರೊಫೆಸರ್ ಗಂಜಾಂ ವೆಂಕಟಸುಬ್ಬಯ್ಯ !!

ಕನ್ನಡ ಸಾರಸ್ವತ ಲೋಕದಲ್ಲಿ ಪ್ರೊ ಜೀವಿ ಎಂದೇ ಚಿರಪರಿಚಿತರಾಗಿದ್ದ ಈ ಸರಳ ಹಾಗೂ ಸ್ನೇಹ ಜೀವಿಗೆ ಇದೀಗ ನಿಘಂಟಿನ ಲೋಕದೊಡನೆ ನಂಟು ಕಳಚಿಕೊಂಡಿದೆ ! ಇದು ಕನ್ನಡಿಗರೆಲ್ಲರಿಗೂ ಅತ್ಯಂತ ದುಃಖದ ವಿಚಾರ ಹಾಗೂ ನೋವಿನ ಸಂಗತಿ. ಅಲ್ಲವೇ ?

## ಅದ್ಭುತ ಜೀವಿಯಿಂದ ತುಂಬು ಹೃದಯದ ಸ್ವಾಗತ !

ಒಂದು ನೂರು ವರ್ಷಗಳ ತುಂಬು ಜೀವನ ನಡೆಸಿದ ಪ್ರೊ ಜಿ. ವೆಂಕಟಸುಬ್ಬಯ್ಯ ಅವರು ಶತಾಯುಷಿಗಳ ಪಟ್ಟಿಗೆ ಸೇರ್ಪಡೆಯಾದ ಸಂದರ್ಭದಲ್ಲಿ ಭೇಟಿಯಾಗಿ ಅವರ ದಿನಚರಿಯನ್ನು ತಿಳಿದುಕೊಳ್ಳುವ ಕಾತುರ ನನ್ನದಾಗಿತ್ತು. ಜಯನಗರ ಏಳನೇ ಬಡಾವಣೆಯ ಅವರ ನಿವಾಸಕ್ಕೆ ತೆರಳಿದೆ. ಶತಾಯುಷಿಯಿಂದ ನನಗೆ ತುಂಬು ಹೃದಯದ ಸ್ವಾಗತದೊರೆತದ್ದು ನನ್ನಲ್ಲಿ ಎಕಕಾಲಕ್ಕೆ ಅಚ್ಚರಿ ಮತ್ತು ಆನಂದ ಮೂಡಿಸಿತು.

ಹಸನ್ಮುಖಿ ಸದಾ ಸುಖಿ ಎಂಬ ಮಾತಿಗೆ ಉತ್ತಮ ಉದಾಹರಣೆ ಎನಿಸಿರುವ ಈ ಅದ್ಭುತ ಜೀವಿ ಪ್ರತಿದಿನವೂ ಬೆಳಿಗ್ಗೆ ನಾಲ್ಕೂವರೆ ಗಂಟೆಗೆ ಏಳುತ್ತಾರೆ. ಐದು ಗಂಟೆಯ ವೇಳೆಗೆ ವಾಯು ವಿಹಾರಕ್ಕೆ ತೆರಳುವ ಮುನ್ನ, ತಮ್ಮ 90 ರ ಹರೆಯದ ತಮ್ಮ ಪತ್ನಿಗೆ



ಮೈಸೂರು ವಿಶ್ವವಿದ್ಯಾಲಯದ ಶತಮಾನೋತ್ಸವ ಸಂದರ್ಭದಲ್ಲಿ ಪ್ರಣಬ್ ಮುಖರ್ಜಿ ಅವರಿಂದ ಸನ್ಮಾನಿತರಾದ ಸಂದರ್ಭ.

ಬೆಳಗಿನ ಕಾಫಿ ಮಾಡಿಕೊಡುತ್ತಾರೆ ! ವಾಯು ವಿಹಾರದಿಂದ ಮನೆಗೆ ಮರಳಿದೊಡನೆಯೇ ಸುದ್ದಿ ಪತ್ರಿಕೆಗಳ ' ಅಧ್ಯಯನ ' ದಲ್ಲಿ ಮಗ್ನರಾಗುತ್ತಾರೆ ! ನಂತರ ಬೆಳಗಿನ ಉಪಾಹಾರ ಸೇವನೆ ! ಬರವಣಿಗೆಯ ಮೂಲಕ ಚಿಂತನೆಗಳ ಮೆರವಣಿಗೆ !

ಮಧ್ಯಾಹ್ನ ಮಜಭೂತಾದ ಸಸ್ಯಾಹಾರಿ ಊಟದ ಸೇವನೆ ! ವಾಚನಾ ಲೋಕದಲ್ಲಿ ವಿಹಾರ ! ಕಡಲೇಪುರಿಗೆ ಖಾರಾ ಬೆರೆಸಿ ತಯಾರಿಸುವ ಖಾರಾ ಪುರಿ ವೆಂಕಟಸುಬ್ಬಯ್ಯ ಅವರಿಗೆ ಸಂಜೆಯ ಕಾಫಿಯ ಜೊತೆಗಿನ ಸಾಮಾನ್ಯ ಸಂಗಾತಿ ! ಕೆಲವೊಮ್ಮ ರುಚಿಕರ ಕೋಡು ಬಳೆ ಅಥವಾ ಚಕ್ಕುಲಿ ಸಂಜೆಯ ವಿಶೇಷ ! ಹ್ಞಾ ! ಈ ಇಳಿ ವಯಸ್ಸಿನಲ್ಲೂ ಕೋಡು ಬಳೆ ಹಾಗೂ ಚಕ್ಕುಲಿ ತಿನ್ನಲು ಜೀವಿ ಅವರ ಹಲ್ಲುಗಳು ಗಟ್ಟಿಯಾಗಿವೆ !


ಹುಣಸೆ ಸಾರು ತಯಾರು ಮಾಡುವಲ್ಲಿಯೂ ನಿಷ್ಣಾತರಾದ ವೆಂಕಟಸುಬ್ಬಯ್ಯ ಅವರು ಎಲ್ಲರಂತೆಯೇ ಚಿತ್ರಾನ್ನ ಹಾಗೂ ಪುಳಿಯೋಗರೆ ತಿನ್ನುತ್ತಾರೆ. ವಿಶೇಷ ದಿನಗಳಲ್ಲಿ ತಮ್ಮ ಅಚ್ಚು ಮೆಚ್ಚಿನ ಶಾಲ್ಯಾನ್ನ ಹಾಗೂ ಹಾಲ್ ಬಾಯ್ ಸವಿಯುತ್ತಾರೆ. ಸಿಹಿ ತಿನಿಸು ಸವಿಯುವಷ್ಟೂ ತಮ್ಮ ಆರೋಗ್ಯವನ್ನು ಸುಸ್ಥಿತಿಯಲ್ಲಿಟ್ಟು ಕೊಂಡಿದ್ದಾರೆ ! ಜೀವಿ ಅವರ ದೈಹಿಕ ಮತ್ತು ಮಾನಸಿಕ ಜೀರ್ಣ ಶಕ್ತಿ ಮತ್ತು ಸಾಮರ್ಥ್ಯ ಅತ್ಯುತ್ತಮವಾಗಿದೆ ಎಂಬ ವಿಶೇಷ ಸಂಗತಿಗಳು ನನ್ನನ್ನು ಉಲ್ಲಸಿತಗೊಳಿಸಿದವು.

## ತಂದೆಯ ಮಾತು !

ಒಂಬತ್ತು ಮಕ್ಕಳಲ್ಲಿ ಮೊದಲಿಗರಾದ ಪ್ರೊ ವೆಂಕಟಸುಬ್ಬಯ್ಯ ಅವರಿಗೆ ಬಾಲ್ಯದಿಂದಲೂ ತಂದೆಯ ಮಾತೇ ವೇದ ವಾಕ್ಯ! ಜೀವಿ ಎಂದೂ ತಮ್ಮ ಜೀವನದಲ್ಲಿ ತಂದೆಯ ಮಾತನ್ನು ಎಂದೂ ಮೀರಲೇ ಇಲ್ಲ. ಅಷ್ಟೇ ಅಲ್ಲ ! ಕೊನೆಯುಸಿರೆಳೆಯುವವರೆಗೂ ಅಪ್ಪನ ಮಾತನ್ನು ಪಾಲಿಸಿಕೊಂಡುಬಂದಿದ್ದಾರೆ. ಸಣ್ಣದಕ್ಕೇ ತೃಪ್ತರಾಗಿ ಸಂತೃಪ್ತ ಜೀವನ ನಡೆಸಬೇಕೆಂಬ ಪಿತೃ ವಾಕ್ಯವನ್ನೂ ಪರಿಪಾಲಿಸಿರುವ ವೆಂಕಟಸುಬ್ಬಯ್ಯ ಅವರಿಗೆ ಬರವಣಿಗೆಯನ್ನು ಹೊರತು ಪಡಿಸಿ ಬೇರಾವುದೇ ಅಭ್ಯಾಸವಿಲ್ಲ !

Download From : www.kpscvaani.com




सत्यमेव जयते
प्रधान मंत्री
Prime Minister

New Delhi
वैशाख 02, शक संवत् 1943
April 22, 2021

Shri G.V. Aruna Ji,

I am deeply pained to learn about the passing away of Prof. G. Venkatasubbaiah Ji. Heartfelt condolences to you in this hour of intense grief.

Prof. Venkatasubbaiah Ji wrote extensively in Kannada and made an outstanding contribution to Kannada literature. His undying efforts to promote and popularise Kannada language will always be remembered. His literary works will continue to inspire younger generations.

Words can't express the void caused in your life due to his demise. A caring and affectionate father, Prof. Venkatasubbaiah Ji may no longer be physically present with you, but the values instilled by him will always be a source of inspiration for the family.

May the Almighty grant the family members and well-wishers the strength to bear this irreparable loss.

May the departed soul rest in peace.

Om Shanti!

(Narendra Modi)

Shri G.V. Aruna
No 58, 31st Cross
7th Block, Jayanagar
Bengaluru
Karnataka – 560070

ಆಗಾಗ ಮನೆಗೆ ಗೆಳೆಯರು ಆಗಮಿಸಿದರೆ ಹರಟೆ ಹೊಡೆಯುವ ಚಟವಿದೆ. ಅಷ್ಟೇ !!

### ಪದ ಬ್ರಹ್ಮ !

ಬರವಣಿಗೆಯ ಹಲವು ಪ್ರಾಕಾರಗಳಲ್ಲಿ ಕಥೆ, ಕಾದಂಬರಿ, ಕವನ, ಕಾವ್ಯ ಇವೆಲ್ಲಕ್ಕೂ ವಿಭಿನ್ನ ಮತ್ತು ವಿಶಿಷ್ಟ ನಿಘಂಟು ರಚನೆ ! ಇತ್ತೀಚಿನ ದಿನಗಳಲ್ಲಿ ಸಾಮಾನ್ಯ ಬರವಣಿಗೆಯೇ ಕ್ಷೀಣಿಸುತ್ತಿರುವ ಸಂದರ್ಭದಲ್ಲಿ ನಿಘಂಟು ರಚನೆಯಲ್ಲಿ ತೊಡಗಿದ್ದ ವೆಂಕಟಸುಬ್ಬಯ್ಯ ಅವರು ನಿಜವಾದ ಅರ್ಥದಲ್ಲಿ ಪದ ಬ್ರಹ್ಮ !

ವೆಂಕಟಸುಬ್ಬಯ್ಯ ಅವರು ಈವರೆಗೆ ಹತ್ತಕ್ಕೂ ಹೆಚ್ಚು ಕನ್ನಡ–ಕನ್ನಡ, ಆಂಗ್ಲ–ಕನ್ನಡ ಭಾಷಾ ನಿಘಂಟುಗಳನ್ನು ಸಂಪಾದಿಸಿದ್ದಾರೆ ! ಶಬ್ದದ ವ್ಯುತ್ಪತ್ತಿ ಸಹಿತ ಕನ್ನಡ ಕ್ಲಿಷ್ಟಪದ ಕೋಶವನ್ನೂ ರಚಿಸಿದ್ದಾರೆ!

ಪ್ರೊ ವೆಂಕಟಸುಬ್ಬಯ್ಯ ಅವರು ಪ್ರಜಾವಾಣಿ ಕನ್ನಡ ದಿನಪತ್ರಿಕೆಯಲ್ಲಿ ಪ್ರತಿ ಭಾನುವಾರವೂ ಭಾಷಾ ಬಳಕೆ ಮತ್ತು ಸಮಸ್ಯೆಗಳ ಕುರಿತು ಓದುಗರ ಪ್ರಶ್ನೆಗಳಿಗೆ ಉತ್ತರಿಸಿ ಬರೆಯುತ್ತಿದ್ದ **"ಇಗೋ ಕನ್ನಡ"** ಅಂಕಣ ಸತತವಾಗಿ 18 ವರ್ಷಗಳನ್ನು ಪೂರ್ಣಗೊಳಿಸಿ ದಾಖಲೆ ಸೃಷ್ಟಿಸಿದೆ. ಅಲ್ಲದೆ, ಜನಸಾಮಾನ್ಯರ ಭಾಷಾ ಜ್ಞಾನವನ್ನೂ ವೃದ್ಧಿಸಲು ಪೂರಕವಾಗಿದೆ. ಶಬ್ದಗಳಿಗೆ ಅರ್ಥ–ವಿವರಣೆಗಳನ್ನು ನೀಡುತ್ತಲೇ ಕನ್ನಡ ಭಾಷೆ ಹಾಗೂ ಸಂಸ್ಕೃತಿಗಳ ಅನುಸಂಧಾನ ಕುರಿತ ಸಾಮಾಜಿಕ ಚಿಂತನೆಗಳಿಗೆ ಹೊಸ ಆಯಾಮವನ್ನು ದೊರಕಿಸಿಕೊಟ್ಟ **"ಇಗೋ ಕನ್ನಡ"** ಸಾಮಾಜಿಕ ನಿಘಂಟು ರೂಪದಲ್ಲಿ ಮೂರು ಭಾಗಗಳಲ್ಲಿ ಹೊರಹೊಮ್ಮಿದೆ. ಪ್ರೊ ವೆಂಕಟಸುಬ್ಬಯ್ಯ ಅವರ ಇಗೋ ಕನ್ನಡದ ಹೊಸ ಪ್ರಯತ್ನ ಭಾರತದ ಇತರೆ ಭಾಷೆಗಳಿಗೂ ಚಿಂತನಾಶೀಲ ಮಾರ್ಗದರ್ಶಿಯಾಗಿ ಮಾದರಿ ಎನಿಸಿದೆ. ಕನ್ನಡಕ್ಕೆ ಇತರ ಭಾಷೆಗಳಿಂದ ಬಂದಿರುವ ಶಬ್ದಗಳ ಪ್ರಥಮ ನಿಘಂಟು **"ಎರವಲು ಪದಕೋಶ"** ಕನ್ನಡ ಭಾಷೆಯ ಕಠಿಣ ಶಬ್ದಗಳ ನಿಘಂಟು **"ಕನ್ನಡ ಕ್ಲಿಷ್ಟಪದ ಕೋಶ"** ಹಾಗೂ ನಿಘಂಟು ಶಾಸ್ತ್ರದ ಬಗ್ಗೆ ಹೊಸಗನ್ನಡದ ಮೊಟ್ಟ ಮೊದಲ ಪುಸ್ತಕ **"ಕನ್ನಡ ನಿಘಂಟು ಶಾಸ್ತ್ರ ಪರಿಚಯ"** ಇವೆಲ್ಲವೂ ಕನ್ನಡ ಭಾಷಾ ಲೋಕಕ್ಕೆ ಪ್ರೊ ವೆಂಕಟಸುಬ್ಬಯ್ಯ ಅವರ ಸ್ಮರಣಾರ್ಹ ಕೊಡುಗೆಗಳು.

### ಪರಿಷತ್‌ನೊಂದಿಗೆ ಒಡನಾಟ ಮತ್ತು ಸಾಹಿತ್ಯ ಕೃಷಿ

ಪ್ರಾಧ್ಯಾಪಕ ವೃತ್ತಿ ಪ್ರಾರಂಭಿಸಿದ 15 ವರ್ಷಗಳ ನಂತರ, ಅಂದರೆ 1954 ರಲ್ಲಿ ಕನ್ನಡ ಸಾಹಿತ್ಯ ಪರಿಷತ್ ನೊಂದಿಗೆ ಒಡಾನಾಟ ಪ್ರಾರಂಭಿಸಿದ ಪ್ರೊ ವೆಂಕಟಸುಬ್ಬಯ್ಯ ಅವರು ಆರು ದಶಕಗಳಿಗೂ ಹೆಚ್ಚು ಕಾಲ ಸುಮಧುರ ಬಾಂಧವ್ಯವನ್ನು ಇರಿಸಿಕೊಂಡಿದ್ದರು. ನಯಸೇನ ಮತ್ತು ಅನುಕಲ್ಪನೆ ಪ್ರೊ ಜೀವಿ ಅವರ ವಿಮರ್ಶಾ ಕೃತಿಗಳು.


ಮೂರು ಭಾಗಗಳಲ್ಲಿ ಪ್ರಕಟಗೊಂಡಿರುವ ಭಾಷಾಂತರ ಪಾಠಗಳು, ಕಾಲೇಜು ಭಾಷಾಂತರ, ಕನ್ನಡ ಶಾಸನ ಪರಿಚಯ, ಸಾಹಿತ್ಯ ಮತ್ತು ಶಿಕ್ಷಣ, ಕನ್ನಡ ಸಾಹಿತ್ಯ ನಡೆದು ಬಂದ ದಾರಿ, ಕನ್ನಡವನ್ನು ಉಳಿಸಿ ಬೆಳೆಸಿದವರು, ಕನ್ನಡದ ನಾಯಕ ಮಣಿಗಳು, ಕರ್ನಾಟಕ ವೈಭವ ಮತ್ತು ಇತರ ಶಬ್ದಚಿತ್ರಗಳು, ಪ್ರೊ ಟಿ ಎಸ್. ವೆಂಕಣ್ಣಯ್ಯನವರು, ಡಿ. ವಿ. ಗುಂಡಪ್ಪ, ಪರಾಮರ್ಶನ, ಕಾವ್ಯ ಚಿಂತನ, ಸೀಳು ನೋಟ, ಮಾರ್ಗದರ್ಶಕರು, ಗತಿಪ್ರಜ್ಞೆ, ಸಮಯ–ಸಂದರ್ಭ–ಸನ್ನಿವೇಶ ಹಾಗೂ ಕುಮಾರವ್ಯಾಸನ ಅಂತರಂಗ - ಯುದ್ಧ ಪಂಚಕದಲ್ಲಿ ಇವೆಲ್ಲವೂ ವೆಂಕಟಸುಬ್ಬಯ್ಯ ಅವರ ಸಾಹಿತ್ಯ ಕೃಷಿಗೆ ಸಾಕ್ಷಿ !

ನಳಚಂಪು ಸಂಗ್ರಹ, ಅಕ್ರೂರ ಚರಿತೆಯ ಸಂಗ್ರಹ, ಕರ್ಣಕರ್ಣಾಮೃತ, ನಾಗರಸನ ಕನ್ನಡ ಭಗವದ್ಗೀತೆ, ಎರಡು ಭಾಗಗಳಲ್ಲಿ ಮುದ್ದಣ ಭಂಡಾರ, ಶ್ರೀರಾಮ ಸಂಭವ, ಬಾಳಿಗೊಂದು ಬೆಳಕು ರಾಮಾಯಣದ ದೃಷ್ಟಿ, ಕರ್ನಾಟಕದ ಏಕೀಕರಣದ ಅನುಭವಗಳು, ಸಂಸ್ಕೃತದ ರಾಮಾಯಣ ನಾಟಕಗಳಲ್ಲಿ ಪಾತ್ರ ವೈವಿಧ್ಯ, ಭರ್ತೃ ಹರಿಯ ವಾಕ್ಯಪದೀಯದ ಒಂದು ಸಮುದ್ದೇಶದ ಅನುವಾದದ ಸಂಪಾದನಾ ಕೃತಿ " ಸಾಧನಾ ಸಮುದ್ದೇಶ ", ಕನ್ನಡ ಕಥೆಗಳ ಸಂಕಲನ, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಆಶ್ರಯದಲ್ಲಿ ನಡೆದ ಅನುವಾದ ಕಮ್ಮಟದಲ್ಲಿ ತೆಲುಗು, ತಮಿಳು ಮತ್ತು ಮಲೆಯಾಳಂ ಕಥಾ ಕೃತಿಗಳ ಸಂಪಾದನೆ, ತತ್ವಜ್ಞಾನಿ ಜಿಡ್ಡು ಕೃಷ್ಣಮೂರ್ತಿ ಅವರ ಬಿಯಾಂಡ್ ದ ಅನ್‌ನೋನ್ ಕೃತಿಯ ಅನುವಾದ " ತಿಳಿದುದೆಲ್ಲವ ಬಿಟ್ಟು ", ಹಳೆಗನ್ನಡದಿಂದ ಮುದ್ದಣನ ಮೂರು ರಾಮಾಯಣಗಳು, ಇದು ನಮ್ಮ ಭಾರತ ಭಾಗ 15 ರಿಂದ 25 ರವರೆಗೆ 11 ಪುಸ್ತಕಗಳು, ಲಿಂಡನ್ ಜಾನ್‌ಸನ್ ಕಥೆ, ಸಂಯುಕ್ತ ಸಂಸ್ಥಾನಗಳನ್ನು ಪರಿಚಯಮಾಡಿಕೊಳ್ಳಿ, ಶಂಕರಾಚಾರ್ಯ, ಭಕ್ತ ಕಬೀರ, ಒರಿಯಾದ ಕವಿ ಸರಳಾದಾಸ, ದಾಸ ಸಾಹಿತ್ಯ, ಸಚಿತ್ರ ರಾಮಾಯಣ ದರ್ಶನ.... ಇವು ಪ್ರೊ ಜೀವಿ ಅವರು ಜೀವ ನೀಡಿರುವ ಕೃತಿಗಳು. ರಾಬಿನ್‌ಸನ್ ಕ್ರೂಸೋ, ಕವಿ ಜನ್ನ, ಚಾವುಂಡರಾಯ ಮತ್ತು ಚಿಣ್ಣರ ಚಿತ್ರ ರಾಮಾಯಣ ಜೀವಿ ಅವರ ಮಕ್ಕಳ ಪುಸ್ತಕಗಳು.

ಕನ್ನಡ ಸಾಹಿತ್ಯ ಕ್ಷೇತ್ರದಲ್ಲಿನ ಸಾಧನೆಗಾಗಿ 1991 ರಲ್ಲಿ ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ, 2007 ರಲ್ಲಿ ಕರ್ನಾಟಕ ಏಕೀಕರಣ ಸುವರ್ಣ ಪುರಸ್ಕಾರ, ಹಂಪಿ ಕನ್ನಡ ವಿಶ್ವವಿದ್ಯಾಲಯದ ನಾಡೋಜ ಪ್ರಶಸ್ತಿ, 2013 ರಲ್ಲಿ ಕಿತ್ತೂರು ರಾಣಿ ಚೆನ್ನಮ್ಮ ವಿಶ್ವವಿದ್ಯಾಲಯದ ಗೌರವ ಡಾಕ್ಟರೇಟ್, 2014 ರಲ್ಲಿ ಪಂಪ ಪ್ರಶಸ್ತಿ, 2017 ರಲ್ಲಿ ಪದ್ಮಶ್ರೀ ಹಾಗೂ ಕೇಂದ್ರ ಸಾಹಿತ್ಯ ಅಕಾಡೆಮಿಯ ಭಾಷಾ ಸಮ್ಮಾನ್ ಪ್ರಶಸ್ತಿ ಹೀಗೆ ಹಲವಾರು ಪ್ರಶಸ್ತಿಗಳು ಪ್ರೊ ವೆಂಕಟಸುಬ್ಬಯ್ಯ ಅವರ ಬತ್ತಳಿಕೆಯಲ್ಲಿ ತುಂಬಿವೆ.

### ಆಗಸದ ಎತ್ತರಕ್ಕೆ !

ಮೂರ್ತಿ ಚಿಕ್ಕದಾದರೂ ಕೀರ್ತಿ ದೊಡ್ಡದು ಎಂಬ ಗಾದೆ ಮಾತಿದೆ. ಕನ್ನಡ ಭಾಷಾ ವಿಷಯದಲ್ಲಿ ಸ್ನಾತಕೋತ್ತರ ಪದವಿಯಲ್ಲಿ ಸ್ವರ್ಣ ಪದಕ ಗಳಿಸಿರುವ ಹೆಮ್ಮೆ ವೆಂಕಟಸುಬ್ಬಯ್ಯ ಅವರದು. ಪದಗಳ ಜೊತೆಗಿನ ತಮ್ಮ ಬಾಂಧವ್ಯಕ್ಕೆ ಮೈಸೂರು ವಿಶ್ವವಿದ್ಯಾಲಯದ ವ್ಯಾಸಂಗದ ಅವಧಿಯಲ್ಲಿ ತಮ್ಮ ಅಚ್ಚು ಮೆಚ್ಚಿನ ಗುರುಗಳಾದ ಪ್ರೊ ಎ. ಆರ್. ಕೃಷ್ಣ ಶಾಸ್ತ್ರಿ, ಬಿ. ಎಂ. ಶ್ರೀಕಂಠಯ್ಯ, ಟಿ. ಎಸ್. ವೆಂಕಣಯ್ಯ ಅವರನ್ನು ಪ್ರೊ ಜೀವಿ ಸದಾ ಸ್ಮರಿಸುತ್ತಿದ್ದರು.


ಮನೆಯಲ್ಲಿ ಅಧ್ಯಯನದಲ್ಲಿ ತಲ್ಲೀನರಾಗಿರುವುದು

ಮೊದಲು ಶಿಕ್ಷಕರಾಗಿ ನಾಲ್ಕು ದಶಕಗಳ ಸೇವೆ ಸಲ್ಲಿಸಿರುವ ವೆಂಕಟಸುಬ್ಬಯ್ಯ ಅವರು ಇದೇ ಅವಧಿಯಲ್ಲೇ ಸಾಹಿತ್ಯ ಕೃಷಿಯಲ್ಲಿ ತೊಡಗಿಸಿಕೊಂಡು ಸೃಜನಶೀಲ ಸಾಹಿತ್ಯ ರಚಿಸಿದ್ದಾರೆ. ನಂತರ ಭಾಷಾ ಸಂಶೋಧನಾ ಮತ್ತು ವಿಮರ್ಶಾ ಲೋಕದ ವ್ಯವಸಾಯದಲ್ಲೂ ಮುನ್ನಡೆದು ನಿಘಂಟು ತಜ್ಞರಾಗಿ ರೂಪುಗೊಂಡು ಆಗಸದ ಎತ್ತರಕ್ಕೆ ಬೆಳೆದದ್ದು ಇದೀಗ ಇತಿಹಾಸ.


ಎಲ್.ಕೆ. ಅಡ್ವಾಣಿ ಅವರು ಪ್ರೊ.ಜಿ.ವೆಂಕಟಸುಬ್ಬಯ್ಯ ಅವರ ಪುಸ್ತಕವನ್ನು ಬಿಡುಗಡೆ ಮಾಡಿದ ಸಂದರ್ಭ.

### ಪ್ರತಿದಿನದ ಗೆಳೆಯ !


ಭಾಷಾ ಬೆಳವಣಿಗೆ ನಿರಂತರ. ಇದು ಸೀಮಾತೀತ. ಅನ್ಯ ದೇಶೀಯ ಶಬ್ದಗಳೂ ಕನ್ನಡ ಭಾಷೆಯ ಸಿರಿ ಸೊಬಗನ್ನು ವೃದ್ಧಿಸುತ್ತದೆ ಎಂದೇ ನಂಬಿದ್ದ ಜೀವಿ ಅವರು ವಿದ್ಯಾರ್ಥಿಗಳಿಗೆ, ಶಿಕ್ಷಕರಿಗೆ, ಲೇಖಕರಿಗೆ, ಭಾಷಾಂತರಕಾರರಿಗೆ ಹಾಗೂ ಜನಸಾಮಾನ್ಯರಿಗೆ ನಿಘಂಟು ಪ್ರತಿದಿನದ ಗೆಳೆಯನಾಗಬೇಕು ಎಂದು ಬಣ್ಣಿಸಿದ್ದರು.

### ವಿದೇಶದಲ್ಲಿ ಮಕ್ಕಳು

ಪ್ರೊ ವೆಂಕಟಸುಬ್ಬಯ್ಯ ಅವರ ಮಕ್ಕಳು ಹಾಗೂ ಮೊಮ್ಮಕ್ಕಳು ಅಮೇರಿಕಾದಲ್ಲಿದ್ದಾರೆ. ಮಕ್ಕಳು, ವಿಶೇಷವಾಗಿ ಮೊಮ್ಮಕ್ಕಳು, ವರ್ಷಕ್ಕೊಮ್ಮೆ ಭಾರತಕ್ಕೆ ಬಂದರೆಂದರೆ ಜೀವಿಗೆ ಸಂಭ್ರಮವೋ ಸಂಭ್ರಮ ! ಮಕ್ಕಳೊಂದಿಗೆ ಮಾತುಕತೆ. ಮೊಮ್ಮಕ್ಕಳಿಗೆ ಕಥೆ. ಮಕ್ಕಳು, ಮೊಮ್ಮಕ್ಕಳು ವಿದೇಶಕ್ಕೆ ವಾಪಸ್ಸಾದಾಗ ಸ್ವಲ್ಪದಿನ ಮೋಡ ಕವಿದ ಚಂದ್ರನಂತಾಗುತ್ತಿದ್ದ ಜೀವಿ ಅವರಿಗೆ ಕೊನೆಯವರೆಗೂ ಸೇವೆ ಮಾಡಿದ್ದು ಮಗ ಜಿ ವಿ. ಅರುಣ್.

**ಮಹಾತ್ಮ ಮಾಡಿದ್ದು ಕೇವಲ ಹತ್ತು ನಿಮಿಷಗಳ ಭಾಷಣ ! ಹಳ್ಳಿಗರು ನೀಡಿದ್ದು ಬುಟ್ಟಿಗಟ್ಟಲೆ ದೇಣಿಗೆ !!**

Download From : www.kpscvaani.com



ಪುಸ್ತಕ ಮಳಿಗೆಯೊಂದರ ಕಾರ್ಯಕ್ರಮದಲ್ಲಿ ಸಾಹಿತಿ ಡಾ: ಚಂದ್ರಶೇಖರ ಕಂಬಾರ ಅವರೊಂದಿಗೆ.

ಬೆಂಗಳೂರಿನ ಚಾಮರಾಜಪೇಟೆಯಲ್ಲಿರುವ ಶಾರದಾ ಸ್ತ್ರೀ ಸಮಾಜದ ಸಹಯೋಗ ಹಾಗೂ ಸಹಭಾಗಿತ್ವದಲ್ಲಿ 2018 ರ ಅಕ್ಟೋಬರ್ 2 ರಂದು ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ಆಯೋಜಿಸಿದ್ದ ರಾಷ್ಟ್ರಪಿತ ಮಹಾತ್ಮ ಗಾಂಧಿ ಅವರ 150 ನೇ ಜನ್ಮ ವರ್ಷಾಚರಣೆಯ ಸಮಾರಂಭದ ಸುಸಂದರ್ಭದಲ್ಲಿ ಅವರು ಬಹಿರಂಗಗೊಳಿಸಿದ ವಿಚಾರ ಮೈನವಿರೇಳಿಸುವಂತಹುದು.

ಮಹಾತ್ಮ ಗಾಂಧಿ ಅವರು ಅಂದು ಮಾಡಿದ್ದು ಕೇವಲ ಹತ್ತು ನಿಮಿಷಗಳ ಭಾಷಣ ! ಅದೂ ಹಿಂದಿ ಭಾಷೆಯಲ್ಲಿ !! ಅದರಲ್ಲೂ ಹಿಂದಿ ಬಾರದ ಕನ್ನಡದ ಮಂದಿಯ ಮುಂದೆ !!! ಭಾಷಣವನ್ನು ಆಲಿಸಲು ಬಂದವರೆಲ್ಲರೂ ಹಳ್ಳಿಗಾಡಿನ ಜನರು. ಆರ್ಥಿಕವಾಗಿ ದುರ್ಬಲರು ಅರ್ಥಾತ್ ಬಡವರು. ಅದರಲ್ಲೂ ಬಹಳ ಜನರು ಮಹಿಳೆಯರು. ಆದರೆ, ಮಹಾತ್ಮನ ಭಾಷಣವನ್ನು ಅರ್ಥೈಸಿಕೊಂಡ ಜನರು ಬುಟ್ಟಿ ಬುಟ್ಟಿಗಳಲ್ಲಿ ಉದಾರ ದೇಣಿಗೆ ನೀಡಿ ಭಾರತದ ಸ್ವಾತಂತ್ರ್ಯ ಚಳುವಳಿಗೆ ಬಳುವಳಿಯಾದರು. ಅಷ್ಟೇ ಅಲ್ಲ ! ಮಹಾತ್ಮನ ದೃಷ್ಟಿಯಲ್ಲಿ ತುಮಕೂರು ಜಿಲ್ಲೆಯ ಮಧುಗಿರಿಯ ಜನರು ಅತ್ಯಂತ ಹೃದಯ ಶ್ರೀಮಂತರು ಎನಿಸಿಕೊಂಡರು ಎಂದು ಪ್ರೊ ಜಿ ವೆಂಕಟಸುಬ್ಬಯ್ಯ ಅವರು ಅಂದು ಸ್ಮರಿಸಿದರು.

### ಭಾಷಣದ ಪ್ರಭಾವ ಎಷ್ಟಿತ್ತು ? ಎಂಬುದಕ್ಕೆ ಅಲ್ಲಿ ಸಂಗ್ರಹವಾದ ದೇಣಿಗೆಯೇ ಸಾಕ್ಷಿ !

ಮಹಾತ್ಮ ಗಾಂಧಿ ಅವರು 1927 ರಲ್ಲಿ ತುಮಕೂರು ಜಿಲ್ಲೆಯ ಮಧುಗಿರಿಗೆ ಭೇಟಿ ಇತ್ತ ಸಂದರ್ಭ. ಜಿಲ್ಲಾ ಕಾಂಗ್ರೆಸ್ ನಾಯಕ ರಂಗ ಅಯ್ಯಂಗಾರ್ ಅವರು ಗಾಂಧೀಜಿ ಅವರನ್ನು ಅಲ್ಲಿಗೆ ಕರೆತಂದಿದ್ದರು. ಅಲ್ಲಿ ನೆರೆದ ಜನಸಾಗರದ ಮುಂದೆ ಬಾಪು ಅವರ ಭಾಷಣವನ್ನು ರಂಗ ಅಯ್ಯಂಗಾರ್ ಅವರೇ ಕನ್ನಡಕ್ಕೆ ಭಾಷಾಂತರ ಮಾಡಿದರು. ತೆಳ್ಳನೆ ದೇಹದ ವಯೋವೃದ್ಧ ಹಾಗೂ ತಮ್ಮ ಎದೆಗೆ ಪೂರ್ಣ ಹೊದಿಕೆ ಇಲ್ಲದ ಗಾಂಧಿ ಅವರ ಭಾಷಣದ ಪ್ರಭಾವ ಎಷ್ಟಿತ್ತು ? ಎಂಬುದಕ್ಕೆ ಅಲ್ಲಿ ಸಂಗ್ರಹವಾದ ಬೃಹತ್ ದೇಣಿಗೆಯೇ ಸಾಕ್ಷಿಯಾಗಿತ್ತು !

ಭಾಷಣವನ್ನು ಆಲಿಸಲು ಬಂದವರ ಬಳಿ ಸ್ವಾತಂತ್ರ್ಯಕ್ಕಾಗಿ ತಮ್ಮ ಕೊಡುಗೆ ನೀಡಿ ಎಂಬ ಗಾಂಧೀಜಿ ಅವರ ರಾಷ್ಟ್ರಪ್ರೇಮದ ಕರೆಗೆ ಓಗೊಟ್ಟು ನೆರೆದ ಜನರು ಸ್ಥಳದಲ್ಲಿಯೇ ಉದಾರ ದೇಣಿಗೆ ನೀಡಿದರು. ಅಲ್ಲಿ ಆಗಮಿಸಿದ್ದವರಲ್ಲಿ ಬಹುತೇಕರು ಕೇವಲ ಭಾಷಣವನ್ನು ಆಲಿಸಲು ಬಂದಿದ್ದರೇ ಹೊರತು ಕೈಯ್ಯಲ್ಲಿ ಅಥವಾ ಕಿಸೆಯಲ್ಲಿ ಹಣವನ್ನು ತಂದಿರಲಿಲ್ಲ. ಆದರೂ, ದೇಣಿಗೆಯ ಬುಟ್ಟಿಯನ್ನು ಹಿಡಿದು ಕಾಂಗ್ರೆಸ್ಸಿಗರು ಹೊರಟಾಗ ಅಲ್ಲಿ ನೆರೆದಿದ್ದ ಮಹಿಳೆಯರು ತಮ್ಮ ಬಳಿ ಇದ್ದ ಸರ, ಕೈ ಬಳೆ, ಉಂಗುರ ಹಾಗೂ ಕಾಲುಂಗುರಗಳನ್ನು ಕೊಡುಗೆಯಾಗಿ ಕೊಟ್ಟು ಉದಾರತೆಯನ್ನು ಮೆರೆದರು. ಸ್ವೀಕೃತವಾದ ದೇಣಿಗೆಯನ್ನು ಮರುದಿನ ಹರಾಜು ಹಾಕಿ ಬಂದ ಹಣವನ್ನು ಸ್ಥಳೀಯ ನಾಯಕರು ಗಾಂಧೀಜಿ ಅವರಿಗೆ ತಲುಪಿಸಿದರು ಎಂಬ ರೋಚಕ ಸತ್ಯವನ್ನು ಪ್ರೊ ವೆಂಕಟಸುಬ್ಬಯ್ಯ ಅವರು ತಮ್ಮ ನೆನಪಿನ ಅಂಗಳದಿಂದ ಎಳೆ ಎಳೆಯಾಗಿ ಬಿಚ್ಚಿಟ್ಟಾಗ ಪ್ರೇಕ್ಷಕರು ಮಂತ್ರಮುಗ್ಧರಾದರು.

### ಮರೆಯಲಾಗದ ಮಹಾತ್ಮನ ಆ ಕೈ-ಸ್ಪರ್ಶ !

ಮಧುಗಿರಿಯ ಪ್ರೌಢ ಶಾಲೆಯಲ್ಲಿ ವ್ಯಾಸಂಗ ಮಾಡುತ್ತಿದ್ದ ತಾವು ಸ್ಕೌಟ್ ಚಳುವಟಿಕೆಗಳಲ್ಲಿಯೂ ಗುರುತಿಸಿಕೊಂಡಿದ್ದರಿಂದ ಭಾಷಣದ ನಂತರ ಅಲ್ಲಿನ ಪ್ರವಾಸಿ ಮಂದಿರದಲ್ಲಿ ವಿಶ್ರಾಂತಿ ಪಡೆಯಲು ಆಗಮಿಸಿದ್ದ ಮಹಾತ್ಮ ಗಾಂಧಿ ಅವರ ಕೊಠಡಿಯ ಬಾಗಿಲು ಕಾಯುವ ಸೌಭಾಗ್ಯ ತಮ್ಮದಾಗಿತ್ತು. ಭಾಷಣ ಮುಗಿಸಿಕೊಂಡು ಬಂದ ಗಾಂಧೀಜಿ ಅವರು ತಮ್ಮ ಬಳಿ ಬಂದು ವೇದಿಕೆಯಲ್ಲಿ ಅರ್ಪಿಸಿದ್ದ ಖಾದಿ ದಾರದ ಹಾರವನ್ನು ಮೇಜಿನ ಮೇಲೆ ಇಡು ಎಂದು ಹಿಂದಿ ಭಾಷೆಯಲ್ಲಿ ಸೂಚಿಸಿದರು. ತಮಗೆ ಹಿಂದಿ ಬಾರದಿದ್ದರೂ ಗಾಂಧೀಜಿ ಅವರ ಕೈಸನ್ನೆಯ ಸಂಕೇತದ ಭಾಷೆಯನ್ನು ಅರಿತು ದಾರದ ಹಾರವನ್ನು ಮೇಜಿನ ಮೇಲಿರಿಸಿದೆ. ಹಾರವನ್ನು ನೀಡುವ ಸಂದರ್ಭದಲ್ಲಿ ಗಾಂಧೀಜಿ ಅವರು ತಮ್ಮ ಕೈಯ್ಯನ್ನು ಮುಟ್ಟಿದರು ಮಹಾತ್ಮನ ಕೈ ಸ್ಪರ್ಶದ ಸುಖವನ್ನು ನೆನೆ-ನೆನೆದು ಸಂತೋಷಪಟ್ಟೆ. ಕೈ ಸ್ಪರ್ಶದ ಆ ಸುಖವನ್ನು ನಾನೆಂದೂ ಮರೆಯಲಾರೆ ಎಂದು ಪ್ರೊ ವೆಂಕಟಸುಬ್ಬಯ್ಯ ಅವರು ಅಂದು ಭಾವುಕರಾಗಿ ನುಡಿದ ಕ್ಷಣವನ್ನು ಯಾರೂ ಮರೆಯಲಾರರು.


### ಸ್ವಾತಂತ್ರ್ಯವನ್ನು ಪ್ರೀತಿ ಮತ್ತು ವಿಶ್ವಾಸದಿಂದ ಅನುಭವಿಸಿ

ಸ್ವಾತಂತ್ರ್ಯ ಹೋರಾಟದಲ್ಲಿ ಗಾಂಧೀಜಿ ಅವರಿಗೆ ಒಳ್ಳೆಯ ಅನುಭವವಿತ್ತು. ಮೊದಲು ದಕ್ಷಿಣ ಆಫ್ರಿಕಾದಲ್ಲಿ ಅಸಮಾನತೆಯ ವಿರುದ್ಧ ಸೆಟೆದು ನಿಂತು ಗೆಲುವು ಕಂಡಿದ್ದ ಗಾಂಧೀಜಿ ಅವರಿಗೆ ನಂತರ ಭಾರತದಲ್ಲಿ ಸ್ವಾತಂತ್ರ್ಯ ದೊರಕಿಸಿಕೊಡಲು ಮುಂದಾಳತ್ವ ವಹಿಸಿಕೊಳ್ಳಲು ಸುಲಭವಾಯಿತು. ಬ್ರಿಟೀಷರೇ ಭಾರತ ಬಿಟ್ಟು ತೊಲಗಿ ಎಂಬ ಗಾಂಧೀಜಿ ಅವರ ಪ್ರಭಾವೀ ಕರೆಯ ಪರಿಣಾಮದಿಂದಾಗಿ ಭಾರತಕ್ಕೆ ಸ್ವಾತಂತ್ರ್ಯ ಲಭಿಸಿತು. ಗಾಂಧೀಜಿ ಅವರನ್ನು ಜೈಲಿಗೆ ಕಳುಹಿಸಿದ್ದಕ್ಕೆ ಪಶ್ಚಾತ್ತಾಪ ವ್ಯಕ್ತಪಡಿಸಿದ ಬ್ರಿಟೀಷರೇ ಗಾಂಧೀ ಅವರಲ್ಲಿ ಕ್ಷಮೆಯಾಚಿಸಿದರು. ಭಾರತಕ್ಕೆ ಸ್ವಾತಂತ್ರ್ಯವನ್ನು ಗಳಿಸಿಕೊಡಲು ಎಷ್ಟು ಮಂದಿ ಕಾರಾಗೃಹವಾಸ ಅನುಭವಿಸಿದರು. ಎಷ್ಟು ಜನರು ಕಷ್ಟಪಟ್ಟರು ಎಂಬುದನ್ನು ನಾವು ಅರಿತುಕೊಳ್ಳಬೇಕು. ಎಲ್ಲರೂ ಗಾಂಧೀಜಿ ಅವರ ಜೀವನ ಚರಿತ್ರೆಯನ್ನು ಅಧ್ಯಯನಿಸಬೇಕು. ನಮಗೆ ಸ್ವಾತಂತ್ರ್ಯವನ್ನು ತಂದು ಕೊಟ್ಟ ಆ ಮಹಾತ್ಮನನ್ನು ಸದಾ ಕಾಲ ನೆನಪಿಡಿ ! ನೆನಪಿಡಿ !! ನೆನಪಿಡಿ !!! ಎಂದು ಮೂರು ಬಾರಿ ಉಚ್ಚರಿಸಿದ ಪ್ರೊ ವೆಂಕಟಸುಬ್ಬಯ್ಯ ಅವರು ಸ್ವಾತಂತ್ರ್ಯವನ್ನು ಪ್ರೀತಿ ಮತ್ತು ■





ಜಯಂತಿ



# ಬಸವ ಪ್ರಜ್ಞೆ ಈ-ಕಾಲದ ತುರ್ತು

ಪ್ರೊ.ಮಂಜುನಾಥ ಉಲವತ್ತಿ ಶೆಟ್ಟರ್

**ಈ ಕಾಲದಲ್ಲಿ ಮಾನವ ಅತ್ಯಂತ ಸ್ವಾರ್ಥದಿಂದ ಬದುಕುತಿದ್ದಾನೆ. ಸಿರಿವಂತರು ಕೂಡ ಸುಖ-ಶಾಂತಿಯಿಂದ ಜೀವನ ನಡೆಸದಂತಾಗಿದೆ. ಇದಕ್ಕೆ ಕಾರಣ ಬಸವಣ್ಣನವರ ತತ್ವ ಸಿದ್ಧಾಂತಗಳನ್ನು ಜೀವನದಲ್ಲಿ ಅಳವಡಿಸಿಕೊಳ್ಳದಿರುವುದು. ಹಾಗಾಗಿ ಇಂದು ಅವರ ತತ್ವ ಸಿದ್ಧಾಂತವನ್ನು ನಮ್ಮ ಜೀವನದಲ್ಲಿ ಅಳವಡಿಸಿಕೊಳ್ಳುವ ಅತ್ಯಂತ ತುರ್ತು ಬಂದಿದೆ ಎಂದರೆ ತಪ್ಪಾಗಲಾರದು.**

ಆಧುನಿಕ ಜ್ಞಾನ ವಿಜ್ಞಾನಗಳ ಕಣ್ಣಿಗೆ ಪ್ರಾಚೀನ ಕರ್ನಾಟಕದ ಸಾಧನೆ ಕೌತುಕವಾಗಿ ಕಾಣಿಸುತ್ತದೆ. ಸಾಹಿತ್ಯವನ್ನು ಪರಿಪೂರ್ಣಗೊಳಿಸಿ ವಚನ ಸಾಹಿತ್ಯವನ್ನು ಸೃಷ್ಟಿಸಿ, ಜನಸಾಮಾನ್ಯರಿಗೆ ತಲುಪಿಸಿದ ಕೃತುಶಕ್ತಿ ಸಾಮಾನ್ಯವಾದುದಲ್ಲ. ಮುಗಿಲ ಮೇಲಿನದನ್ನು ತಿಳಿಯಲು ಪ್ರಾಚೀನ ಭಾರತೀಯರು ಖಗೋಲ ಜ್ಞಾನದಲ್ಲಿ ಪರಿಣತಿ ಪಡೆದಂತೆ ಮನಸ್ಸಿನ ಒಳಗಿನದನ್ನು ತಿಳಿಯಲು ಆಧ್ಯಾತ್ಮ ಶಕ್ತಿಯಲ್ಲಿಯೂ ಪಾರಂಗತರಾಗಿದ್ದರು. ಅಂದಿನಿಂದಲೇ ನಮ್ಮ ಭೌತಿಕ ಸಾಧನೆಯಂತೆ ಆಧ್ಯಾತ್ಮಿಕ ಸಾಧನೆಯು ಅಗಾಧವೆನಿಸಿತ್ತು. ನಂತರದಲ್ಲಿ ಹಳೆಯ ಪ್ರಜ್ಞೆ ಹಾಗೂ ಹೊಸದೃಷ್ಟಿ ಎರಡೂ ಸೋಜಿಗಪಡುವಂಥ ಸೃಷ್ಟಿ ಕಾರ್ಯವನ್ನು 12ನೆಯ ಶತಮಾನದಲ್ಲಿ ಶರಣ ಬಸವಣ್ಣನವರು ನುಡಿದಂತೆ ನಡೆದು ತೋರಿಸಿದ ಕಾಲಘಟ್ಟವದು.

ಎಲ್ಲಾ ವಿಚಾರ ಹಾಗೂ ಭಾವನೆಗಳಲ್ಲಿ ಅಭಿವ್ಯಕ್ತಿಯನ್ನು ಒದಗಿಸಬಲ್ಲ ಒಂದು ಸಮರ್ಪಕ ಭಾಷೆಯನ್ನು ಭಾರತೀಯರು ಮೂರು ಸಾವಿರ ವರ್ಷಗಳ ಹಿಂದೆಯೇ ತಮ್ಮ ಬುದ್ಧಿಗೆ ಸಾಣೆ

Download From : www.kpscvaani.com



ಹಿಡಿದು ಹದ ಮಾಡಿಕೊಂಡಿದ್ದರು. ಈ ಸಾಹಿತ್ಯಕ ಬೌದ್ಧಿಕ ಶಕ್ತಿ ಎಲ್ಲರನ್ನೂ ತಲುಪಲು ಸಾಧ್ಯವಾಗಲಿಲ್ಲ. ಇಂದು ಭಾರತದ ಮೂಲೆ ಮೂಲೆಗಳನ್ನು ಯಾರು ಎಲ್ಲಿಯೇ ಹೋಗಿ ಸಂದರ್ಶಿಸಲಿ, ಅವರಿಗೆ ವಚನ ಸಾಹಿತ್ಯದ ಅದ್ಭುತ ಶಕ್ತಿ ಗೋಚರವಾಗಬೇಕಾದ ಬಸವ ಪ್ರಜ್ಞೆಯ ಅವಶ್ಯಕತೆ ಈ–ಕಾಲದ ತುರ್ತು ಎನಿಸಿದೆ.

ಶರಣ ಬಂಧುಗಳೆ, ಪ್ರತಿ ವರ್ಷ ಮೇ ತಿಂಗಳಲ್ಲಿ ಬಸವಣ್ಣನವರ ಮೌಲಿಕ ವಿಚಾರಗಳನ್ನು ಅರಿತು ಆಚರಿಸಲು ಸಂಕಲ್ಪ ಬದ್ಧರಾಗಬೇಕಾದ ಸುದಿನ. ಏಕೆಂದರೆ ಅವರು ಆಚರಿಸಿ ತೋರಿದ ಮೌಲ್ಯಗಳು ಸಾರ್ವಕಾಲಿಕವಾದವುಗಳು ಹಾಗೆಯೇ ಸರ್ವಜನಾಂಗಕ್ಕೆ ಒಪ್ಪಿತವಾದವುಗಳು. ಬಡತನ, ದಾರಿದ್ರ, ಶೋಷಣೆ, ಅಸಮಾನತೆ, ಅಂಧಶ್ರದ್ಧೆ, ಧರ್ಮಾಂಧತೆಗಳಿಂದ ತತ್ತರಿಸಿದ ಮನುಕುಲಕ್ಕೆ ಶಾಂತಿ, ಸಮಾಧಾನ ಹಾಗೂ ಸಂತೃಪ್ತಿಯಿಂದ ದಾರಿ ತೋರಿದವರು ಬಸವಣ್ಣನವರು. **'ಕಲ್ಯಾಣವೆಂಬ ಪ್ರಣತೆಯಲ್ಲಿ ಭಕ್ತಿರಸವೆಂಬ ತೈಲವನೆರೆದು, ಆಚಾರವೆಂಬ ಬತ್ತಿಗೆ ಬಸವಣ್ಣನೆಂಬ ಜ್ಯೋತಿಯ ಮುಟ್ಟಿಸಲು ತೊಳಗಿ ಬೆಳಗುತ್ತಿರ್ದಿತಯ್ಯ ಶಿವನಪ್ರಕಾಶ'** ಎಂಬ ಅಲ್ಲಮಪ್ರಭುದೇವರ ಶ್ರೀನುಡಿ ಬಸವಣ್ಣನವರು ಜ್ಯೋತಿ ಸ್ವರೂಪ ಎಂಬುದನ್ನು ಶ್ರುತಪಡಿಸುತ್ತದೆ. ಅವರ ದೃಷ್ಟಿಯಲ್ಲಿ ಬಸವಣ್ಣನವರು ಸಾಮಾನ್ಯ ಜ್ಯೋತಿಯಲ್ಲ ಶಿವಜ್ಯೋತಿ; ಸ್ವಯಂಪ್ರಕಾಶದಿಂ ಜಗತ್ತನ್ನೇ ಬೆಳಗಿದ ಜಗಜ್ಯೋತಿ. ಅಂತೆಯೇ ನಮ್ಮ ಗ್ರಾಮೀಣ ಜನಪದರು ಬಸವಣ್ಣನವರನ್ನು ಇಂದಿಗೂ ಜಗಜ್ಯೋತಿ ಎಂದೇ ಗೌರವಿಸುತ್ತ ಬಂದಿದ್ದಾರೆ.

ಭಕ್ತಿ ಭಂಡಾರಿ ಬಸವಣ್ಣನವರು ಒಬ್ಬ ಯುಗಪುರುಷರಾಗಿರುವುದರಿಂದಲೇ ಅವರ ನಡೆ–ನುಡಿಗಳೆಲ್ಲವೂ ಪರುಷಮಯ. ಸ್ಫಟಿಕದ ಸಲಾಕೆಯಂತೆ ನೇರ ಹಾಗೂ ಪಾರದರ್ಶಕ. **'ಎನಗಿಂತ ಕಿರಿಯರಿಲ್ಲ ಶಿವಭಕ್ತರಿಗಿಂತ ಹಿರಿಯರಿಲ್ಲ'** ಎಂದು ನಡೆದ ವಿನಯಶೀಲರವರು. ತಮ್ಮ ಸದ್ವಿನಯದಿಂದ ಸದಾಶಿವ ಒಲುಮೆಯನ್ನು ಸಾಧಿಸಿದವರು. ಮೃದು ವಚನಂಗಳೇ ಅವರಿಗೆ ಜಪತಪಂಗಳಾಗಿದ್ದವು. ಅಹಂಕಾರವನ್ನು ನಿರಸಗೈದ ಅವರೊಬ್ಬ ಅಪೂರ್ವ ಆತ್ಮಶೋಧಕರು. ಆಚಾರವೇ ಸ್ವರ್ಗ, ಅನಾಚರವೇ ನರಕ, ಇಲ್ಲಿ ಸಲ್ಲುವವರು ಅಲ್ಲಿ ಸಲ್ಲುವವರು ಎಂದು



"ನಮ್ಮ ದೇಶದ ಸರ್ವಶ್ರೇಷ್ಠ ಸಮಾಜ ಸುಧಾರಕರಲ್ಲಿ ಮಹಾಮಾನವತಾವಾದಿ ಬಸವಣ್ಣನವರು ಒಬ್ಬರು. ಭಾರತದ ಪ್ರಪ್ರಥಮ ಸ್ವತಂತ್ರ ವಿಚಾರವಾದಿ ಎಂಬ ಹೆಗ್ಗಳಿಕೆಗೆ ಪಾತ್ರರಾದವರು. 12ನೆಯ ಶತಮಾನದಲ್ಲಿ ಜರುಗಿದ ಸಮಾಜೋ–ಧಾರ್ಮಿಕ ಕ್ರಾಂತಿಯ ನೇತಾರರು."

ಉದ್ಘೋಷಿಸಿದ ಅವರು ವ್ಯಕ್ತಿಯ ವೈಯಕ್ತಿಕ ನಡವಳಿಕೆ, ಸದಾಚಾರ ಸನ್ಮಾರ್ಗಗಳಿಗೆ ಪ್ರಾಮುಖ್ಯತೆ ನೀಡಿದರು. ಕಳಬೇಡ, ಕೊಲಬೇಡ, ಹುಸಿಯ ನುಡಿಯಲು ಬೇಡ, ಮುನಿಯ ಬೇಡ ಅನ್ಯರಿಗೆ ಅಸಹ್ಯ ಪಡಬೇಡ, ತನ್ನ ಬಣ್ಣಿಸಬೇಡ, ಇದಿರ ಹಳಿಯಲು ಬೇಡ ಎಂಬ ಸಪ್ತಶೀಲಗಳ ಆಚರಣೆಗೆ ಒತ್ತು ನೀಡಿದರು. ಅಂತರಂಗಳ ಶುದ್ಧಿಗಳಿಗೆ ತನ್ಮೂಲಕ ಪರಮಾತ್ಮನ ಒಲುಮೆಗೆ ದಾರಿ ತೋರಿಸಿದರು. ಆದರೆ ಇಂದು ಬಸವಣ್ಣನವರ ವಿಚಾರಕ್ಕೆ ವಿರುದ್ಧವಾದ ಸನ್ನಿವೇಶಗಳು ನಡೆಯುತ್ತಿರುವುದನ್ನು ನೋಡುತ್ತಿದೇವೆ.

ನಮ್ಮ ದೇಶದ ಸರ್ವಶ್ರೇಷ್ಠ ಸಮಾಜ ಸುಧಾರಕರಲ್ಲಿ ಮಹಾಮಾನವತಾವಾದಿ ಬಸವಣ್ಣನವರು ಒಬ್ಬರು. ಭಾರತದ ಪ್ರಪ್ರಥಮ ಸ್ವತಂತ್ರ ವಿಚಾರವಾದಿ ಎಂಬ ಹೆಗ್ಗಳಿಕೆಗೆ ಪಾತ್ರರಾದವರು. 12ನೆಯ ಶತಮಾನದಲ್ಲಿ ಜರುಗಿದ ಸಮಾಜೋ–ಧಾರ್ಮಿಕ ಕ್ರಾಂತಿಯ ನೇತಾರರು. ಧರ್ಮ ಮತ್ತು ಜಾತಿ ಶ್ರೇಷ್ಠತೆಯ ಉತ್ತುಂಗ ಕಾಲದಲ್ಲಿ ಅವರು ಬೋಧಿಸಿದ ಕಾಯಕ, ದಾಸೋಹ ಹಾಗೂ ಸಮಾನತೆಯ ಮೌಲ್ಯಗಳು ಎಲ್ಲಾ ಕಾಲಕ್ಕೂ ವಿಶ್ವಮಾನ್ಯವಾಗಿವೆ. ತಳಸಮುದಾಯಗಳ ಶೋಷಣೆ, ವರ್ಗ–ವರ್ಣ ಭೇದಗಳಿಂದ ಮುಕ್ತ ಸಮಾಜ ನಿರ್ಮಿಸಿ ಸುಧಾರಣೆಯನ್ನು ತರಲು ಅವಿರತವಾಗಿ ಶ್ರಮಿಸಿದವರು. ಜಾತಿ, ಮತ, ಕುಲ, ವರ್ಣ, ಲಿಂಗ ಮತ್ತು ವಯಸ್ಸು ಅಂತಸ್ತುಗಳ ಅಂತರವಿಲ್ಲದೆ ಅರ್ಹತೆಯನ್ನೇ ಶ್ರೇಷ್ಠತೆಗೆ ಅಧಾರವಾಗಿಸಿಕೊಂಡಿದ್ದರವರು. 'ಸಕಲ ಜೀವಾತ್ಮರಿಗೆ ಲೇಸನೆ ಬಯಸುವ ನಮ್ಮ ಕೂಡಲ ಸಂಗಮನ ಶರಣರೆ ಕುಲಜರು' ಎಂದು ಸಾರಿದ್ದರವರು. ಇನ್ನೊಬ್ಬರ ಹಂಗಿನಲ್ಲಿ ಬದುಕುವ ಜೀವನ ನಿರರ್ಥಕವಾದುದೆಂದು ಹೇಳಿ, ದುಡಿದು ಉಣ್ಣುವ ಕಲೆಯನ್ನು ಕಲಿಸಿದರಲ್ಲದೇ ಅದಕ್ಕೆ ಕಾಯಕವೆಂದು ಹೆಸರಿಸಿದರು. ದುಡಿಮೆಯ ಫಲವನ್ನು ತಾನೊಬ್ಬನೇ ಸ್ವೀಕರಿಸದೆ ವಿನೀತಭಾವದಿಂದ ಸಮಾಜಕ್ಕೆ ಸಮರ್ಪಿಸಬೇಕೆಂಬ ಹಂಚಿಕೆ ತತ್ವವನ್ನು ಆಚರಣೆಗೆ ತಂದರು.

ಲಿಂಗ ಅಸಮಾನತೆ, ಸ್ಪೃಶ್ಯ–ಅಸ್ಪೃಶ್ಯ ಎಂಬ ಭೇದವಿಲ್ಲದೆ ಎಲ್ಲರಿಗೂ ಸಮಾನ ಅವಕಾಶಗಳನ್ನು ಬಸವಣ್ಣನವರು ಒದಗಿಸಿಕೊಟ್ಟ ಕಾಲವದು. ಅರ್ಥವಿಲ್ಲದ ಆಡಂಬರದ ಆಚರಣೆಗಳನ್ನು ಖಂಡಿಸಿದರು. **'ದೇವನೊಬ್ಬ ನಾಮ ಹಲವು, ಪರಮ ಪತಿವ್ರತೆಗೆ ಗಂಡನೊಬ್ಬ'** ಎಂದು ಹೇಳಿ ಒಬ್ಬ ದೇವನಲ್ಲಿಯೆ ನಿಷ್ಠೆ ನೆಲೆಗೊಳ್ಳಬೇಕೆಂದರು. ನಮ್ಮ ನಾಡು–ನುಡಿಗಳನ್ನು ಅನುಭಾವದ ಮಹತ್ತಿನಿಂದ ಶ್ರೀಮಂತಗೊಳಿಸಿದರು. ಅನಕೃ ಅವರು **'ಬಸವನ ಸಮಾನ ಯಾರು ಎಂದರೆ ಅವರೆ ಎಂದು ಹೇಳಬೇಕಾಗುತ್ತದೆ'** ಎನ್ನುತ್ತಾರೆ. ಈಗ ಬಸವೋತ್ತರ ಕಾಲದ ಆಧುನಿಕ ಜನರು ನಾವಾಗಿರುವುದರಿಂದ ಅವರು ಪ್ರತಿಪಾದಿಸಿದ ಜಾಗತಿಕ ಸತ್ಯಸ್ಯ ಸತ್ಯಗಳನ್ನು ಅರಿತುಕೊಂಡು ಸರಿದಾರಿಯಲ್ಲಿ ಸಾಗಬೇಕಾದ ಕಾಲ ಇದಾಗಿದೆ.

ಕೆಲವೊಮ್ಮೆ ಮಾನವನ ವಿಶೇಷತೆಯನ್ನು ಕುರಿತು ಹೇಳುವಾಗ ಮಾನವ ಪ್ರಕೃತಿ ಕಿರೀಟವಾಗಿ ಬಿಡುತ್ತಾನೆ. ಹೀಗೆ ಕಿರೀಟ ಧರಿಸಿಕೊಂಡ ಮೇಲೆ ಕೆಲವೊಮ್ಮೆ ಪ್ರಕೃತಿಯ ಕ್ಷುದ್ರ ಕೀಟಗಳಿಂತ ಕೀಳಾಗಿ ವರ್ತಿಸಲು ಪ್ರಾರಂಭಿಸಿ ಬಿಡುತ್ತಾನೆ. ಅವನ ನುಡಿಯೇ ಒಂದಾಗಿದ್ದರೆ ನಡೆಯೇ ಮತ್ತೊಂದಾಗಿರುತ್ತದೆ. ಅಂತಹ ವ್ಯಕ್ತಿಗಳನ್ನು ಕುರಿತು 'ಎನಿಸು ಕಾಲ ಕಲ್ಲು ನೀರೊಳಗಿದ್ದರೇನು ನೆನೆದು ಮೃದುವಾಗಬಲ್ಲದೇ' ಎಂದು ಬಸವಣ್ಣನವರು ಕೇಳಿದಂತಿದೆ. ಹಾಗೆ ನೋಡಿದರೆ ಎಲ್ಲರಿಗಿಂತ ಶ್ರೇಷ್ಠನೆಂದು ಭಾವಿಸಿರುವ ಮಾನವ ಪ್ರಕೃತಿಯ ಚರಾಚರಗಳಿಂದ ಕಲಿಯಬೇಕಾದ್ದು ಸಾಕಷ್ಟಿದೆ. ಮನುಷ್ಯ ಏನೇ ವಿಪತ್ತು, ನಿಂದೆ ಬಂದರೂ ತಲೆ ಮೇಲೆ ಕೈ ಹೊತ್ತು ಕೂರದೆ, ಸಿಟ್ಟು ತಂದುಕೊಳ್ಳದೇ, ತಾಳ್ಮೆ ಸಮಾಧಾನದಿಂದ ಇರುವುದನ್ನು ಕಲಿತುಕೊಳ್ಳಬೇಕಾದ ಕಾಲ ಇದಾಗಿದೆ. ಅದಕ್ಕಾಗಿಯೇ ಮಹಾದೇವಿಯಕ್ಕ 'ಲೋಕದಲ್ಲಿ ಹುಟ್ಟಿದ ಬಳಿಕ ಸ್ತುತಿ ನಿಂದೆಗಳು ಬಂದಡೆ ಮನದಲ್ಲಿ ಕೋಪ ತಾಳದೇ ಸಮಾಧಾನಿಯಾಗಿರಬೇಕು' ಎಂದಿದ್ದಾರೆ.

ಮನುಷ್ಯನೀಗ ಸ್ವಾರ್ಥದ ಮಡುವಿನಲ್ಲಿ ಬಿದ್ದು ಒದ್ದಾಡುತ್ತಿರುವ ಈ–ಕಾಲದಲ್ಲಿ ಅವನಿಗೆ ಸುಖ, ಶಾಂತಿ, ನೆಮ್ಮದಿ ಇಲ್ಲದಾಗಿದೆ. ಮಾನವನ ಸ್ವಾರ್ಥದಷ್ಟು ಜಗತ್ತಿನ ಯಾವ ಜೀವಜಂತುಗಳಿಗೂ ಇರದು. ಹೊಟ್ಟೆ ಹಸಿಯದೆ ಹುಲಿ ಬೇಟೆಯಾಡುವುದಿಲ್ಲ. ಹೊಟ್ಟೆ ತುಂಬಿದ ಮೇಲೆ ಅದರೆದುರೇ ಜಿಂಕೆ ಇದ್ದರೂ ಬೇಟೆಯಾಡುವುದಿಲ್ಲ. ಆದರೆ ಮಾನವನ ಸ್ಥಿತಿ ಹಾಗಲ್ಲ, ಅವನು ಹಸಿದಿದ್ದರೂ ಹಸಿವಾಗಿಲ್ಲವೆಂಬಂತೆ, ಹೊಟ್ಟೆ ತುಂಬಿದ್ದರೂ ತುಂಬಿಲ್ಲವೆಂಬಂತೆ ವರ್ತಿಸುವ ಜಾಣ್ಮೆ ಬೆಳೆಸಿಕೊಂಡಿದ್ದಾನೆ. ಅದಕ್ಕೆ ಕಾರಣ ಅವನಲ್ಲಿರುವ ಹೊಟ್ಟೆಕಿಚ್ಚು. ಆದರೆ ಈ ಕಿಚ್ಚು ಅವನನ್ನೇ ಸುಡುತ್ತದೆ ಎಂದೂ ಗೊತ್ತಿದ್ದರೂ ಸಹ ದುರಾಸೆಯ ಕೂಪಮಂಡೂಕವಾಗಿ ಬಿಟ್ಟಿದ್ದಾನೆ. ಅದಕ್ಕಾಗಿಯೇ ಅಂದೇ ಬಸವಣ್ಣನವರು **'ಮನೆಯೊಳಗಣ ಕಿಚ್ಚು ಮನೆಯ ಸುಟ್ಟಲ್ಲದೆ ನೆರೆಮನೆಯ ಸುಡದು'** ಎಂದು 12ನೆಯ ಶತಮಾನದಲ್ಲಿಯೇ ಬಸವಾದಿ ಶರಣರು ಮಾನವನ ಘನತೆಯನ್ನು ಎತ್ತಿ ಹಿಡಿಯುವ ನಿಟ್ಟಿನಲ್ಲಿ **'ಅನುಭವ ಮಂಟಪ'** ಎನ್ನುವ ಧಾರ್ಮಿಕ ಸಂಸತ್ತಿನ ಮೂಲಕ ಕ್ರಾಂತಿಯನ್ನು ಮಾಡಿದರು. ಆ ಕ್ರಾಂತಿಯ ಬೀಜಗಳನ್ನು ಇಂದು ಮನುಷ್ಯ ತನ್ನ ಮನದಲ್ಲಿ ಬಿತ್ತಿ ಬೆಳೆಯುವ ಸಂಕಲ್ಪ ಮಾಡಿಕೊಂಡರೆ ಈ–ಕಾಲದ ಜೀವನ ಪಾವನವಾಗುವುದು.

ಮನುಷ್ಯ ಇಂದು ತೋರಿಕೆಗೆ ಸಂಸ್ಕಾರದ ಮಾತುಗಳನ್ನಾಡಿದರಷ್ಟೇ ಸಾಲದು. ಇಂಥ ಮನಸ್ಸಿಗೆ ಸಂಸ್ಕಾರ ಕೊಡುವ ಕೆಲಸವನ್ನು ಬಸವಣ್ಣನವರು ಬಹು ವ್ಯವಸ್ಥಿತವಾಗಿ ಮಾಡಿದರು. **'ನುಡಿದರೆ ಮುತ್ತಿ ಹಾರದಂತಿರಬೇಕು'** ಎಂದರು. **'ಇವನಾರವ ಇವನಾರವ ಎನ್ನದೆ ಇವ ನಮ್ಮವ ಇವ ನಮ್ಮವ'** ಎನ್ನುವ ಭಾವನೆಯನ್ನು ಬೆಳೆಸಿಕೊಳ್ಳಬೇಕೆಂದು ಹೇಳಿದರು. **'ದಯವೇ ಧರ್ಮದ ಮೂಲ'** ಎಂದು ಧರ್ಮಕ್ಕೆ ಹೊಸ ವ್ಯಾಖ್ಯಾನ ನೀಡಿದರು. **'ನೆಲವೊಂದೇ ಹೊಲಗೇರಿ ಶಿವಾಲಯಕ್ಕೆ'** ಎಂದು ಜಾತಿಯ ಬೇರನ್ನೇ ಸುಡುವ ಪ್ರಯತ್ನ ಮಾಡಿದರು. ಸ್ಥಾವರಕ್ಕಳಿವುಂಟು ಜಂಗಮಕ್ಕಳಿವಿಲ್ಲ ಎಂದು ಬಾಹ್ಯ ಗುಡಿ ಗುಂಡಾರ ತ್ಯಜಿಸಿ ಇಷ್ಟಲಿಂಗ ದೀಕ್ಷೆಯ ಮೂಲಕ ದೇಹವನ್ನು ದೇವಾಲಯವನ್ನಾಗಿಸಿಕೊಳ್ಳುವ ವಿನೂತನ ಪದ್ಧತಿಯನ್ನು ಜಾರಿಗೆ ತಂದರು. ದೇವರು ಮತ್ತು ಭಕ್ತರನ್ನು ಪೂಜಾರಿ, ಪುರೋಹಿತರ ಕಪಿಮುಷ್ಠಿಯಿಂದ ಬಿಡಿಸಿದರು. **'ಕಿಚ್ಚು ದೈವವಲ್ಲ'** ಎಂದು ಹೋಮಾದಿ ಕ್ರಿಯೆಗಳನ್ನು ಮಾಡಿಸುವವರ ಟೊಳ್ಳುತನಕ್ಕೇ ಕಿಚ್ಚಿಟ್ಟರು.

ಜಗತ್ತಿನೆಲ್ಲೆಡೆ ಕೊಳ್ಳುಬಾಕ ಸಂಸ್ಕೃತಿ ತಾಂಡವಾಡುತ್ತಿರುವ ಈ ಹೊತ್ತಿನಲ್ಲಿ ಬಸವಣ್ಣನವರ ಸಮತಾವಾದ ವ್ಯವಸ್ಥೆಯೇ ಎಲ್ಲಾ ಕಾಲಕ್ಕೂ ಶ್ರೇಷ್ಠವೆನಿಸಿಕೊಳ್ಳುತ್ತದೆ. ಮಾರ್ಕ್ಸ್‌ನ ಸಾಮ್ಯವಾದವು ಭೌತಿಕವಾದ ತಳಹದಿಯ ಮೇಲೆ ನಿಂತಿದ್ದರೆ, ಬಸವಣ್ಣನವರ ಸಮತಾವಾದವು ಚಿತ್ ಪ್ರಧಾನವಾದದ ಮೇಲೆ ನಿಂತಿದೆ. ಮಾರ್ಕ್ಸ್‌ವಾದದಲ್ಲಿ ಜಡಶಕ್ತಿಯು ಈ ಸೃಷ್ಟಿಗೆ ಆದಿ ಕಾರಣವಾಗಿದ್ದರೆ ಬಸವ ತತ್ವದಲ್ಲಿ ಮಾನವನ ಚೈತನ್ಯ ಶಕ್ತಿಯು ಕಾರಣವಾಗಿರುತ್ತದೆ. ಮಾರ್ಕ್ಸ್‌ವಾದದಲ್ಲಿ ಸಾಮಾಜಿಕ ಪ್ರಜ್ಞೆಯೇ ಸಮತಾದೃಷ್ಟಿಗೆ ಪ್ರೇರಕ ಶಕ್ತಿಯಾದರೆ ಬಸವ ವಾದದಲ್ಲಿ ಕಾಯಕ ಸಮತಾದೃಷ್ಟಿಗೆ ಪ್ರೇರಣೆಯಾಗಿದೆ. ಮಾರ್ಕ್ಸ್‌ವಾದದಲ್ಲಿ ಧ್ಯೇಯ ಮುಖ್ಯ, ಸಾಧನೆ ಹಿಂಸಾತ್ಮಕವಾಗಿದ್ದರೂ ಪರವಾಗಿಲ್ಲ. ಆದರೆ ಬಸವ ತತ್ವದಲ್ಲಿ ಧ್ಯೇಯವಷ್ಟೇ ಚೆನ್ನಾಗಿದ್ದರಷ್ಟೇ ಸಾಲದು, ಸಾಧನವೂ ಚೆನ್ನಾಗಿರಬೇಕು. ಆದ್ದರಿಂದ ಬಸವ ತತ್ವ ಮೊದಲು ಹೃದಯ ಪರಿವರ್ತನೆಗೆ ಮಹತ್ವ ನೀಡುತ್ತದೆ. ಮಾರ್ಕ್ಸ್‌ವಾದವು ಶರೀರ ಸುಖಕ್ಕೆ, ಆರಾಮ ಜೀವನಕ್ಕೆ ಮಹತ್ವ ನೀಡಿದರೆ ಬಸವ ತತ್ವ ಶರೀರ, ಬುದ್ಧಿ ಹಾಗೂ ಆತ್ಮಕ್ಕೂ ಸಮರ್ಪಿಸಿ ಸುಖ ಸಂತೋಷದ ಆನಂದ ನೀಡುತ್ತದೆ.

ಬಸವಣ್ಣನವರ ದೃಷ್ಟಿಯಲ್ಲಿ 'ಲಿಂಗವಂತ' ಅಥವಾ 'ಲಿಂಗಾಯತ' ಒಂದು ಜಾತಿಯಲ್ಲ. ಅಂದ ಮೇಲೆ 'ಇಷ್ಟಲಿಂಗ' ಧರಿಸಿದವರೆಲ್ಲರೂ ಲಿಂಗವಂತರು. ಲಿಂಗವಂತ ಒಂದು ತತ್ವ, ಸಿದ್ಧಾಂತ, ಧರ್ಮ. ಬಸವಣ್ಣನವರ ತತ್ವಗಳನ್ನು ಯಥಾವತ್ತಾಗಿ ಅರ್ಥ ಮಾಡಿಕೊಂಡವರು ದೈನಂದಿನ ಕಾಯಕ, ಆದರ್ಶ ಜೀವನ, ಸಚ್ಚಾರಿತ್ರಕ್ಕೆ ಒತ್ತುಕೊಡುತ್ತಿದ್ದರೇ ಹೊರತು ದುಡಿಮೆ ರಹಿತ ಸಂಪಾದನೆಗೆ, ಭ್ರಷ್ಟತೆಗೆ, ದುರಾಚಾರಗಳಿಗೆ ಅವಕಾಶ ಮಾಡಿಕೊಡುತ್ತಿರಲಿಲ್ಲ.

ಕೊನೆಯದಾಗಿ, ಪ್ರಕೃತಿಯ ಸಂಪತ್ತನ್ನೆಲ್ಲ ತಾನೊಬ್ಬನೇ ಭೋಗಿಸಬೇಕೆಂಬ ಸ್ವಾರ್ಥ ಹಲವರದು. ಈ ಮನಸ್ಥಿತಿಯ ಜನ ಮತ್ತೊಬ್ಬರ ಏಳ್ಗೆಯನ್ನು ಬಯಸರು. ತಾನುಂಟೋ ಮೂರು ಲೋಕವುಂಟೋ ಎನ್ನುವಂತೆ ವರ್ತಿಸುವವರೇ ಇಂದು ಹೆಚ್ಚಾಗಿದ್ದಾರೆ. ಇನ್ನೊಬ್ಬರ ಬದುಕುನ್ನು ಗೌರವಿಸಿ ತಾನು ಬದುಕುವಲ್ಲಿ ಆನಂದವಿದೆ ಎಂಬ ಸತ್ಯ ಅರ್ಥಮಾಡಿಕೊಳ್ಳುವ ಜನರೀಗ ವಿರಳವಾಗಿದ್ದಾರೆ. ನಾವೆಷ್ಟು ವರ್ಷಗಳ ಕಾಲ ಬದುಕಿದೆವೆನ್ನುವುದಕ್ಕಿಂತ ಪರಸ್ಪರರ ಮಧ್ಯೆ ಹೇಗೆ ಬದುಕಿದೆವು ಎನ್ನುವುದು ಮುಖ್ಯ. ಆದುದರಿಂದ ನಮ್ಮ ಸುತ್ತಮುತ್ತ ಇರುವವರಿಂದ ಇವರದು ಸಾರ್ಥಕ ಬದುಕು ಎನ್ನಿಸಿಕೊಂಡು ಕೆಲಕಾಲ ಬದುಕಿದರೆ ಸಾಕು. ಪರಲೋಕದ ಚಿಂತೆ ಬಿಟ್ಟು ಈ ಲೋಕದಲ್ಲಿ ಸಲ್ಲುವಂತೆ ಬಾಳಬೇಕು ಎನ್ನುವುದಕ್ಕೆ ಒತ್ತು ಕೊಡಬೇಕಿದೆ. ಮನುಷ್ಯನಿಗೀಗ ಬೇಕಾಗಿರುವುದು ಓದು, ವಾದ, ವೇದ ಅಲ್ಲ. ದಯೆ, ಸುಚಿತ್ತ, ಸುಜ್ಞಾನ, ಲಿಂಗಭೇದ ಮತ್ತು ಜಾತಿಭೇದ ಸೂತಕಾದಿ ಕರ್ಮಗಳನ್ನು ಆಚರಿಸದೆ ಸರ್ವರನ್ನು ಸಮಾನವಾಗಿ ಕಾಣಬೇಕಿದೆ. ದೇವರಲ್ಲಿ ಇಂಥ ಬೇಡಿಕೆಯನ್ನು ನಾವು ಸಲ್ಲಿಸಿ ಅದರಂತೆ ನಡೆದುಕೊಳ್ಳುವ ಸಂಕಲ್ಪ ತಳೆದಾಗ ಬಸವ ಜಯಂತಿ ಆಚರಣೆ ಸಾರ್ಥಕವಾಗಬಹುದು. ಆಗ ಅಸಮಾನತೆ ದೂರವಾಗಿ ಬಸವಣ್ಣನವರು ಕನಸು ಕಂಡ ಕಲ್ಯಾಣ ಸಾಧಿತವಾಗಬಹುದು. ■

Download From : www.kpscvaani.com




# ಇನ್ನು ಗೆಟ್ ಸೆಟ್ ಗೋನಲ್ಲಿ ಜೆಇಇ ಪರೀಕ್ಷಾ ತರಬೇತಿಗೂ ಅವಕಾಶ

ಬಿ.ಜಿ.ಪೂರ್ಣಿಮ

**ಕೋವಿಡ್-19 ಸಾಂಕ್ರಾಮಿಕದಿಂದಾಗಿ ಪೋಷಕರಿಗೆ ತಮ್ಮ ಮಕ್ಕಳ ವಿದ್ಯಾಭ್ಯಾಸದ ಕುರಿತು ಆತಂಕ ಮನೆ ಮಾಡಿತ್ತು. ಕಲಿಕಾ ಅವಧಿಯ ಪ್ರಮುಖ ಘಟ್ಟದಲ್ಲಿರುವ ದ್ವಿತೀಯ ಪಿ.ಯು.ಸಿ ವಿದ್ಯಾರ್ಥಿಗಳು ಸ್ಪರ್ಧಾತ್ಮಕ ಪರೀಕ್ಷೆಗೆ ತಯಾರಿಯಾಗಲು ಅನುಕೂಲವಾಗುವಂತೆ ಸರ್ಕಾರವು ವೆಬ್ ಪೋರ್ಟಲ್ ಅನ್ನು ಅಭಿವೃದ್ಧಿಪಡಿಸಿ, ಕಲಿಕೆಗೆ ಅನುವು ಮಾಡಿಕೊಟ್ಟಿತು.**

ಮಕ್ಕಳ ಭವಿಷ್ಯವನ್ನು ದ್ವಿತೀಯ ಪಿ.ಯು.ಸಿ ಹಂತ ರೂಪಿಸುತ್ತದೆ. ಹಾಗಾಗಿ 2019–20 ನೇ ಶೈಕ್ಷಣಿಕ ವರ್ಷ ಕೋವಿಡ್–19 ಸಾಂಕ್ರಾಮಿಕದಿಂದ ಉಂಟಾದ ಲಾಕ್‌ಡೌನ್‌ನಿಂದ ಕಲಿಕಾ ವ್ಯವಸ್ಥೆಯು ಅಸ್ತವ್ಯಸ್ತಗೊಂಡ ಕಾರಣ ಪೋಷಕರು ಮತ್ತು ವಿದ್ಯಾರ್ಥಿಗಳು ಆತಂಕಕ್ಕೆ ಒಳಗಾಗಿದ್ದರು. ವಿದ್ಯಾರ್ಥಿಗಳು ಮತ್ತು ಪೋಷಕರ ಆತಂಕಕ್ಕೆ ಸೂಕ್ತ ಪರಿಹಾರವನ್ನು ಕಂಡುಕೊಂಡ ಸರ್ಕಾರವು ಉನ್ನತ ಶಿಕ್ಷಣ ಇಲಾಖೆಯ ವತಿಯಿಂದ ವಿದ್ಯಾರ್ಥಿಗಳಿಗೆ ಶೈಕ್ಷಣಿಕ ಪರಿಹಾರ ರೂಪವಾಗಿ http://wwwgetcetgo.in ಎಂಬ ವೆಬ್ ಪೋರ್ಟಲ್ ಅನ್ನು ಅಭಿವೃದ್ಧಿಗೊಳಿಸಿತು.

ಆ ಮೂಲಕ ಸಿಇಟಿ ಹಾಗೂ ನೀಟ್ ಪರೀಕ್ಷೆಗಳಿಗೆ ತಯಾರಾಗುತ್ತಿದ್ದ ವಿದ್ಯಾರ್ಥಿಗಳಿಗೆ ಆನ್ ಲೈನ್ ಕ್ರಾಶ್ ಕೋರ್ಸ್‌ಗಳನ್ನು ನಡೆಸಲಾಯಿತು. ಇದರ ಲಾಭವನ್ನು ಬಹುತೇಕ ಮಕ್ಕಳು ಪಡೆದುಕೊಂಡರು. ಸರ್ಕಾರದ ಈ ಪ್ರಯತ್ನಕ್ಕೆ ವಿದ್ಯಾರ್ಥಿಗಳಿಂದ ಮತ್ತು ಪೋಷಕರಿಂದ ಅದ್ಭುತ ಸ್ಪಂದನೆ ದೊರೆಯಿತು. ಇದರ ಸಹಾಯದಿಂದ ಸಿಇಟಿ ಮತ್ತು ನೀಟ್ ಪರೀಕ್ಷೆಗಳಲ್ಲಿ ಮಕ್ಕಳು ಹೆಚ್ಚಿನ ಅಂಕಗಳನ್ನು ಗಳಿಸಲು ಸಾಧ್ಯವಾಯಿತು.

ಈ ಕಾರ್ಯಕ್ರಮಕ್ಕೆ 2020ರಲ್ಲಿ ದೊರೆತ ಅದ್ಭುತ ಸ್ಪಂದನೆಯಿಂದ ಸ್ಫೂರ್ತಿಗೊಂಡು 2021 ನೇ ಸಾಲಿನಲ್ಲಿ GetCETgoಗೆ ಸರ್ಕಾರವು ಹೊಸ ಹಾಗೂ ಪರಿಷ್ಕೃತ ಲಕ್ಷಣಗಳನ್ನು ಹೊಂದುವಂತೆ ರೂಪಿಸಿ, ಸಿಇಟಿ ಮತ್ತು ನೀಟ್ ಜೊತೆಗೆ ಜೆಇಇ ಪರೀಕ್ಷೆಗಳಿಗೂ ಅನುಕೂಲವಾಗುವಂತೆ ಈ ಆಂಡ್ರಾಯ್ಡ್ ಪ್ಲೇ ಸ್ಟೋರ್ ಅನ್ನು ಸಿದ್ಧಪಡಿಸಿದೆ.

ಹೀಗೆ ಅಭಿವೃದ್ಧಿ ಪಡಿಸಲಾಗಿರುವ ವೆಬ್ ಪೋರ್ಟಲ್ ಅನ್ನು ಆಂಡ್ರಾಯ್ಡ್ ಪ್ಲೇ ಸ್ಟೋರ್‌ನಲ್ಲಿ ಲಭ್ಯವಾಗುವ ಆ್ಯಪ್ ಆಗಿಯೂ ರೂಪಿಸಿ, GetCETgo ಯೂಟೂಬ್ ಚಾನೆಲ್‌ಗೆ ಅಪ್ ಲೋಡ್ ಮಾಡಿ ಅವನ್ನು ವಿದ್ಯಾರ್ಥಿಗಳು ಉಚಿತವಾಗಿ ಬಳಕೆ ಮಾಡಲು ಅವಕಾಶ ಕಲ್ಪಿಸಲಾಗಿದೆ.

ಈ ವೆಬ್ ಪೋರ್ಟಲ್‌ನ ಕ್ರಾಶ್ ಕೋರ್ಸ್‌ನಲ್ಲಿ ಕೆಸಿಇಟಿ ಮತ್ತು ನೀಟ್ ಪರೀಕ್ಷೆಗಳ ಸಾರಾಂಶ, ಅಭ್ಯಾಸ ಪ್ರಶ್ನೆಗಳು, ಪ್ರತಿ ಅಧ್ಯಾಯದ ಪರೀಕ್ಷೆಗಳು, ಅಣಕು ಪರೀಕ್ಷೆಗಳು, ಪುನರಾವರ್ತನೆಯ ವಿಡಿಯೋಗಳು ಸೇರಿದಂತೆ ಅಧ್ಯಯನಕ್ಕೆ ಪೂರಕವಾದ ಹಲವು ಅಂಶಗಳನ್ನು ಸೇರಿಸಲಾಗಿದೆ.

2020 ರ ಪರೀಕ್ಷೆಗೆ ನೋಂದಣಿ ಮಾಡಿಸಿಕೊಂಡಿದ್ದ ಎಲ್ಲಾ ವಿದ್ಯಾರ್ಥಿಗಳಿಗೆ ಆಂಡ್ರಾಯ್ಡ್‌ನಲ್ಲಿ ಅಭಿವೃದ್ಧಿಪಡಿಸಿರುವ ಆ್ಯಪ್ ಹಾಗೂ ಆನ್ ಲೈನ್ ಪೋರ್ಟಲ್ ಅನ್ನು ಉಚಿತವಾಗಿ ಬಳಕೆ ಮಾಡಲು ಅವಕಾಸ ಕಲ್ಪಿಸಲಾಗಿತ್ತು. ಆದ ಕಾರಣ 2020 ನೇ ಸಾಲಿನಲ್ಲಿ GetCETgo ಯೂಟ್ಯೂಬ್ ಚಾನೆಲ್‌ಗೆ 10.43 ಲಕ್ಷ ವ್ಯೂಗಳು, ವೆಬ್ ಪೋರ್ಟಲ್‌ಗೆ ವೆಬ್ ಮತ್ತು ಆ್ಯಪ್ ಮೂಲಕ 1.2 ಲಕ್ಷ ಲಾಗಿನ್‌ಗಳು ದೊರೆತಿತ್ತು. ಆಂಡ್ರಾಯ್ಡ್ ಆ್ಯಪ್‌ನ ರೇಟಿಂಗ್ 4.3 ಆಗಿತ್ತು, ಹಾಗೂ ಆ್ಯಪ್ ಅನ್ನು 84,470 ಸಾರಿ ಡೌನ್ ಲೋಡ್ ಮಾಡಲಾಗಿತು. ಜೊತೆಗೆ ವಿದ್ಯಾರ್ಥಿಗಳು 2 ಲಕ್ಷ ಡಾಕ್ಯುಮೆಂಟ್‌ಗಳನ್ನು ಡೌನ್ ಲೋಡ್ ಮಾಡಿಕೊಂಡಿದ್ದರು. ಈ ಅಂಕಿ ಅಂಶಗಳು GetCETgo ಕಾರ್ಯಕ್ರಮ 2020 ನೇ ಸಾಲಿನಲ್ಲಿ ಎಷ್ಟು ಉಪಯುಕ್ತವಾಗಿತ್ತು ಎಂಬುದನ್ನು ಸಾದರಪಡಿಸುತ್ತದೆ.

ಈ ವರ್ಷದಿಂದ ಹೆಚ್ಚುವರಿಯಾಗಿ ಜೆಇಇ ವಿದ್ಯಾರ್ಥಿಗಳಿಗೂ ಆನ್‌ಲೈನ್ ತರಬೇತಿ ನೀಡಲಾಗುವುದು. ಹಾಗಾಗಿ GetCETgo ಆಂಡ್ರಾಯ್ಡ್‌ನಲ್ಲಿರುವ ಬೆಂಬಲಿತ ಕಲಿಕಾ ನಿರ್ವಹಣಾ ವ್ಯವಸ್ಥೆ ವೇದಿಕೆ eDUCATOR ಮೂಲಕ ಲಭ್ಯವಿದ್ದು, ಕೆಸಿಇಟಿ, ನೀಟ್ ಮತ್ತು ಜೆಇಇ ಪರೀಕ್ಷೆಗಳಿಗೆ ಸಿದ್ಧತಾ ಸಾಮಗ್ರಿಯನ್ನು ಒದಗಿಸಲಾಗುತ್ತದೆ. ಪರೀಕ್ಷೆಗಳು JEE Main Format ನಲ್ಲಿ ಲಭ್ಯವಿರುತ್ತದೆ. GetCETgo 2021 ರ ಬೆಂಬಲ ಸೇವೆಗಳು Login Support, Tech Back end Support, Doubt Clarification ಮತ್ತು Customer 12/7 ಗಳನ್ನು ಒಳಗೊಂಡಿರುತ್ತದೆ.

2021 ನೇ ಸಾಲಿನ ದ್ವಿತೀಯ ಪಿಯುಸಿ ವಿದ್ಯಾರ್ಥಿಗಳು ಸ್ವಯಂ ಅಧ್ಯಯನ ಮಾಡಲು ಅತ್ಯುತ್ತಮ ಸಾಧನವಾಗಿರುವ ಈ ಪರಿಷ್ಕೃತ ವೆಬ್ ಪೋರ್ಟಲ್‌ಗೆ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಅವರು ಮಾರ್ಚ್ 22 ರಂದು ವಿಧಾನಸೌಧದಲ್ಲಿ ಚಾಲನೆ ನೀಡಿದರು.

ಒಟ್ಟಿನಲ್ಲಿ ತಂತ್ರಜ್ಞಾನ ಮತ್ತು ಪಠ್ಯವನ್ನು ಕೌಶಲದಿಂದ ಮೇಳೈಸಿ ಅತ್ಯುತ್ತಮ ವಿಷಯ ಸಂವಹನವನ್ನು ಸಾಧಿಸುವಲ್ಲಿ ಕಾರ್ಯತತ್ಪರವಾಗಿದೆ. ಸ್ಪಧಾತ್ಮಕ ಪರೀಕ್ಷೆಗಳನ್ನು ಬರೆಯುವ ಎಲ್ಲಾ ವಿದ್ಯಾರ್ಥಿಗಳು http://wwwgetcetgo.in ವೆಬ್ ಸೈಟ್‌ಗೆ ಲಾಗಿನ್ ಆಗಿ ಪರೀಕ್ಷೆಗಳಿಗೆ ಸಿದ್ಧತಾ ಸಾಮಗ್ರಿಗಳನ್ನು ಪಡೆದುಕೊಳ್ಳಬಹುದು.

**2020ರಲ್ಲಿ ದೊರೆತ ಅದ್ಭುತ ಸ್ಪಂದನೆಯಿಂದ ಸ್ಫೂರ್ತಿಗೊಂಡು 2021 ನೇ ಸಾಲಿನಲ್ಲಿ GetCETgoಗೆ ಸರ್ಕಾರವು ಹೊಸ ಹಾಗೂ ಪರಿಷ್ಕೃತ ಲಕ್ಷಣಗಳನ್ನು ಹೊಂದುವಂತೆ ರೂಪಿಸಿ, ಸಿಇಟಿ ಮತ್ತು ನೀಟ್ ಜೊತೆಗೆ ಜೆಇಇ ಪರೀಕ್ಷೆಗಳಿಗೂ ಅನುಕೂಲವಾಗುವಂತೆ ಈ ಆಂಡ್ರಾಯ್ಡ್ ಪ್ಲೇ ಸ್ಟೋರ್ ಅನ್ನು ಸಿದ್ಧಪಡಿಸಿದೆ.**

ಕೋವಿಡ್–19 ಹಿನ್ನೆಲೆಯಲ್ಲಿ ವಿದ್ಯಾರ್ಥಿಗಳ ಶಿಕ್ಷಣಕ್ಕೆ ತೊಂದರೆ ಆಗಬಾರದು ಎಂಬ ಉದ್ದೇಶದಿಂದ ಕಳೆದ ವರ್ಷದಿಂದ ಪ್ರಾರಂಭಿಸಲಾದ ಈ ಕಾರ್ಯಕ್ರಮದಲ್ಲಿ ಸಿಇಟಿ ಮತ್ತು ನೀಟ್‌ಗೆ ಮಾತ್ರ ಕೋಚಿಂಗ್ ನೀಡಲಾಗುತ್ತಿತ್ತು. ಆದರೆ ಈ ವರ್ಷದಿಂದ ಹೆಚ್ಚುವರಿಯಾಗಿ ಜೆಇಇ ವಿದ್ಯಾರ್ಥಿಗಳಿಗೂ ಸಹಾಯಕವಾಗುವ ರೀತಿಯಲ್ಲಿ ವೆಬ್ ಪೋರ್ಟಲ್ ಅನ್ನು ಪರಿಷ್ಕರಿಸಲಾಗಿದೆ. ಈ ಸೌಲಭ್ಯವನ್ನು ಎಲ್ಲಾ ವಿದ್ಯಾರ್ಥಿಗಳು ಸದ್ಬಳಕೆ ಮಾಡಿಕೊಳ್ಳುವ ಮೂಲಕ ಆತ್ಮ ವಿಶ್ವಾಸದಿಂದ ಪರೀಕ್ಷೆಯನ್ನು ಎದುರಿಸಿ.

**–ಬಿ.ಎಸ್.ಯಡಿಯೂರಪ್ಪ,** ಮುಖ್ಯಮಂತ್ರಿಗಳು, ಕರ್ನಾಟಕ ಸರ್ಕಾರ

ಇಡೀ ದೇಶದಲ್ಲಿಯೇ ವಿದ್ಯಾರ್ಥಿಗಳಿಗೆ ಇಂಥ ಉಪಕ್ರಮ ಕೈಗೊಂಡ ಮೊದಲ ರಾಜ್ಯ ಕರ್ನಾಟಕ ಆಗಿದೆ. ಐಐಟಿಗಳಲ್ಲಿ ಕರ್ನಾಟಕದ ವಿದ್ಯಾರ್ಥಿಗಳ ಪ್ರಮಾಣವನ್ನು ಹೆಚ್ಚಿಸುವುದು ಸರ್ಕಾರದ ಗುರಿಯಾಗಿದೆ. ಹಾಗಾಗಿ ಕರ್ನಾಟಕ ಪರೀಕ್ಷಾ ಪ್ರಾಧಿಕಾರ ವತಿಯಿಂದ ಬರುವ ಶೈಕ್ಷಣಿಕ ವರ್ಷದಿಂದ ಇಡೀ ವರ್ಷಪೂರ್ತಿ ಗೆಟ್ ಸೆಟ್ ಗೋ ಮೂಲಕ ಕೋಚಿಂಗ್ ವ್ಯವಸ್ಥೆ ಇರುತ್ತದೆ.

**–ಡಾ.ಅಶ್ವತ್ಥ್ ನಾರಾಯಣ,** ಉಪಮುಖ್ಯಮಂತ್ರಿಗಳು, ಕರ್ನಾಟಕ ಸರ್ಕಾರ

ಸಿಇಟಿ, ನೀಟ್, ಜೆಇಇ ಬರೆಯಲಿಚ್ಛಿಸುವ ದೇಶದ ಯಾವ ವಿದ್ಯಾರ್ಥಿ ತನ್ನ ವಿವರಗಳನ್ನು ನಮೂದಿಸಿ ಆಕ್ಸಿಸ್ ಮಾಡಿಕೊಂಡು ವೆಬ್‌ಸೈಟ್, ಯೂಟ್ಯೂಬ್ ಅಥವಾ ಗೆಟ್ ಸೆಟ್ ಗೋ ಆ್ಯಪ್ ಮೂಲಕ ಕೋಚಿಂಗ್ ಪಡೆಯಬಹುದು. ಒಟ್ಟಿನಲ್ಲಿ ಸ್ಪರ್ಧಾತ್ಮಕ ಪರೀಕ್ಷೆಗಳಲ್ಲಿ ನಮ್ಮ ರಾಜ್ಯದ ವಿದ್ಯಾರ್ಥಿಗಳು ಹೆಚ್ಚು ರ್‍ಯಾಂಕ್‌ಗಳನ್ನು ಪಡೆಯಲು ಈ ಕಾರ್ಯಕ್ರಮ ಸಹಕಾರಿ ಆಗಲಿದೆ.

**–ಸುರೇಶ್ ಕುಮಾರ್,** ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವರು

Download From : www.kpscvaani.com











# ಕರ್ನಾಟಕ ರಾಜ್ಯ ಬ್ರಾಹ್ಮಣ ಅಭಿವೃದ್ಧಿ ಮಂಡಳಿಯ ಯೋಜನೆಗಳು

**ರಾಜ್ಯದಲ್ಲಿ ಆರ್ಥಿಕವಾಗಿ, ಶೈಕ್ಷಣಿಕವಾಗಿ ಹಿಂದುಳಿದ ಬ್ರಾಹ್ಮಣ ಸಮುದಾಯದ ಅಭಿವೃದ್ಧಿಗೆ ಸಂಬಂಧಿಸಿದಂತೆ ಶಿಕ್ಷಣ, ಕೌಶಲ್ಯಾಭಿವೃದ್ಧಿ, ಸ್ವ-ಉದ್ಯೋಗ, ಮೂಲ ಸೌಕರ್ಯಗಳ ಅಭಿವೃದ್ಧಿ ಒಳಗೊಂಡ ಯೋಜನೆಗಳನ್ನು ಕೈಗೆತ್ತಿಕೊಳ್ಳುವ ಉದ್ದೇಶದಿಂದ ಸ್ಥಾಪಿಸಲಾಗಿರುವ ಮಂಡಳಿಯೇ "ಕರ್ನಾಟಕ ರಾಜ್ಯ ಬ್ರಾಹ್ಮಣ ಅಭಿವೃದ್ಧಿ ಮಂಡಳಿ".**

ಕೆ. ರೋಹಿಣಿ

ಸಮ ಸಮಾಜ ನಿರ್ಮಾಣ, ಎಲ್ಲ ಸಮುದಾಯಗಳಲ್ಲಿರುವ ಆರ್ಥಿಕ ದುರ್ಬಲರ ಅಭಿವೃದ್ಧಿ ಅಲ್ಲಿನ ಮಕ್ಕಳ ಶಿಕ್ಷಣಕ್ಕೆ ನೆರವು ಸರ್ಕಾರದ ಗುರಿ. ನಿಗಮ, ಮಂಡಳಿಗಳ ಮೂಲ ಉದ್ದೇಶವೇ ಶಿಕ್ಷಣ, ಕೌಶಲ್ಯ, ಸ್ವಯಂ ಉದ್ಯೋಗ, ಮೂಲಸೌಕರ್ಯ ನೀಡಿ ಜೀವನ ಮಟ್ಟ ಉನ್ನತೀಕರಣ ಮಾಡುವುದು ಸರ್ಕಾರದ ಉದ್ದೇಶವಾಗಿದೆ.

ಈ ನಿಟ್ಟಿನಲ್ಲಿ 2018–19 ನೇ ಸಾಲಿನ ಬಜೆಟ್ ಪ್ರಕಟಣೆಯ ಪ್ರಕಾರ ಕರ್ನಾಟಕ ರಾಜ್ಯ ಸರ್ಕಾರ ಬ್ರಾಹ್ಮಣ ಅಭಿವೃದ್ಧಿ ಮಂಡಳಿಯನ್ನು ಸ್ಥಾಪಿಸಲಾಯಿತು. ಕಂಪನಿ ಕಾಯ್ದೆ 2013ರ ಸೆಕ್ಷನ್ 8ರ ಅಡಿಯಲ್ಲಿ 2019ರ ಮಾರ್ಚ್ 01 ರಂದು ರಾಜ್ಯ ಸರ್ಕಾರಿ ಕಂಪನಿಯಾಗಿ ನೋಂದಾಯಿಸಲಾಯಿತು. ಹಿರಿಯ ಹಾಗೂ ಅನುಭವಿ ನಾಯಕರಾದ ಹೆಚ್.ಎಸ್. ಸಚ್ಚಿದಾನಂದ ಮೂರ್ತಿ ಅವರ ಅಧ್ಯಕ್ಷತೆಯಲ್ಲಿ ಹಾಗೂ ವ್ಯವಸ್ಥಾಪಕ ನಿರ್ದೇಶಕರಾದ ಮಂಜುನಾಥ ಹೆಗಡೆ ಅವರ ಆಡಳಿತ ನಿರ್ವಹಣೆಯಲ್ಲಿ ಸರ್ಕಾರದ ಸಹಾಯವನ್ನು ಸಮರ್ಪಕವಾಗಿ ಬಳಸಿಕೊಳ್ಳುತ್ತಾ ನಿಗದಿತ ಗುರಿ ಸಾಧನೆಯತ್ತ ಮಂಡಳಿಯು ಮುನ್ನಡೆಯುತ್ತಿದೆ.

ಕೇಂದ್ರ ಸರ್ಕಾರ ಆರ್ಥಿಕವಾಗಿ ಹಿಂದುಳಿದ ಮೇಲ್ವರ್ಗದವರಿಗೆ ಶಿಕ್ಷಣ ಹಾಗೂ ಉದ್ಯೋಗದಲ್ಲಿ ಶೇ. 10ರಷ್ಟು ಮೀಸಲಾತಿಯನ್ನು ಕಲ್ಪಿಸಿ ಆದೇಶ ಹೊರಡಿಸಿರುವುದರ ಆಧಾರದಲ್ಲಿ ರಾಜ್ಯ ಸರ್ಕಾರವು ಆರ್ಥಿಕವಾಗಿ ಹಿಂದುಳಿದ ರಾಜ್ಯದಲ್ಲಿನ ಬ್ರಾಹ್ಮಣರಿಗೆ ಜಾತಿ ಮತ್ತು ಆದಾಯ ಪ್ರಮಾಣ ಪತ್ರವನ್ನು ಒದಗಿಸಲು ಸರ್ಕಾರಿ ಆದೇಶವಾಗಿದೆ.

ಇದರಿಂದಾಗಿ ನಾಡಿನ ಬ್ರಾಹ್ಮಣ ಸಮಾಜದ ಆರ್ಥಿಕವಾಗಿ ಹಿಂದುಳಿದವರಿಗೆ ಸರ್ಕಾರದ ವಿವಿಧ ಯೋಜನೆಗಳನ್ನು ಹಾಗೂ ಸಹಾಯವನ್ನು ಸಮರ್ಪಕವಾಗಿ ತಲುಪಿಸಲು ಸಹಾಯವಾಗಲಿದೆ.

ಕರ್ನಾಟಕ ರಾಜ್ಯ ಬ್ರಾಹ್ಮಣ ಅಭಿವೃದ್ಧಿ ಮಂಡಳಿ ವತಿಯಿಂದ ಕೇಂದ್ರ ಲೋಕಸೇವಾ ಆಯೋಗದ ಐ ಎ ಎಸ್ ಪರೀಕ್ಷೆಗೆ ಬರೆಯಲು ಉತ್ಸುಕವಾಗಿರುವ ಅರ್ಹ ವಿದ್ಯಾರ್ಥಿಗಳಿಗೆ ಉಚಿತ ತರಬೇತಿ ನೀಡಲು ಚಾಣಕ್ಯ ಆಡಳಿತ ತರಬೇತಿ ಯೋಜನೆಯಡಿ ಈಗಾಗಲೇ 161 ವಿದ್ಯಾರ್ಥಿಗಳಿಗೆ ಕೇಂದ್ರದ ಸಂಕಲ್ಪ ಐ ಎ ಎಸ್ ಅಕಾಡೆಮಿ ವತಿಯಿಂದ ತರಬೇತಿಯನ್ನು ಯಶಸ್ವಿಯಾಗಿ ನೀಡಲಾಗುತ್ತಿದೆ.

ಸಾಂಸ್ಕೃತಿಕವಾಗಿ ಶ್ರೀಮಂತ ಸಮುದಾಯವಾದ ಬ್ರಾಹ್ಮಣ ಸಮುದಾಯದ ಅರ್ಚಕರಿಗೆ, ಅಡುಗೆ ಭಟ್ಟರಿಗೆ, ಸಹಾಯಕರನ್ನು ಅಸಂಘಟಿತ ವಲಯದೊಳಗೆ ತಂದು ಅವರಿಗೆ ಸರ್ಕಾರದಿಂದ ದಾಖಲೆ/ಗುರುತಿನ ಚೀಟಿಗಳನ್ನು ನೀಡಲು ಈಗಾಗಲೇ ಮಂಡಳಿ ಸರ್ಕಾರವನ್ನು ವಿನಂತಿಸಿದೆ.

ಖಾಸಗಿ ಅರ್ಚಕರನ್ನು ಹಾಗೂ ಪುರೋಹಿತರನ್ನು ಕೂಡ ಅಸಂಘಟಿತ ಕಾರ್ಮಿಕ ವಲಯಕ್ಕೆ ಸೇರಿಸಲು ಕ್ರಮಕೈಗೊಳ್ಳಲಾಗುತ್ತಿದೆ.

**ಯೋಜನೆಗಳು:**

ವಿದ್ಯಾರ್ಥಿ ಪ್ರತಿಭಾ ಪುರಸ್ಕಾರ– ಪ್ರತಿಭಾವಂತ ವಿಪ್ರ ವಿದ್ಯಾರ್ಥಿಗಳಿಗೆ ಪ್ರೋತ್ಸಾಹ ನೀಡಲು 2020ರ ಎಸ್ ಎಸ್ ಎಲ್ ಸಿ ಪರೀಕ್ಷೆಯಲ್ಲಿ ಅತಿ ಹೆಚ್ಚು ಅಂಕಗಳಿಸಿ ತೇರ್ಗಡೆಯಾದ ಪ್ರತಿ ಜಿಲ್ಲೆಯ ಮೊದಲ ಮೂರು ಜನ ವಿಪ್ರ ವಿದ್ಯಾರ್ಥಿಗಳಿಗೆ ಮಂಡಳಿಯಿಂದ 15000, 10000 ಹಾಗೂ 5000 ರೂ.ಗಳ ನಗದು ಬಹುಮಾನವನ್ನು ನೀಡಲಾಯಿತು. ರಾಜ್ಯದ ಒಟ್ಟು 168 ವಿದ್ಯಾರ್ಥಿಗಳಿಗೆ ನಗದು ಬಹುಮಾನ ಹಾಗೂ ಮಂಡಳಿಯ ವತಿಯಿಂದ ಪ್ರಶಸ್ತಿ ಪತ್ರವನ್ನು ನೀಡಿ ಪ್ರೋತ್ಸಾಹಿಸಲಾಯಿತು.

ಮಂಡಳಿಯ ವತಿಯಿಂದ ಗಂಗಾ ಕಲ್ಯಾಣ ಯೋಜನೆಯಡಿ ಬೋರ್‌ವೆಲ್ ಕೊರೆಯಲು ಹಾಗೂ ಜಾನುವಾರು ಖರೀದಿಸಲು ಅರ್ಹ ಫಲಾನುಭವಿಗಳಿಗೆ ನೆರವು ನೀಡಲಾಗುವುದು.

ವಿಶ್ವಾಮಿತ್ರ ಪ್ರತಿಭಾ ಪುರಸ್ಕಾರ ಉನ್ನತ ಶ್ರೇಣಿಯಲ್ಲಿ ಉತ್ತೀರ್ಣರಾದ ಬ್ರಾಹ್ಮಣ ವಿದ್ಯಾರ್ಥಿಗಳಿಗೆ ಹಾಗೂ ವಿವಿಧ ಕ್ಷೇತ್ರಗಳ ಬ್ರಾಹ್ಮಣರ ಸಾಧಕರಿಗೆ ಪ್ರೋತ್ಸಾಹಿಸಲಾಗುವುದು. ಶಾಲಾ, ಕಾಲೇಜು ವಿದ್ಯಾರ್ಥಿಗಳಿಗೆ ಲ್ಯಾಪ್ ಟಾಪ್‌ಗಳನ್ನು ವಿತರಣೆ ಮಾಡಲಾಗುವುದು.

ಬ್ರಾಹ್ಮಣ ಅರ್ಚಕರು ಮತ್ತು ಪುರೋಹಿತರನ್ನು ಮದುವೆಯಾಗುವ ಮೈತ್ರೇಯಿ ಯೋಜನೆಯಡಿ ಮೂರು ಲಕ್ಷ ರೂಪಾಯಿಗಳ ಬಾಂಡ್‌ಗಳನ್ನು ಹಾಗೂ ಆಚಾರ್ಯತ್ರಯ ವೇದ ಶಿಷ್ಯ ವೇತನದಡಿ ವೇದ/ಆಗಮ/ಸಂಸ್ಕೃತ ಅಧ್ಯಯನ ಮಾಡುತ್ತಿರುವ ವಿದ್ಯಾರ್ಥಿಗಳಿಗೆ/ಆಗಮಿಕರಿಗೆ/ವಿದ್ವಾಂಸರಿಗೆ ಹಾಗೂ ಸಂಶೋಧನಾ ವಿದ್ಯಾರ್ಥಿಗಳಿಗೆ ಮಂಡಳಿಯ ವತಿಯಿಂದ ಶಿಷ್ಯ ವೇತನ ನೀಡುವ ಸೌಲಭ್ಯವಿದೆ.

ಸಾಂದೀಪನಿ ಶಿಷ್ಯ ವೇತನ ಯೋಜನೆಯಡಿ ಐಟಿಐ, ಪದವಿ, ಸ್ನಾತಕೋತ್ತರ ಪದವಿ, ಎಂಜಿನಿಯರಿಂಗ್, ವೈದ್ಯಕೀಯ ಶಿಕ್ಷಣ, ಪಿಎಚ್‌ಡಿ, ಸಂಸ್ಕೃತ ಪದವಿ ಮುಂತಾದ ತರಗತಿಗಳಲ್ಲಿ ವ್ಯಾಸಂಗ ಮಾಡುತ್ತಿರುವ 7500 ಅರ್ಹ ಬ್ರಾಹ್ಮಣ ವಿದ್ಯಾರ್ಥಿಗಳಿಗೆ ಶಿಷ್ಯ ವೇತನ ನೀಡಲು, ಹೊರದೇಶಗಳಲ್ಲಿ ಉನ್ನತ ಶಿಕ್ಷಣ ಪಡೆಯಲು ಇಚ್ಚಿಸುವ ವಿದ್ಯಾರ್ಥಿಗಳಿಗೆ ಅತಿ ಕಡಿಮೆ ಬಡ್ಡಿ ದರದಲ್ಲಿ ವಿದ್ಯಾರ್ಥಿ ಸಾಲ ಹಾಗೂ ಧನಸಹಾಯ ಕೂಡ ಸಿಗಲಿದೆ.

ಇನ್ನು ಪುರುಷೋತ್ತಮ ಯೋಜನೆಯಡಿ ಸ್ವಯಂ ಉದ್ಯೋಗ ಮಾಡುವ ಆಸಕ್ತರಿಗೆ ಹತ್ತು ಸಾವಿರದಿಂದ ಒಂದು ಲಕ್ಷದವರೆಗೆ ಆಧಾರ ರಹಿತ ಸಾಲ ನೀಡಲಾಗುತ್ತದೆ. ಮಂಡಳಿಯಿಂದ 20 ಶೇಕಡ ಸಬ್ಸಿಡಿ ದೊರೆಯುತ್ತದೆ. ಅರುಂಧತಿ ಯೋಜನೆಯಡಿ ಆರ್ಥಿಕವಾಗಿ ದುರ್ಬಲರಾದ ಬ್ರಾಹ್ಮಣ ಯುವತಿಯರಿಗೆ ವಿವಾಹದ ಸಂದರ್ಭದಲ್ಲಿ 25 ಸಾವಿರ ರೂ.ಗಳ ಸಹಾಯ ನೀಡಲಾಗುವುದು.

ಮಂಡಳಿಯ ಅಧ್ಯಕ್ಷರು ಮತ್ತು ವ್ಯವಸ್ಥಾಪಕ ನಿರ್ದೇಶಕರು ಸಮುದಾಯದವರೊಡನೆ ಚರ್ಚಿಸಿ, ಒಳಗೊಂಡ ಸಮುದಾಯಕ್ಕೆ ಅಗತ್ಯವಾದ, ಉಪಯೋಗಿ ಕಾರ್ಯಕ್ರಮಗಳನ್ನು ನೀಡುವಲ್ಲಿ ನಿರತರಾಗಿದ್ದಾರೆ.

ಕರ್ನಾಟಕ ರಾಜ್ಯ ಬ್ರಾಹ್ಮಣ ಅಭಿವೃದ್ಧಿ ಮಂಡಳಿ ಕಚೇರಿಯು ನಂ 14/9, ಅನೆಕ್ಸ್ ಬಿಲ್ಡಿಂಗ್, 3 ನೇ ಮಹಡಿ, ಶ್ರೀ ಅರವಿಂದ ಭವನ, ಮಿಥಿಲ್ ಸೊಸೈಟಿ ಆವರಣ ನೃಪತುಂಗ ರಸ್ತೆ ಬೆಂಗಳೂರು–560001, ಈ ವಿಳಾಸದಲ್ಲಿ ಕಾರ್ಯನಿರ್ವಹಿಸುತ್ತಿದೆ. ಮಂಡಳಿಯಲ್ಲಿ ಸಿಗುವ ಸೇವಾ ಸೌಲಭ್ಯ ಕುರಿತು ಇನ್ನೂ ಹೆಚ್ಚಿನ ಮಾಹಿತಿಯನ್ನು ಮಂಡಳಿಯ ವೆಬ್ ಸೈಟ್ ವಿಳಾಸ ksbdb.karnataka.gov.in ಅಥವಾ ಈ ಮೇಲ್ ವಿಳಾಸ contact.ksbdb@karnataka.gov.in ಅಥವಾ ದೂರವಾಣಿ ಸಂಖ್ಯೆ 080–22488888/ 29605888 ಗೆ ಸಂಪರ್ಕಿಸಬಹುದು.

> **"ಕೋವಿಡ್–19 ಲಾಕ್ ಡೌನ್ ಸಮಯದಲ್ಲಿ ದೇವಸ್ಥಾನಗಳೆಲ್ಲವೂ ಮುಚ್ಚಿದ್ದಾಗ, ಸಿ ವರ್ಗದ ದೇವಸ್ಥಾನಗಳ ಅರ್ಚಕ ಸಮುದಾಯ ಹಾಗೂ ಸಿಬ್ಬಂದಿ ಬೇರೆ ಆದಾಯವಿಲ್ಲದೇ ಸಂಕಷ್ಟದಲ್ಲಿದ್ದ ಸಂದರ್ಭದಲ್ಲಿ ಅಧ್ಯಕ್ಷರು ಮತ್ತು ನಿರ್ದೇಶಕರು ಮುಖ್ಯಮಂತ್ರಿಗಳನ್ನು ಭೇಟಿ ಮಾಡಿ ಅಸಂಘಟಿತ ಕಾರ್ಮಿಕ ವರ್ಗಕ್ಕೆ ನೀಡುತ್ತಿರುವ ಆಹಾರದ ಸಾಮಗ್ರಿಗಳನ್ನು ಅರ್ಚಕ ಮತ್ತು ದೇವಸ್ಥಾನದ ಸಿಬ್ಬಂದಿ ವರ್ಗಕ್ಕೂ ನೀಡಬೇಕೆಂದು ವಿನಂತಿ ಸಲ್ಲಿಸಿದರು. ಇವರ ವಿನಂತಿಗೆ ಸ್ಪಂದಿಸಿದ ಸರ್ಕಾರವು, ಸಿ ವರ್ಗದ ಅರ್ಚಕರು ಮತ್ತು ಸಿಬ್ಬಂದಿಗೆ ಆಯಾ ಜಿಲ್ಲೆಯ ಜಿಲ್ಲಾಡಳಿತದ ವತಿಯಿಂದ ಆಹಾರ ಸಾಮಾಗ್ರಿಗಳನ್ನು ನೀಡಲು ಆದೇಶ ಹೊರಡಿಸಿತು. ಅಲ್ಲದೆ ಮಂಡಳಿಯ ಅಧ್ಯಕ್ಷರು ವೈಯಕ್ತಿಕವಾಗಿ ಕೂಡ ಸುಮಾರು 48,800 ಆಹಾರ ಸಾಮಗ್ರಿಗಳ ಕಿಟ್‌ಗಳನ್ನು ವಿವಿಧ ಮೂಲಗಳಿಂದ ಸಂಗ್ರಹಿಸಿ, ರಾಜ್ಯಾದ್ಯಂತ ಕಷ್ಟದಲ್ಲಿದ್ದ ಬ್ರಾಹ್ಮಣ ಕುಟುಂಬಗಳಿಗೆ ವಿತರಿಸಿದ್ದಾರೆ."**

Download From : www.kpscvaani.com




## ಸ್ವಾತಂತ್ರ್ಯದ ಸಂಗ್ರಾಮದ ಬೆಳ್ಳಿಚುಕ್ಕಿ ನಾಡಿನಲ್ಲಿ

# ಅಮೃತ ಮಹೋತ್ಸವ

**ಸ್ವಾತಂತ್ರ್ಯದ ಅಮೃತ ಮಹೋತ್ಸವದ ವರ್ಷಾಚರಣೆಯ ಅಂಗವಾಗಿ ದೇಶದಾದ್ಯಂತ ಎಪ್ಪತ್ತೈದು ವಾರಗಳ ಕಾಲ ವಿವಿಧ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗುತ್ತಿದ್ದು, ಸ್ವಾತಂತ್ರ್ಯದ ಸಂಗ್ರಾಮದ ಬೆಳ್ಳಿಚುಕ್ಕಿ ನಾಡಾದ ಕಿತ್ತೂರಿನಲ್ಲಿ ಜರುಗಿದ ಸಂಭ್ರಮಾಚರಣೆಯ ಕಿರುನೋಟ.**



● ಗುರುನಾಥ ಕಡಬೂರ

**"ಉಪ್ಪು ಬರೀ ಉಪ್ಪಲ್ಲ, ಅದು ಭಾರತದ ನಂಬಿಕೆ, ವಿಶ್ವಾಸದ ಪ್ರತೀಕ"** ಎಂದು ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು ಹೇಳಿದಾಗ ಸಭಿಕರಲ್ಲಿ ರೋಮಾಂಚನ. ಸ್ವಾತಂತ್ರ್ಯ ಸ್ವೇಚ್ಛಾಚಾರ ಅಲ್ಲ, ಅದು ಒಬ್ಬ ವ್ಯಕ್ತಿ, ಒಂದು ಜನಸಮೂಹ ಮತ್ತು ಒಂದು ದೇಶದ ಅಸ್ಮಿತೆ. ಸ್ವಾತಂತ್ರ್ಯ ಎಂದರೆ ಸ್ವಾಭಿಮಾನ.

ಹೌದು. ನೂರಾರು ವರ್ಷಗಳ ಕಾಲ ಬ್ರಿಟಿಷ್‌ರ ಆಡಳಿತದಲ್ಲಿದ್ದ ಭರತ ಖಂಡವು ತನ್ನತನವನ್ನು ಅರಿತುಕೊಂಡು ಪರಕೀಯರ ಆಡಳಿತಕ್ಕೆ ಪ್ರತಿರೋಧ ಆರಂಭಿಸಿತು. ಹಂತ ಹಂತವಾಗಿ ಅಲ್ಲಲ್ಲಿ ಹೊತ್ತಿದ ಹೋರಾಟದ ಕಿಡಿಯು ಕೆಲವೇ ವರ್ಷಗಳಲ್ಲಿ ಜನಾಂದೋಲನವಾಗಿ ಸ್ವಾತಂತ್ರ್ಯ ಸಂಗ್ರಾಮವಾಗಿ ಪರಿವರ್ತನೆಗೊಂಡಿತು.

ಮಂದಗಾಮಿ ಮತ್ತು ತೀವ್ರಗಾಮಿ ಹೀಗೆ ಎರಡು ಸ್ವರೂಪದ ಹೋರಾಟ ಆರಂಭಗೊಂಡಿತಾದರೂ ಗುರಿ ಒಂದೇ ಆಗಿತ್ತು, ಅದುವೇ "ಸ್ವಾತಂತ್ರ್ಯ". ಸಿಪಾಯಿ ದಂಗೆ, ಉಪ್ಪಿನ ಸತ್ಯಾಗ್ರಹ (ದಂಡಿಯಾತ್ರೆ), ಅಸಹಕಾರ ಚಳವಳಿ, ಕ್ವಿಟ್ ಇಂಡಿಯಾ ಆಂದೋಲನ, ಸ್ವದೇಶಿ ಆಂದೋಲನ ಹೀಗೆ ಹಲವಾರು ಮಜಲುಗಳಲ್ಲಿ ಭರತಖಂಡ ವ್ಯಾಪಿಯಾಗಿ ಪಸರಿಸಿದ ಹೋರಾಟಕ್ಕೆ ನಿರ್ದಿಷ್ಟ ದಿಕ್ಕು ಮತ್ತು ದೆಶೆ ತೋರಿದವರು ಮಹಾತ್ಮಾ ಗಾಂಧೀಜಿಯವರು.

ದೇಶವನ್ನು ಬ್ರಿಟಿಷ್‌ರ ಕಪಿಮುಷ್ಠಿಯಿಂದ ಮುಕ್ತಗೊಳಿಸಲು ಮಹಾತ್ಮಾ ಗಾಂಧೀಜಿಯವರು ಅನುಸರಿಸಿದ ಉಪವಾಸ, ಅಸಹಕಾರದಂತಹ ರಕ್ತರಹಿತ ಹೋರಾಟದ ಹಾದಿಯು ಇಡೀ ವಿಶ್ವದ ಗಮನ ಸೆಳೆಯಿತು. ವಿಶ್ವದ ಚರಿತ್ರೆಯಲ್ಲಿ ಅಚ್ಚಳಿಯದ ಛಾಪು ಮೂಡಿಸಿದ ಭಾರತದ ಸ್ವಾತಂತ್ರ್ಯ ಸಂಗ್ರಾಮವು ಪರಕೀಯರ ಆಡಳಿತದಲ್ಲಿದ್ದ ಅನೇಕ ದೇಶಗಳಲ್ಲಿ ಸ್ವಾತಂತ್ರ್ಯದ ಆಶಾಕಿರಣ ಮೂಡಿಸಿತು. ಹಲವು ದಶಕಗಳ ಅಹರ್ನಿಶಿ ಹೋರಾಟ, ಲಕ್ಷಾಂತರ ಜನರ ತ್ಯಾಗ ಬಲಿದಾನಗಳ ಫಲವಾಗಿ ಆಗಸ್ಟ್ 15, 1947 ರಂದು ಭಾರತವು ಪರಕೀಯರ ಆಡಳಿತದಿಂದ ಸ್ವತಂತ್ರಗೊಂಡಿತು.

**ಅಮೃತ ಮಹೋತ್ಸವದ ಸಂಭ್ರಮ:**

ದೇಶವು ಸ್ವತಂತ್ರಗೊಂಡು ಆಗಸ್ಟ್ 15, 2021 ಕ್ಕೆ 75 ವರ್ಷಗಳು ಪೂರ್ಣಗೊಳ್ಳಲಿವೆ. ಸ್ವಾತಂತ್ರ್ಯದ ಅಮೃತ ಮಹೋತ್ಸವದ ವರ್ಷಾಚರಣೆಯನ್ನು ಆಗಸ್ಟ್ 15, 2022 ರವರೆಗೆ ಅಂದರೆ ಮಾರ್ಚ್ 12, 2021 ರಿಂದ 75 ವಾರಗಳ ಕಾಲ ಅರ್ಥಪೂರ್ಣವಾಗಿ ಆಚರಿಸುವ ಮೂಲಕ ಸ್ವಾತಂತ್ರ್ಯ ಹೋರಾಟಗಾರರ ತ್ಯಾಗ-ಬಲಿದಾನವನ್ನು ಸ್ಮರಿಸಲು ಇಡೀ ದೇಶವೇ ಈಗ ಸಜ್ಜಾಗುತ್ತಿದೆ.



**ದತ್ತುಪುತ್ರರಿಗೆ ಹಕ್ಕಿಲ್ಲ ಎಂಬ ಬ್ರಿಟಿಷರ ನೀತಿ ವಿರುದ್ಧ ರಣಕಹಳೆ ಮೊಳಗಿಸಿದ ಕಿತ್ತೂರಿನ ರಾಣಿ ಚೆನ್ನಮ್ಮ ಸ್ವಾತಂತ್ರ್ಯ ಹೋರಾಟದ ಬೆಳ್ಳಿಚುಕ್ಕಿ ಎಂದು ಗುರುತಿಸಲ್ಪಡುತ್ತಾರೆ. ಇಂತಹ ವೀರರಾಣಿ ಚೆನ್ನಮ್ಮನ ನೆಲದಿಂದ ಆರಂಭಗೊಂಡಿರುವ ಸ್ವಾತಂತ್ರ್ಯದ ಅಮೃತ ಮಹೋತ್ಸವದಲ್ಲಿ ಹತ್ತು ಹಲವು ಬಗೆಯ ಕಾರ್ಯಕ್ರಮಗಳನ್ನು ರೂಪಿಸಲಾಗಿದೆ.**

ಆಗಸ್ಟ್ 15, 2022 ರ ಅಮೃತ ಘಳಿಗೆಗೆ ಇನ್ನೂ 75 ವಾರಗಳಿವೆ. ಆದಾಗ್ಯೂ ಎಪ್ಪತ್ತೈದು ವಾರಗಳ ಮುಂಚೆಯಿಂದಲೇ ಸ್ವಾತಂತ್ರ್ಯದ ಅಮೃತ ಮಹೋತ್ಸವದ ಆಚರಣೆ ಆರಂಭಿಸಲು ಇನ್ನೊಂದು ಐತಿಹಾಸಿಕ ಮಹತ್ವದ ಕಾರಣವಿದೆ, ಅದುವೇ ಉಪ್ಪಿನ ಸತ್ಯಾಗ್ರಹ ಅಥವಾ ದಂಡಿಯಾತ್ರೆ.

ಹೌದು, ಈ ಚಳುವಳಿಯು 1930 ನೇ ಇಸವಿಯ ಮಾರ್ಚ್ 12 ರಿಂದ ಏಪ್ರಿಲ್ 6 ರವರಗೆ ನಡೆಯಿತು. ಮಾರ್ಚ್ 2, 1930 ರಂದು ಉಪ್ಪಿನ ಕಾನೂನನ್ನು ಬದಲಾಯಿಸುವಂತೆ ಕೋರಿ ಅಂದಿನ ವೈಸ್ರಾಯ್, ಲಾರ್ಡ್ ಇರ್ವಿನ್ ರವರಿಗೆ ಮಹಾತ್ಮಾ ಗಾಂಧೀಜಿಯವರು ಒಂದು ಪತ್ರ ಬರೆದರು.



Download From : www.kpscvaani.com

ಬ್ರಿಟಿಷರು ಸಾಮಾನ್ಯ ಜನರು ಬಳಸುವ ಉಪ್ಪಿನ ಮೇಲೆ ಕರವನ್ನು ವಿಧಿಸಿ ಸರ್ಕಾರದ ಬೊಕ್ಕಸವನ್ನು ತುಂಬಿಸಿ ಕೊಳ್ಳುತ್ತಿದ್ದರು. ದೇಶದ ಸಾಮಾನ್ಯ ಜನರಿಗೆ ಇದರಿಂದ ಆಗುತ್ತಿದ್ದ ಅನ್ಯಾಯವನ್ನು ಗಮನಿಸಿದ ಮಹಾತ್ಮಾ ಗಾಂಧೀಜಿ ಉಪ್ಪಿನ ಕರವನ್ನು ಅಹಿಂಸಾತ್ಮಕ ಚಳುವಳಿಯ ಕೇಂದ್ರ ಬಿಂದುವನ್ನಾಗಿಸಿಕೊಂಡು ದೇಶದಾದ್ಯಂತ ಬೃಹತ್ ಚಳುವಳಿ ಹಮ್ಮಿಕೊಂಡರು.

ಸಮುದ್ರ ತಟದಲ್ಲಿ ವಾಸಿಸುತ್ತಿದ್ದ ಜನರು ಸಮುದ್ರದ ಉಪ್ಪು ಪುಕ್ಕಟೆಯಾಗಿ, ಸುಲಭವಾಗಿ ದೊರೆತರೂ, ಸರ್ಕಾರದಿಂದ ಕೊಂಡುಕೊಳ್ಳಬೇಕಾಗಿತ್ತು. ಉಪ್ಪಿನ ಮೇಲೆ ತೆರಿಗೆ ವಿಧಿಸಿದ ಪರಿಣಾಮ ಈ ಅತ್ಯವಶ್ಯಕ ಪದಾರ್ಥವು ಜನಸಾಮಾನ್ಯರಿಗೆ ದುಬಾರಿಯಾಯಿತು.

ಎಲ್ಲಾ ಧರ್ಮ, ವರ್ಗ ಮತ್ತು ಪ್ರಾಂತ್ಯದ ಜನರು ಉಪ್ಪಿನ ಸತ್ಯಾಗ್ರಹಕ್ಕೆ ಧುಮುಕಿದರು. ಉಪ್ಪಿನ ಮೇಲಿನ ಕರವು ಪ್ರತಿಯೊಬ್ಬರ ಮೇಲೂ ಪರಿಣಾಮ ಬೀರಿದ್ದರಿಂದ ಇದೊಂದು ಅತ್ಯಂತ ಯಶಸ್ವಿ ಚಳುವಳಿಯಾಯಿತು. ಮಹಾತ್ಮಾ ಗಾಂಧೀಜಿಯವರು ಸಬರಮತಿ ಆಶ್ರಮದಿಂದ ದಾಂಡಿಯವರೆಗಿನ 240 ಮೈಲುಗಳ ಕಾಲ್ನಡಿಗೆಯ ಉಪ್ಪಿನ ಸತ್ಯಾಗ್ರಹ ಅಥವಾ ದಂಡಿಯಾತ್ರೆಯು ಸ್ವಾತಂತ್ರ್ಯ ಹೋರಾಟದಲ್ಲಿ ಪ್ರಮುಖ ಮೈಲಿಗಲ್ಲು ಎಂದೇ ಪ್ರಸಿದ್ಧಿ ಪಡೆಯಿತು.

ಅದಕ್ಕೆ ಪ್ರಧಾನ ಮಂತ್ರಿಗಳು ಹೇಳಿದ "ಉಪ್ಪು ಬರೀ ಉಪ್ಪಲ್ಲ, ಅದು ಭಾರತದ ನಂಬಿಕೆ, ವಿಶ್ವಾಸದ ಪ್ರತೀಕ"– ಎಂಬ ಮಾತು ಜನರನ್ನು ರೋಮಾಂಚನಗೊಳಿಸಿತು. ಭಾರತೀಯ ಸಂಸ್ಕೃತಿ ಮತ್ತು ಉಪ್ಪಿನ ನಡುವಿನ ಅವಿನಾಭಾವ ಸಂಬಂಧ ಅನಾವರಣಗೊಳಿಸಿತು. ಇಂತಹ ದಂಡಿಯಾತ್ರೆ ಆರಂಭಗೊಂಡ ಸವಿನೆನಪಿಗಾಗಿ ಮಾರ್ಚ್ 12 ರಂದೇ ಸ್ವಾತಂತ್ರ್ಯದ ಅಮೃತ ಮಹೋತ್ಸವ ವರ್ಷಾಚರಣೆಗೆ ಪ್ರಧಾನಮಂತ್ರಿ ನರೇಂದ್ರ ಮೋದಿಜಿಯವರು ಚಾಲನೆ ನೀಡಿದರು.

75ನೇ ವರ್ಷಾಚರಣೆ ಅಂಗವಾಗಿ 75 ವಾರಗಳ ಕಾಲ ಐತಿಹಾಸಿಕ ಮಹತ್ವವುಳ್ಳ ದೇಶದ 75 ಆಯ್ದ ಸ್ಥಳಗಳಲ್ಲಿ ವಿಭಿನ್ನ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ. ಮಹಾತ್ಮಾ ಗಾಂಧೀಜಿಯವರು ದಂಡಿಯಾತ್ರೆ ಆರಂಭಿಸಿದ್ದ ಗುಜರಾತಿನ ಅಹ್ಮದಾಬಾದ್ ಜಿಲ್ಲೆಯ ಸಾಬರಮತಿ ಆಶ್ರಮದಲ್ಲಿ ಸ್ವಾತಂತ್ರ್ಯದ ಅಮೃತ ಮಹೋತ್ಸವಕ್ಕೆ ಚಾಲನೆ ದೊರೆತಿದೆ.

ಸ್ವಾತಂತ್ರ್ಯ ಸಂಗ್ರಾಮದ ವಿವಿಧ ಮಜಲುಗಳನ್ನು ಇಂದಿನ ಯುವ ಪೀಳಿಗೆಗೆ ಪರಿಚಯಿಸುವ ಮೂಲಕ ಸ್ವಾತಂತ್ರ್ಯ ಹೋರಾಟಗಾರರ ತ್ಯಾಗ–ಬಲಿದಾನ ಸ್ಮರಿಸುವಂತಹ ವಿಭಿನ್ನ ಕಾರ್ಯಕ್ರಮಗಳು 75 ವಾರ ನಡೆಯಲಿವೆ. ಸ್ವಾತಂತ್ರ್ಯ ಹೋರಾಟದಲ್ಲಿ ಚಾರಿತ್ರಿಕ ಮಹತ್ವ ಹೊಂದಿರುವ ಬೆಳಗಾವಿ ಜಿಲ್ಲೆಯ ಚನ್ನಮ್ಮನ ಕಿತ್ತೂರಿನ ಕೋಟೆ ಆವರಣದಿಂದ ಚಾಲನೆ ಪಡೆದುಕೊಂಡಿರುವ ಸ್ವಾತಂತ್ರ್ಯದ ಅಮೃತ ಮಹೋತ್ಸವವು ಮತ್ತಷ್ಟು ಮೆರಗು ತಂದಿದೆ ಎಂದರೆ ತಪ್ಪಾಗಲಾರದು.

ದತ್ತುಪುತ್ರರಿಗೆ ಹಕ್ಕಿಲ್ಲ ಎಂಬ ಬ್ರಿಟಿಷರ ನೀತಿ ವಿರುದ್ಧ ರಣಕಹಳೆ ಮೊಳಗಿಸಿದ ಕಿತ್ತೂರಿನ ರಾಣಿ ಚೆನ್ನಮ್ಮ ಸ್ವಾತಂತ್ರ್ಯ ಹೋರಾಟದ ಬೆಳ್ಳಿಚುಕ್ಕಿ ಎಂದು ಗುರುತಿಸಲ್ಪಡುತ್ತಾರೆ. ಇಂತಹ ವೀರರಾಣಿ ಚೆನ್ನಮ್ಮನ ನೆಲದಿಂದ ಆರಂಭಗೊಂಡಿರುವ ಸ್ವಾತಂತ್ರ್ಯದ ಅಮೃತ ಮಹೋತ್ಸವದಲ್ಲಿ ಹತ್ತು ಹಲವು ಬಗೆಯ ಕಾರ್ಯಕ್ರಮಗಳನ್ನು ರೂಪಿಸಲಾಗಿದೆ.

ಸ್ವಾತಂತ್ರ್ಯ ಹೋರಾಟಗಾರರ ಕುರಿತ ಪ್ರಬಂಧ, ಭಾಷಣ, ಚರ್ಚಾ, ಚಿತ್ರಕಲೆ ಸ್ಪರ್ಧೆಗಳು, ದೇಶಭಕ್ತಿ ಗೀತೆಗಳು, ಶ್ರಮದಾನ, ಪಾದಯಾತ್ರೆ, ಯೋಗಶಿಬಿರಗಳು, ಛಾಯಾಚಿತ್ರಗಳ ಪ್ರದರ್ಶನ ಹೀಗೆ ಜಿಲ್ಲೆಯಾದ್ಯಂತ 75 ವಾರಗಳ ಕಾಲ 75 ಸ್ಥಳಗಳಲ್ಲಿ ಸ್ವಾತಂತ್ರ್ಯ ಹೋರಾಟದ ವಿವಿಧ ಮಜಲುಗಳ ಮೆಲುಕು ಹಾಕಲಾಗುವುದು. ಸ್ವಾತಂತ್ರ್ಯ ಹೋರಾಟಗಾರರ ಮನೆಗಳಿಗೆ ತೆರಳಿ ಅವರಿಗೆ ಗೌರವ ಸಮರ್ಪಿಸುವುದು ಇದರಲ್ಲಿ ಗಮನಸೆಳೆಯುವಂತಹ ಕಾರ್ಯಕ್ರಮ ಆಗಿರಲಿದೆ. ■

### ಬ್ರಿಟಿಷರ ವಿರುದ್ಧ ಕಿತ್ತೂರಿನ ರಣಕಹಳೆ...

ಬ್ರಿಟಿಷರ ವಿರುದ್ಧ ರಣಕಹಳೆ ಮೊಳಗಿಸಿದ ಸಂಸ್ಥಾನಗಳಲ್ಲಿ ಕಿತ್ತೂರು ಸಂಸ್ಥಾನ ಕೂಡ ಒಂದು. ಉತ್ತರ ಭಾರತದಲ್ಲಿ ಝಾನ್ಸಿ ರಾಣಿ ಲಕ್ಷ್ಮೀಬಾಯಿಗಿಂತ ಮೊದಲೇ ಹೋರಾಟಕ್ಕೆ ಧುಮುಕಿದ ಕಿತ್ತೂರು ರಾಣಿ ಚನ್ನಮ್ಮ ಕನ್ನಡನಾಡಿನ ವೀರಮಹಿಳೆಯರಲ್ಲಿ ಅಗ್ರ ಪಂಕ್ತಿಗೆ ಸೇರುತ್ತಾರೆ.

ಬೆಳಗಾವಿ ಸಮೀಪದ ಕಾಕತಿ ಗ್ರಾಮದಲ್ಲಿ 1778 ಅಕ್ಟೋಬರ್ 23 ರಂದು ಕಾಕತಿಯ ದೇಸಾಯಿ ಧೂಳಪ್ಪಗೌಡರ ಮಗಳಾಗಿ ಜನಿಸಿದ ಚನ್ನಮ್ಮ, ಚಿಕ್ಕಂದಿನಿಂದಲೇ ಯುದ್ಧ ಕಲೆಗಳನ್ನು ಕರಗತ ಮಾಡಿಕೊಂಡಿದ್ದರು. ಬ್ರಿಟಿಷರು ದತ್ತಕ ಮಕ್ಕಳಿಗೆ ಹಕ್ಕಿಲ್ಲ ಎಂಬ ಕಾಯ್ದೆ ಜಾರಿಗೊಳಿಸಿದ್ದರು. ಇದನ್ನೇ ಮುಂದಿಟ್ಟುಕೊಂಡು ಧಾರವಾಡದ ಅಂದಿನ ಕಲೆಕ್ಟರ್ ಥ್ಯಾಕರೆ ಕಿತ್ತೂರಿನ ದತ್ತಕವನ್ನು ತಿರಸ್ಕರಿಸುತ್ತಾನೆ.

ಕಿತ್ತೂರು ಕೋಟೆ ವಶಕ್ಕೆ ಮುಂದಾದ ಥ್ಯಾಕರೆ ಅಕ್ಟೋಬರ್ 21, 1824 ರಂದು ಸ್ವತಃ ಕಿತ್ತೂರಿಗೆ ಬಂದನು. ಅಕ್ಟೋಬರ್ 23 ರಂದು ಕೋಟೆ ವಶಕ್ಕೆ ಪಡೆಯಲು ಮುಂದಾದ ಥ್ಯಾಕರೆಯು ಕಿತ್ತೂರು ಚನ್ನಮ್ಮನ ಅಂಗರಕ್ಷಕ ಅಮಟೂರು ಬಾಳಪ್ಪನ ಗುಂಡಿಗೆ ಬಲಿಯಾಗುತ್ತಾನೆ.

ಹೀಗೆ ಬ್ರಿಟಿಷರ ಜತೆ ಆರಂಭಗೊಂಡ ಹೋರಾಟದಲ್ಲಿ ಡಿಸೆಂಬರ್ 12 ರಂದು ಚೆನ್ನಮ್ಮನನ್ನು ಬಂಧಿಸಿ ಬೈಲಹೊಂಗಲಕ್ಕೆ ಕರೆದೊಯ್ದು ಸೆರೆಮನೆಯಲ್ಲಿ ಇರಿಸಲಾಗುತ್ತದೆ. ನಾಲ್ಕು ವರ್ಷಗಳ ಕಾಲ ಸೆರೆಯಾಳಾಗಿ ಉಳಿದ ಚೆನ್ನಮ್ಮ ಫೆಬ್ರುವರಿ 2, 1829 ರಂದು ನಿಧನ ಹೊಂದುತ್ತಾರೆ.

ಚೆನ್ನಮ್ಮ ಹೋರಾಟ ಮುಂದುವರಿಸಿದ ಶೂರ ಸಂಗೊಳ್ಳಿ ರಾಯಣ್ಣನನ್ನು 1831 ಜನವರಿ 26 ರಂದು ನಂದಗಡದಲ್ಲಿ ಗಲ್ಲಿಗೇರಿಸಲಾಗುತ್ತದೆ. ಇಂತಹ ಚಾರಿತ್ರಿಕ ಹಿನ್ನೆಲೆಯನ್ನು ಹೊಂದಿರುವ ಚನ್ನಮ್ಮನ ಕಿತ್ತೂರಿನ ಕೋಟೆಯ ಆವರಣದಿಂದ ಸ್ವಾತಂತ್ರ್ಯದ ಅಮೃತ ಮಹೋತ್ಸವ ಚಾಲನೆಗೊಂಡಿರುವುದು ಅರ್ಥಪೂರ್ಣವಾಗಿದೆ.






# ಏಸೂರು ಕೊಟ್ಟರೂ ಈಸೂರು ಕೊಡೆವು...

**ಕೋವಿಡ್ -19ರ ಎರಡನೇ ಅಲೆಯ ಕಾರ್ಮೋಡದಡಿಯಲ್ಲಿಯೇ ದೇಶ ತನ್ನ 75ನೇ ವರ್ಷದ ಸ್ವಾತಂತ್ರೋತ್ಸವಕ್ಕೆ ಸಜ್ಜಾಗುತ್ತಿದೆ. ಈ ಸಂದರ್ಭದಲ್ಲಿಯೇ ಕರ್ನಾಟಕ ಶಿವಮೊಗ್ಗ ಜಿಲ್ಲೆಯ ಶಿಕಾರಿಪುರ ತಾಲ್ಲೂಕಿನ ಸಣ್ಣ ಗ್ರಾಮವೊಂದು ಸುಮಾರು 79 ವರ್ಷಗಳ ಹಿಂದೆ ಸೂರ್ಯ ಮುಳುಗದ ಬ್ರಿಟಿಷ್ ಸಾಮ್ರಾಜ್ಯದೆದುರು ಸೆಡ್ಡು ಹೊಡೆದು ತನ್ನನ್ನು ತಾನು 'ಸ್ವತಂತ್ರ' ಎಂದು ಸ್ವತಃ ಘೋಷಿಸಿಕೊಂಡದ್ದನ್ನು ಪಿಸುಗುಡುತ್ತಿದೆ.**

● ಸದಾನಂದ



ಮಲೆನಾಡು ಬಯಲು ಸೀಮೆಯ ನಡುವೆ ಮಲಗಿ ನಿದ್ರಿಸುತ್ತಿರುವ ಈಸೂರು ಎಂಬ ಈ ಪುಟ್ಟಗ್ರಾಮ ಇರುವುದು ನಮ್ಮ ರಾಜ್ಯದ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪನವರ ಸ್ವಕ್ಷೇತ್ರ ಶಿಕಾರಿಪುರದ ವ್ಯಾಪ್ತಿಯಲ್ಲಿ. ಬೆಂಗಳೂರು ನಗರದಿಂದ ಸುಮಾರು 330 ಕಿ.ಮೀ. ದೂರದಲ್ಲಿರುವ ಗ್ರಾಮದಲ್ಲಿ 1942ರ ಆಗಸ್ಟ್ ತಿಂಗಳಲ್ಲಿ ನಡೆದ ಸ್ವಾತಂತ್ರ್ಯ ಹೋರಾಟ ತನ್ನದೇ ವಿಶಿಷ್ಟ ಕಾರಣಗಳಿಗೆ ದೇಶದ ಅಗ್ರಗಣ್ಯ ಸ್ವಾತಂತ್ರ್ಯ ಸಮರಗಳ ಸಾಲಿನಲ್ಲಿ ನಿಲ್ಲುತ್ತದೆ. ಅಷ್ಟೇ ಅಲ್ಲ, ಕೇವಲ 12 ವರ್ಷದ ಹಿಂದೆ ಪಶ್ಚಿಮ ಬಂಗಾಳದ ಚಿತ್ತಗಾಂಗ್‌ನಲ್ಲಿ ನಡೆದ ಸ್ವಾತಂತ್ರ್ಯ ಹೋರಾಟವನ್ನೂ ನೆನಪಿಸುತ್ತದೆ. ಚಿತ್ತಗಾಂಗ್ ಸ್ವಾತಂತ್ರ್ಯ ಹೋರಾಟದಲ್ಲಿ ಭಾಗಿಯಾದವರು ಹದಿನಾರು ವರ್ಷದೊಳಗಿನ ಶಾಲಾ ಬಾಲಕರೇ. ಅದರಂತೆ ಈಸೂರಿನ ಸ್ವಾತಂತ್ರ್ಯ ಸಮರದಲ್ಲಿಯೂ ಮುಖ್ಯ ಪಾತ್ರಧಾರಿಗಳು ಶಾಲಾ ಮಕ್ಕಳೇ, ಈ ಸ್ವಾತಂತ್ರ್ಯ ಹೋರಾಟ ಐದು ಮಂದಿ ಸ್ವಾತಂತ್ರ್ಯ ಹೋರಾಟಗಾರರನ್ನು ಅಂದಿನ ಬ್ರಿಟಿಷ್ ಸರ್ಕಾರ 1943 ರಲ್ಲಿ ನೇಣುಗಟ್ಟಿಸಿತ್ತು.

Download From : www.kpscvaani.com

## ನೇಣುಗಂಭ:

ಈಸೂರು ಗ್ರಾಮಸ್ಥರ ಸ್ವಾತಂತ್ರ್ಯ ಹೋರಾಟವನ್ನು 'ಈಸೂರು ದಂಗೆ' ಎಂದೇ ಪರಿಗಣಿಸಿದ ಬ್ರಿಟಿಷರ ಸೈನ್ಯ ಸಮೀಪದ ಕಾಡುಗಳಲ್ಲಿ ನುಗ್ಗಿ ನೂರಾರು ಸ್ವಾತಂತ್ರ್ಯ ಹೋರಾಟಗಾರರನ್ನು ಹುಡುಕಿ ಬಂಧಿಸಿತು. ನ್ಯಾಯಾಲಯದ ಮುಂದೆ ಈ ಹೋರಾಟಗಾರರನ್ನು ಹಾಜರಿಪಡಿಸಲಾಯಿತು. ನ್ಯಾಯಾಲಯ 23 ಮಂದಿ ಕ್ರಾಂತಿಕಾರಿಗಳಿಗೆ ನೇಣಿನ ಶಿಕ್ಷೆ ನೀಡಿತು. ಈ ಪೈಕಿ ಗುರಪ್ಪ, ಜಿನಹಳ್ಳಿ ಮಲ್ಲಪ್ಪ, ಸೂರ್ಯನಾರಾಯಣಾಚಾರ್, ಬಡಕಳ್ಳಿ ಹಾಲಪ್ಪ, ಗೌಡ್ರು ಶಂಕರಪ್ಪ ಅವರನ್ನು ಮಾರ್ಚ್ 8 ಹಾಗೂ 10 (1943) ರಂದು ಗಲ್ಲಿಗೇರಿಸಲಾಯಿತು. ಮೈಸೂರು ಅರಸರಾದ ಜಯಚಾಮರಾಜೇಂದ್ರ ಒಡೆಯರ್ ಅವರ ಮಧ್ಯಸ್ಥಿಕೆಯಿಂದಾಗಿ ಉಳಿದ 18 ಮಂದಿಗೆ ಜೀವಾಧಿ ಶಿಕ್ಷೆಯಾಯಿತು.

ಈಸೂರು ಹೋರಾಟಗಾರರ ಸ್ವಾತಂತ್ರ್ಯ ಸಂಗ್ರಾಮ ವ್ಯರ್ಥವಾಗಲಿಲ್ಲ. ಐದು ಮಂದಿ ಕ್ರಾಂತಿಕಾರಿಗಳ ಆತ್ಮಾರ್ಪಣೆ ಫಲ ನೀಡಿತು. ಆಗಸ್ಟ್ 15ರ 1947 ರಂದು ದೇಶ ಸ್ವತಂತ್ರವಾಯಿತು. ಕ್ರಾಂತಿಕಾರಿಗಳಿಗೆ ಜೈಲಿನಿಂದ ಬಿಡುಗಡೆಯಾಯಿತು. ಸೆರೆವಾಸ ಮುಗಿಸಿ ಬಂದ ಈ ಸ್ವಾತಂತ್ರ ವೀರರಿಗೆ ಶಿವಮೊಗ್ಗದ ಜನತೆ ವೀರೋಚಿತ ಸ್ವಾಗತ ನೀಡಿದರು.

ಈಸೂರಿನ ಕೇಂದ್ರಸ್ಥಾನದಲ್ಲಿ ನೇಣುಗಂಭವೇರಿದ ಐದು ಸ್ವಾತಂತ್ರ್ಯ ವೀರರಿಗೆ ಸ್ಮಾರಕವೊಂದನ್ನು ನಿರ್ಮಿಸಲಾಯಿತು. ಮಲೆನಾಡಿನ ಸ್ವಾತಂತ್ರ್ಯ ಸಂಗ್ರಾಮವನ್ನು ಕುರಿತು ಸಂಶೋಧನೆ ನಡೆಸಿರುವ ಡಾ: ವಿರೂಪಾಕ್ಷಪ್ಪ ಈಸೂರು ದಂಗೆಯನ್ನು ಈಸೂರು ಭಾರತದ ಸ್ವಾತಂತ್ರ್ಯ ಹೋರಾಟದಲ್ಲಿ ಸ್ವತಂತ್ರ ಸ್ವರಾಜ್ಯ ಘೋಷಿಸಿಕೊಂಡ ದೇಶದ ಮೊತ್ತ ಮೊದಲ ಗ್ರಾಮ ಎಂದು ಸ್ಪಷ್ಟಪಡಿಸುತ್ತಾರೆ. ಲಕ್ಷ್ಮೀನಾರಾಯಣಪ್ಪ ಈಸೂರು ಶೂರರು ಎಂಬ ನಾಟಕವೊಂದನ್ನು ರಚಿಸಿ, ಪ್ರದರ್ಶಿಸಿದ್ದಾರೆ.



ಸ್ವಾತಂತ್ರ್ಯ ಹೋರಾಟಗಾರರಾದ ಎನ್ ಎಸ್ ಹುಚ್ಚರಾಯಪ್ಪ ಅವರನ್ನು ಅಡ್ವಾಣಿ ಅವರು ಸನ್ಮಾನಿಸುತ್ತಿರುವುದು.

ಈಸೂರನ್ನು ಇಂದು ಪ್ರವೇಶಿದರೂ ಸ್ವಾತಂತ್ರ್ಯ ಹೋರಾಟದ ಇತಿಹಾಸದೊಳಗೊಂದು ಸುತ್ತು ಹಾಕಿದ ಭಾವ ಕಾಡುತ್ತದೆ. ಗ್ರಾಮದ ಮಧ್ಯ ಭಾಗದಲ್ಲಿ ನೇಣುಗೇರಿದ ಐದು ಮಂದಿ ಸ್ವಾತಂತ್ರ್ಯ ಸೇನಾನಿಗಳ ಸ್ಮಾರಕ ಎದುರಾಗುತ್ತದೆ. ಹಾಗೆಯೇ ಮುಂದೆ ಸಾಗಿದರೆ ಸ್ವಾತಂತ್ರ್ಯ ಹೋರಾಟದ ರೂಪುರೇಷೆಗಳು ಸಿದ್ಧವಾದ ವೀರಭದ್ರೇಶ್ವರ ದೇವಾಲಯ, ಈ ದೇವಾಲಯವನ್ನು ಸೇರುವ ಮುಖ್ಯ ರಸ್ತೆ, ಬ್ರಿಟಿಷ್ ಸೈನಿಕರು ಗ್ರಾಮದ ಜನರನ್ನು ಮುಖ್ಯವಾಗಿ ಮಹಿಳೆಯರು, ವೃದ್ಧರು ಮತ್ತು ಮಕ್ಕಳ ಮೇಲೆ ನಡೆಸಿದ ದೌರ್ಜನ್ಯದ ಮೂಕ ಸಾಕ್ಷಿಯಂತಿದೆ. ಗ್ರಾಮಸ್ಥರು ಇಂದಿಗೂ ತಮ್ಮ ತಂದೆ, ತಾತ, ಅಜ್ಜಿಯವರು ನಡೆಸಿದ ಸ್ವಾತಂತ್ರ್ಯ ಹೋರಾಟದ ಕಥೆಯನ್ನು ಕಣ್ಣಿಗೆ ಕಟ್ಟುವಂತೆ ಹೇಳುತ್ತಾರೆ. ಲಾವಣಿಗಳನ್ನು ಹಾಡುತ್ತಾರೆ. ಈ ಸ್ವಾತಂತ್ರ್ಯ ಹೋರಾಟದಲ್ಲಿ ಪಾಲುದಾರರಾಗಿ ಜೈಲುವಾಸ ಅನುಭವಿಸಿ ತಮ್ಮ 105ನೇ ವಯಸ್ಸಿನಲ್ಲಿ ಇತ್ತೀಚೆಗೆ ಅಗಲಿದ ಎನ್.ಎಸ್.ಹುಚ್ಚುರಾಮಪ್ಪ ಅವರ ಗಂಡು ದನಿಯಲ್ಲಿ ಕಥೆ ಕೇಳುವುದು ಒಂದು ಅದ್ಭುತವಾದ ಅನುಭವ.

ಈಗ ಅವರಿಂದ ಕಥೆಯನ್ನು ತಡವಾಗಿ ಪಡೆದುಕೊಂಡಿರುವ ಅವರ 70 ವರ್ಷದ ಮಗ ಎಚ್.ನಾರಾಯಣಕುಮಾರ್ ಅವರಿಂದ ಈಸೂರಿನ ಸ್ವಾತಂತ್ರ್ಯ ಹೋರಾಟದ ಕಥೆಯನ್ನು ಕೇಳೋಣ.

'ಬ್ರಿಟಿಷರೇ ಭಾರತ ಬಿಟ್ಟು ತೊಲಗಿ' ಚಳುವಳಿಗೆ ಮಹಾತ್ಮಗಾಂಧಿ ಕರೆಕೊಟ್ಟ ಸಂದರ್ಭ ಅದು, ಕಾಲ 1942. ತನ್ನನ್ನು ತಾನು ಸ್ವಾತಂತ್ರ್ಯ ಎಂದು ಘೋಷಿಸಿಕೊಂಡ ವಸಾಹತುಶಾಹಿ ಬ್ರಿಟಿಷ್ ಆಡಳಿತದ ಭಾರತದ ಮೊಟ್ಟ ಮೊದಲ ಗ್ರಾಮ ಈಸೂರು. ಇಲ್ಲಿನ ಗ್ರಾಮಸ್ತರು ಬ್ರಿಟಿಷರಿಗೆ ತೆರಿಗೆ ಕೊಡಲು ನಿರಾಕರಿಸಿ, ಬ್ರಿಟಿಷ್ ಅಧಿಕಾರಿಗಳು ಗ್ರಾಮ ಪ್ರವೇಶಿಸದಂತೆ ಜನ ಕೋಟೆ ಕಟ್ಟಿದವರು. ದೇಶದ ನೂರಾರು ಪ್ರಾಂತ್ಯಗಳಂತೆ ಗಾಂಧೀಜಿ ಅವರ ಕ್ವಿಟ್ ಇಂಡಿಯಾ ಚಳುವಳಿಗೆ ಧ್ವನಿಗೂಡಿಸಿದವರು ಈಸೂರಿನ ಗ್ರಾಮಸ್ಥರು. ಹಳ್ಳಿಯವರೆಲ್ಲ ಗ್ರಾಮದ ಮಧ್ಯ ಭಾಗದಲ್ಲಿರುವ ವೀರಭದ್ರೇಶ್ವರ ದೇವಾಲಯದಲ್ಲಿ ಸೇರಿ ಸ್ವಾತಂತ್ರ್ಯ ಚಳುವಳಿಯ ಬಗ್ಗೆ ಚರ್ಚಿಸುತ್ತಿದ್ದರು. ಹಾಗೊಂದು ಸಭೆಯಲ್ಲಿ ಗ್ರಾಮಸ್ಥರು ಈಸೂರು ಸ್ವತಂತ್ರ ಎಂದು ಘೋಷಿಸಿ, ತ್ರಿವರ್ಣ ಧ್ವಜ ಹಾರಿಸಲು ತೀರ್ಮಾನ ತೆಗೆದುಕೊಂಡರು.

> **“ಮಲೆನಾಡಿನ ಸ್ವಾತಂತ್ರ್ಯ ಸಂಗ್ರಾಮವನ್ನು ಕುರಿತು ಸಂಶೋಧನೆ ನಡೆಸಿರುವ ಡಾ: ವಿರೂಪಾಕ್ಷಪ್ಪ ಈಸೂರು ದಂಗೆಯನ್ನು ಈಸೂರು ಭಾರತದ ಸ್ವಾತಂತ್ರ್ಯ ಹೋರಾಟದಲ್ಲಿ ಸ್ವತಂತ್ರ ಸ್ವರಾಜ್ಯ ಘೋಷಿಸಿಕೊಂಡ ದೇಶದ ಮೊತ್ತ ಮೊದಲ ಗ್ರಾಮ ಎಂದು ಸ್ಪಷ್ಟಪಡಿಸುತ್ತಾರೆ.”**

## ಚಕ್ರವ್ಯೂಹ:

ಸ್ವತಂತ್ರ ಹೋರಾಟದ ಹಸಿವಿನಿಂದ ಭೂ ಮಾಲೀಕರಾಗಿದ್ದರೂ ಜನಾನುರಾಗಿಯಾಗಿದ್ದ ಬಸೆಣ್ಣಪ್ಪ ಈ ಹೋರಾಟದ ನೇತೃತ್ವ ವಹಿಸಿಕೊಂಡರು. ಈಸೂರಿನ ಸ್ವತಂತ್ರ ಸರ್ಕಾರದ ಆಡಳಿತಗಾರರು ಹದಿನಾರರ ಹರೆಯದೊಳಗಿನ ಬಾಲಕರು. ಬ್ರಿಟೀಷ್ ಸರ್ಕಾರದ ದಮನಕಾರಿ ನೀತಿಗೆ ಸ್ಥಳೀಯ ಹೋರಾಟಗಾರರು ರಚಿಸಿದ ತಂತ್ರ ಇದು. ಹದಿನಾರರೊಳಗಿನ ಬಾಲಕರನ್ನು ಬಂಧಿಸುವುದು ಕಷ್ಟ ಹಾಗೂ ಅವರನ್ನು ನೇಣಿಗೇರಿಸುವುದಂತೂ ಬ್ರಿಟಿಷ್ ಆಡಳಿತದಲ್ಲೇ ಅಪರಾಧವಾಗಿತ್ತು. ಇದರ ಲಾಭವನ್ನು ಪಡೆದುಕೊಳ್ಳಲು ಈಸೂರಿನ ಸ್ವತಂತ್ರ ಸೇನಾನಿಗಳು ನಿರ್ಧರಿಸಿದರು. ಆದರೆ ಅವರ ಬೆಂಬಲಕ್ಕೆ ನಿಂತವರೆಲ್ಲ ಹಿರಿಯರೇ ಅಭಿಮನ್ಯುಗಳು ಬ್ರಿಟಿಷರ ಚಕ್ರವ್ಯೂಹ ಬೇಧಿಸಿದರೆ ಹಿಂದಿನಿಂದ ನುಗ್ಗಲು ಸಜ್ಜಾದ ಪಾಂಡವರಂತೆ... ಎಂಥ ಅದ್ಭತ ಸಮರ ಚಾಣಕ್ಷ ನೀತಿ.

ಸ್ವತಂತ್ರ ಈಸೂರು ಸರ್ಕಾರ "ಈಸೂರಿನ ಸ್ವರಾಜ್ಯ ಸರ್ಕಾರ"ಎಂಬ ಬೃಹದ್ ಫಲಕವನ್ನು ಗ್ರಾಮದ ಮುಂದೆ ಸ್ಥಾಪಿಸಿತು. ಬ್ರಿಟಿಷ್ ಅಧಿಕಾರಿಗಳಿಗೆ ಪ್ರವೇಶವನ್ನು ನಿಷೇಧಿಸುವ ಹಾಗೂ ಉಲ್ಲಂಘನೆಗೆ ಈಸೂರು ಸ್ವತಂತ್ರ್ಯ ಸ್ವರಾಜ್ ಸರ್ಕಾರದಿಂದ ಕಠಿಣ ಕ್ರಮ ಎಂಬ ಮತ್ತೊಂದು ಫಲಕವನ್ನು ಪ್ರತಿಷ್ಠಾಪಿಸಿತು.

ಈ ಹೋರಾಟಕ್ಕೆ ಮುನ್ನುಡಿ ಬರೆದದ್ದು ಸರ್ಕಾರದ ಕಂದಾಯ ವಸೂಲಿಗೆಂದು ಬಂದ ಶಾನುಭೋಗರು. 1942ರ ಸೆಪ್ಟೆಂಬರ್ ತಿಂಗಳಲ್ಲಿ. ಸ್ವರಾಜ್ ಈಸೂರು ಸರ್ಕಾರದ ಅನುಮತಿ ಇಲ್ಲದೆ ಗ್ರಾಮ ಪ್ರವೇಶಿಸಿದ ಶಾನುಭೋಗರನ್ನು ಒಂಟಿಗಾಲಲ್ಲಿ ನಿಲ್ಲುವ ಶಿಕ್ಷೆ ವಿಧಿಸಲಾಯಿತು. ನಂತರ ಕ್ಷಮಾಪಣೆ ಪಡೆದು ಬಿಡುಗಡೆ ಮಾಡಲಾಯಿತು.

ಈ ಘಟನೆಯಿಂದ ಬ್ರಿಟಿಷ್ ಸರ್ಕಾರಕ್ಕೆ ಈಸೂರಿನ ಹೋರಾಟದ ಬಿಸಿತಟ್ಟಿ ತೀವ್ರತೆ ಅರ್ಥವಾಯಿತು. ಜನತೆಗೆ ಶಾನುಭೋಗರು ರಾಜಿನಾಮೆ ಸಲ್ಲಿಸಿದ್ದು ಬ್ರಿಟಿಷ್ ಸಾಮ್ರಾಜ್ಯದ ಸಾರ್ವಭೌಮತ್ವವನ್ನು ಪ್ರಶ್ನಿಸಿದಂತಾಯಿತು. ಅಮಲ್ದಾರರು, ಪೋಲೀಸ್ ಅಧಿಕಾರಿಗಳು ಪರಿಸ್ಥಿತಿಯನ್ನು ಪರಿಶೀಲಿಸಲು ಹಿಂದುಳಿದರು.

ಸೆಪ್ಟೆಂಬರ್ 28, 1942 ಈಸೂರಿನ ಇತಿಹಾಸದಲ್ಲಿ ಮರೆಯಲಾಗದ ದಿನ. ಪೊಲೀಸ್ ಅಧಿಕಾರಿ ಕೆಂಚೇಗೌಡ, ಕಂದಾಯ ಅಧಿಕಾರಿ ಚನ್ನಕೃಷ್ಣಯ್ಯ ಪೊಲೀಸ್ ಪಡೆಯೊಂದಿಗೆ ಈಸೂರಿನ ಬಾಗಿಲಲ್ಲಿ ಬಂದು ನಿಂತರು. ಸಮಸ್ಯೆಯ ತೀವ್ರತೆಯನ್ನು ಮೊದಲೇ ಅಂದಾಜಿಸಿದ್ದ ಗ್ರಾಮಸ್ಥರು ಈಸೂರನ್ನು ನಾಲ್ಕು ದಿಕ್ಕುಗಳಿಂದ ರಕ್ಷಣೆಯ ವ್ಯೂಹ ರಚಿಸಿದ್ದರು. ರಚಿಸಿದ್ದ ಬೇಲಿಯನ್ನು ಕಿತ್ತುಹಾಕುವಂತೆ ಗಣತಂತ್ರ ಈಸೂರಿನ ನಾಯಕ ಹದಿನೈದರ ಹದಿಹರೆಯದ ಬಾಲಕನನ್ನು ಕೆಂಚೇಗೌಡ ಗದರಿಸಿ, ಅಪಮಾನಿಸಿದಾಗ ಗ್ರಾಮದ ಸ್ವರಾಜ್ ಸೇನೆಯ ಹೊಡೆತಕ್ಕೆ ಕೆಂಚೇಗೌಡ ಮತ್ತು ಚನ್ನಕೃಷ್ಣಯ್ಯ ಮರಣ ಹೊಂದಿದರು. ಪೊಲೀಸರ ಬಲಪ್ರಯೋಗ ಕಾಳಗದಲ್ಲಿ ನೂರಾರು ಗ್ರಾಮಸ್ಥರು ಗಾಯಗೊಂಡರು. ಆದರೆ ಹೋರಾಟ ಕೆಚ್ಚಿನಿಂದ ಕೂಡಿತ್ತು.



ತನ್ನಿಬ್ಬರು ಅಧಿಕಾರಿಗಳ ಸಾವಿನಿಂದ ಬ್ರಿಟಿಷ್ ಸರ್ಕಾರಕ್ಕೆ ಮುಖಭಂಗವಾಗಿ ತನ್ನ ಸಾರ್ವಭೌಮತ್ವಕ್ಕೆ ಸೆಡ್ಡು ಹೊಡೆದವರ ವಿರುದ್ಧ ಕ್ರಮಕ್ಕೆ ಸಜ್ಜಾಯಿತು. ಪಕ್ಕದ ಹಾವೇರಿಯಿಂದ ಮಿಲಿಟರಿ ತುಕುಡಿಗೆ ಶಿಕಾರಿಪುರದತ್ತ ನಡೆಯಲು ಆದೇಶ ನೀಡಿತು. ಮುಂದೆ ನಡೆದದ್ದು ಈಸೂರಿನ ಇತಿಹಾಸದ ಕಪ್ಪು ಅಧ್ಯಾಯ. ಸೈನ್ಯದ ಪ್ರವೇಶದ ಸೂಚನೆ ದಕ್ಕುತ್ತಿದ್ದಂತೆ ಸ್ವಾತಂತ್ರ್ಯ ಹೋರಾಟಗಾರರು ಸಮೀಪದ ಕಾಡುಗಳಲ್ಲಿ ಕಣ್ಮರೆಯಾದರು. ತಲೆ ಮರೆಸಿಕೊಂಡವರು ಗ್ರಾಮದಲ್ಲಿ ಬಿಟ್ಟು ಹೋದದ್ದು, ಹೆಂಗಸರು, ಮಕ್ಕಳು, ವೃದ್ಧರನ್ನು ಮಾತ್ರ. ಇದರಿಂದ ಕೋಪಾದಿಷ್ಟರಾದ ಬ್ರಿಟಿಷ್ ಸೈನಿಕರು ಮಕ್ಕಳು, ಹೆಂಗಸರನ್ನು ವೃದ್ಧರನ್ನು ಬಡಿದು ಹಿಂಸಿಸಿದರು. ಈಸೂರು ಒಂದರ್ಥದಲ್ಲಿ ಸ್ಮಶಾನ ಸದೃಶ ಕುರುಕ್ಷೇತ್ರದಂತಾಯಿತು.

ಈ ಹೋರಾಟದ ಭಾಗವನ್ನು ಕಣ್ಣಾರೆ ಕಂಡಿರುವ ಎಂಬತ್ತರ ಇಳಿವಯಸ್ಸಿನ ಗುರುಶಾಂತಮ್ಮ ಲಾವಣಿಯನ್ನು ರಚಿಸಿದ್ದಾರೆ. ಅದನ್ನು ಕೇಳುತ್ತಿದ್ದಂತೆ ಕೇಳುಗರ ಕಣ್ಣುಗಳಲ್ಲಿ ಅಶೃಧಾರೆಗೆ ತಡೆ ಇಲ್ಲ.

ಈಸೂರಿನ ಸ್ವಾತಂತ್ರ್ಯ ಸಂಗ್ರಾಮವನ್ನು ಇಂದಿನ ಪೀಳಿಗೆಗೆ ತಲುಪಿಸಲು ಸೂಕ್ತವಾದ ರೀತಿಯಲ್ಲಿ ಪ್ರಯತ್ನಿಸುವ ಅಗತ್ಯವಿದೆ. ಬಸವರಾಜ್ ವೈಭವ್ ಎಂಬ ಸೃಜನಾತ್ಮಕ ಚಿತ್ರ ನಿರ್ದೇಶಕ ಈಸೂರು ದಂಗೆ ಎಂಬ ಚಲನಚಿತ್ರ ನಿರ್ದೇಶಿಸಲು ಮುಂದಾಗಿದ್ದಾರೆ. ನಟ ಶಿವರಾಜ್‌ಕುಮಾರ್ ಅವರು ಸೂರ್ಯನಾರಾಯಣಾಚಾರ್ ಪಾತ್ರವನ್ನು ಮಾಡಲು ಮುಂದಾಗಿದ್ದಾರೆ. ಕಳೆದ ಏಳು ವರ್ಷಗಳಿಂದ ಚಿತ್ರಕಥೆ ನಿರ್ಮಾಣದಲ್ಲಿ ತೊಡಗಿದ್ದಾರೆ. ಈ ಚಿತ್ರದ ಪೋಸ್ಟರ್ ಕೂಡ ಸಿದ್ಧವಾಗಿದೆ.

ಈ ಚಿತ್ರ ಒಂದರ್ಥದಲ್ಲಿ ಕನ್ನಡದ 'ಲಗಾನ್' ಎಂದೇ ಹೇಳಲಾಗುತ್ತಿದೆ. ಈಸೂರಿನ ಸುತ್ತಮುತ್ತಲಿನ ಗ್ರಾಮ, ಅರಿಶಿನಗೆರೆ, ಬಳ್ಳಿಗಾವಿ ಗ್ರಾಮದಲ್ಲಿ ಚಿತ್ರೀಕರಣ ನಡೆಸಲು ಸಿದ್ಧತೆ ಮಾಡಲಾಗಿದೆ.

**ಈಸೂರು 75ನೇ ಸ್ವಾತಂತ್ರ್ಯ ಸಂಗ್ರಾಮದ ನೆನಪಿನಲ್ಲಿ ಮತ್ತೆ ನೆನಪಿನಲ್ಲಿ ಉಳಿಯುವಂತಾದರೆ ಅದೇ ಈ ಸಂದರ್ಭಕ್ಕೆ ಸಮಾಜ ನೀಡಬಹುದಾದ ಕೊಡುಗೆ.**

Download From : www.kpscvaani.com

# ಹಾಸನ ಜಿಲ್ಲೆಗೆ ದೀನ್ ದಯಾಳ್ ಉಪಾಧ್ಯಾಯ ಪ್ರಶಸ್ತಿ



ವಿನೋದ್ ಚಂದ್ರ

**ಕೇಂದ್ರ ಸರ್ಕಾರದ ಪಂಚಾಯತ್ ರಾಜ್ ಇಲಾಖೆಯು ಗ್ರಾಮ ಪಂಚಾಯಿತಿ ಸಬಲೀಕರಣಕ್ಕೆ ನೀಡುವ ದೀನ್ ದಯಾಳ್ ಉಪಾಧ್ಯಾಯ ಪಂಚಾಯತ್ ಸಶಕ್ತೀಕರಣ ಪುರಸ್ಕಾರಕ್ಕೆ ಹಾಸನ ಜಿಲ್ಲೆಯು ಆಯ್ಕೆಯಾಗಿದೆ.**

ಗ್ರಾಮ ಪಂಚಾಯಿತಿ ಹಾಗೂ ತಾಲ್ಲೂಕು ಪಂಚಾಯಿತಿಗಳನ್ನು ಎಲ್ಲಾ ಸ್ವರೂಪಗಳಲ್ಲಿ ಸಶಕ್ತಗೊಳಿಸುವ ನಿಟ್ಟಿನಲ್ಲಿ ಕಾರ್ಯನಿರ್ವಹಿಸುತ್ತಿರುವ ಹಾಸನ ಜಿಲ್ಲಾ ಪಂಚಾಯಿತಿ ಅತ್ಯುತ್ತಮ ಸಾಧನೆ ಮಾಡಿರುವ ಹಿನ್ನೆಲೆಯಲ್ಲಿ ಕರ್ನಾಟಕ ರಾಜ್ಯದಲ್ಲಿ ಪ್ರಥಮ ಸ್ಥಾನ ಪಡೆದು ದೀನ್ ದಯಾಲ್ ಉಪಾಧ್ಯಾಯ ಪ್ರಶಸ್ತಿ ಪಡೆದುಕೊಂಡಿದೆ.

ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯನಿರ್ವಾಹಣಾಧಿಕಾರಿ ಬಿ.ಎ ಪರಮೇಶ್ ಅವರ ವಿಶೇಷ ಕಾಳಜಿಯು ಜಿಲ್ಲೆಗೆ ಈ ಪ್ರಶಸ್ತಿ ಲಭಿಸುವಲ್ಲಿ ಪ್ರಮುಖ ಪಾತ್ರವಹಿಸಿದೆ. ಎಲ್ಲಾ ಜನಪ್ರತಿನಿಧಿಗಳು ಜಿಲ್ಲಾ ಪಂಚಾಯಿತಿ, ತಾಲ್ಲೂಕು ಪಂಚಾಯಿತಿ, ಗ್ರಾಮ ಪಂಚಾಯಿತಿ ಅಧಿಕಾರಿಗಳ ತಂಡವನ್ನು ಒಗ್ಗೂಡಿಸಿ ನಿರಂತರ ನಿಗಾವಹಿಸುತ್ತ, ಸರ್ಕಾರಗಳ ಯೋಜನೆಗಳ ಸಮರ್ಪಕ ಅನುಷ್ಠಾನಕ್ಕೆ ಪಟ್ಟ ಶ್ರಮ ಫಲ ನೀಡಿದೆ.

ಗ್ರಾಮ ಹಾಗೂ ತಾಲ್ಲೂಕು ಪಂಚಾಯಿತಿಗಳಲ್ಲಿ ಸರ್ಕಾರದ ವತಿಯಿಂದ ಬಿಡುಗಡೆಯಾದ ಅನುದಾನ ಹಾಗೂ ಅನುಷ್ಠಾನಗೊಂಡ ಯೋಜನೆಗಳನ್ನು ಜನರಿಗೆ ತಲುಪಿಸುವಲ್ಲಿ ಜಿಲ್ಲಾ ಪಂಚಾಯತ್ ಯಶಸ್ವಿಯಾಗಿದೆ. ಜೊತೆಗೆ ಗ್ರಾಮೀಣ ಪ್ರದೇಶಗಳಲ್ಲಿ ಕುಡಿಯುವ ನೀರು, ಸ್ವಚ್ಛ ನೈರ್ಮಲ್ಯ, ಶೌಚಾಲಯ ಇನ್ನಿತರ ಮೂಲಭೂತ ಸೌಕರ್ಯಗಳನ್ನು ಒದಗಿಸುವಲ್ಲಿ ಹೆಚ್ಚಿನ ಒತ್ತನ್ನು ನೀಡಿರುವುದು ಕೂಡ ಪ್ರಶಸ್ತಿಗೆ ಪ್ರಮುಖ ಕಾರಣವೆಂದು ಹೇಳಬಹುದು.

ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಂಡದ ಸಮುದಾಯದವರಿಗೆ ಸರ್ಕಾರದ ವತಿಯಿಂದ ದೊರೆಯಬೇಕಾದ ಎಲ್ಲಾ ಸೌಲಭ್ಯ ಹಾಗೂ ಅನುದಾನವನ್ನು ಸಂಪೂರ್ಣವಾಗಿ ವಿನಿಯೋಗಿಸಿ ಅವರ ಕಲ್ಯಾಣಕ್ಕೆ ಹೆಚ್ಚಿನ ಒತ್ತನ್ನು ನೀಡಿ ಅಭಿವೃದ್ಧಿಗೊಳಿಸಿರುವುದು, ಹಾಗೂ ಗ್ರಾಮ ಪಂಚಾಯಿತಿಗಳಲ್ಲಿ ಹೆಚ್ಚಿನ ಗ್ರಾಮ ಸಭೆಗಳನ್ನು ಕೈಗೊಂಡು ಸ್ಥಳೀಯರು, ಮಹಿಳೆಯರು ಮತ್ತು ಹಿರಿಯ ನಾಗರಿಕರ ಸಲಹೆ ಸೂಚನೆಗಳನ್ನು ಸ್ವೀಕರಿಸಿ ಗ್ರಾಮದ ಸಂಪೂರ್ಣ ಅಭಿವೃದ್ಧಿಗೆ ಒತ್ತು ನೀಡಲಾಗಿರುವ ಅಂಶಗಳನ್ನು ಪುರಸ್ಕಾರಕ್ಕೆ ಆಯ್ಕೆ ಮಾಡುವ ಸಂದರ್ಭದಲ್ಲಿ ಪರಿಗಣಿಸಲಾಗಿದೆ.

ಜಿಲ್ಲೆಯ ಶಾಲೆಗಳಲ್ಲಿ ಮೂಲಬೂತ ಸೌಕರ್ಯ ಹಾಗೂ ಹೆಚ್ಚಿನ ನಿಗಾವಹಿಸಿ ಶಾಲಾ ಮಕ್ಕಳಿಗೆ ಗ್ರಂಥಾಲಯ, ಆಟದ ಮೈದಾನ, ಕುಡಿಯುವ ನೀರಿನ ವ್ಯವಸ್ಥೆ, ಉತ್ತಮ ಶೌಚಾಲಯ, ಕಲ್ಪಿಸಿಕೊಟ್ಟು ಪರಿಣಿತ ಶಿಕ್ಷಕರನ್ನು ಒದಗಿಸಿ ಹೆಚ್ಚಿನ ಮಕ್ಕಳನ್ನು ಸರ್ಕಾರಿ ಶಾಲೆಗಳ ಕಡೆ ಆಕರ್ಷಿತರನ್ನಾಗಿ ಮಾಡುತ್ತಿರುವುದು ಕೂಡ ಗಮನಾರ್ಹ ಅಂಶವಾಗಿದೆ.

ಕೇಂದ್ರ ಸರ್ಕಾರದ ಯೋಜನೆಯಾದ ಸ್ವಚ್ಛ ಭಾರತ ಅಭಿಯಾನವನ್ನು ಎಲ್ಲಾ ಗ್ರಾಮ ಪಂಚಾಯಿತಿ ಮಟ್ಟದಲ್ಲಿ ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಿ ಸಾರ್ವಜನಿಕರಿಗೆ ಅರಿವು ಮೂಡಿಸಿ ಸ್ವಚ್ಛತೆಯನ್ನು ಕಾಪಾಡಲು ಅನೇಕ ಕಾರ್ಯಕ್ರಮಗಳನ್ನು ಕೈಗೊಂಡಿರುವುದು ಸಹ ಈ ಪ್ರಶಸ್ತಿ ಗಳಿಸಲು ಸಹಕರಿಯಾಗಿದೆ.

ಜಿಲ್ಲಾ ಪಂಚಾಯಿತಿಯು ಸುಮಾರು 863 ಸಾರ್ವಜನಿಕರಿಂದ ಕುಂದುಕೊರತೆ ಅರ್ಜಿಗಳನ್ನು ಹಾಗೂ ಆರ್.ಟಿ.ಐ ಯಡಿಯಲ್ಲಿ ಬಂದಂತಹ ಅರ್ಜಿಗಳನ್ನು ಸ್ವೀಕರಿಸಿ ಅವರ ಸಮಸ್ಯೆಗಳಿಗೆ ತಕ್ಷಣ ಸ್ಪಂದಿಸಿದೆ. ಅಲ್ಲದೆ ಎಲ್ಲಾ ಯೋಜನೆಗಳ ಅನುಷ್ಠಾನದ ಬಗ್ಗೆ ಮಾಹಿತಿಯನ್ನು ಸರ್ಕಾರಕ್ಕೆ ಸಕಾಲದಲ್ಲಿ ಒದಗಿಸುವ ಮೂಲಕ ಕೂಡ ಉತ್ತಮವಾಗಿ ಕಾರ್ಯನಿರ್ವಹಣೆ ಮಾಡಲಾಗಿದೆ.

ಒಟ್ಟಾರೆ ಹಾಸನ ಜಿಲ್ಲಾ ಪಂಚಾಯಿತಿ ಕೇಂದ್ರ ಸರ್ಕಾರದ ಪುರಸ್ಕಾರಕ್ಕೆ ಆಯ್ಕೆಯಾಗಿರುವುದು ಅಭಿನಂದನಾರ್ಹವಾಗಿದೆ. ಮುಂದೆಯು ಇಂತಹ ಸಾಧನೆ ಮುಂದುವರೆಯಲಿ ಎಂಬುದು ನಾಗರಿಕರ ಹಾರೈಕೆಯಾಗಿದೆ.



# ವಿಧಾನಮಂಡಲ ಚಟುವಟಿಕೆಗಳು ಮತ್ತು ಮಾಧ್ಯಮದ ಕರ್ತವ್ಯ




**ಶಾಸಕಾಂಗ, ಕಾರ್ಯಾಂಗ ಮತ್ತು ನ್ಯಾಯಾಂಗದ ಕಾರ್ಯವೈಖರಿಗಳನ್ನು, ಸಾಧನೆಗಳನ್ನು ಮತ್ತು ತಪ್ಪುಗಳನ್ನು ಜನರಿಗೆ ವಸ್ತುನಿಷ್ಠವಾಗಿ ತಿಳಿಸುವುದು ಪ್ರಜಾಪ್ರಭುತ್ವ ವ್ಯವಸ್ಥೆಯ ನಾಲ್ಕನೇ ಅಂಗವಾಗಿರುವ ಪತ್ರಿಕಾರಂಗದ ಪ್ರಮುಖ ಜವಾಬ್ದಾರಿಯಾಗಿರುತ್ತದೆ. ಮೇ ೩ ರಂದು ವಿಶ್ವ ಪತ್ರಿಕಾ ಸ್ವಾತಂತ್ರ್ಯ ದಿನ. ಈ ಹಿನ್ನೆಲೆಯಲ್ಲಿ ಲೇಖಕರು ತಮ್ಮ ವೃತ್ತಿ ಬದುಕಿನ ಅನುಭವದ ಮೇಲೆ ವಿಧಾನಮಂಡಲ ಚಟುವಟಿಕೆಗಳಲ್ಲಿ ಮಾಧ್ಯಮಗಳ ಕರ್ತವ್ಯಗಳೇನು ಎಂಬುದನ್ನು ಸಂಕ್ಷಿಪ್ತವಾಗಿ ವಿವರಿಸಿದ್ದಾರೆ.**

ಈಶ್ವರ ದೈತೋಟ

ರಾಷ್ಟ್ರ ಮಟ್ಟದಲ್ಲಿ ಸಂಸದೀಯ ಸದನಗಳು–ಲೋಕಸಭೆ, ರಾಜ್ಯಸಭೆಗಳು, ಕರ್ನಾಟಕಕ್ಕೆ ಬಂದಾಗ ವಿಧಾನಸಭೆ–ವಿಧಾನ ಪರಿಷತ್ತುಗಳೆರಡೂ, ಪ್ರಜಾಪ್ರಭುತ್ವ ವ್ಯವಸ್ಥೆಯ ಆಧಾರ ಸ್ತಂಭಗಳು. ತಳಮಟ್ಟದಲ್ಲಿ ಸ್ಥಳೀಯ ಆಡಳಿತ ಸಂಸ್ಥೆಗಳು ಗ್ರಾಮ ಪಂಚಾಯತಿಯಿಂದ ಮೆಟ್ರೋಪಾಲಿಟನ್ ಆಡಳಿತದವರೆಗೆ ಬೆಂಬಲಕೊಡುವ ಮೂರನೆಯ ಭುಜಗಳು ಎನ್ನಬಹುದು. ಇವೆಲ್ಲದರ ಚಟುವಟಿಕೆಗಳನ್ನು ಪ್ರಜೆಗಳ ಮುಂದಿಡುವುದು ಪತ್ರಿಕೋದ್ಯಮ ಅಥವಾ ಮಾಧ್ಯಮದ ಕರ್ತವ್ಯ.

ಪತ್ರಿಕೆ, ರೇಡಿಯೋ, ಸರ್ಕಾರಿ ಟೆಲಿವಿಶನ್‌ಗಳಿಂದ ರಾಜ್ಯವಾರು, ಭಾಷೆವಾರು ಮಾಧ್ಯಮ ಬೆಳೆಯುತ್ತಲಿದ್ದಾಗ ದೇಶದ ಮೂಲೆಮೂಲೆಗಳಲ್ಲಿ ಪಾರ್ಲಿಮೆಂಟ್ ಹಾಗೂ ವಿಧಾನ ಮಂಡಲ ಅಧಿವೇಶನಗಳ ಬಗ್ಗೆ ಓದಿ, ನೋಡಿ ಶ್ರೀಸಾಮಾನ್ಯರು ಚರ್ಚೆ–ಹರಟೆ ಹೊಡೆಯುತ್ತಿದ್ದುದು ಸಾಮಾನ್ಯ. ಈಗ ಆರ್ಥಿಕತೆಯ ಅಂತರರಾಷ್ಟ್ರೀಯ ವಿಸ್ತರಣೆ ಪ್ರಭಾವದೊಂದಿಗೆ ಮಾಧ್ಯಮಗಳೂ ಜಾಗತೀಕರಣಕ್ಕೆ ಶರಣು ಹೊಡೆದಾಗಿದೆ. ವಿದ್ಯುನ್ಮಾನ ಮಾಧ್ಯಮಗಳ ರಾಜಕೀಯ ಕವರೇಜಿನ ವರಸೆ ಹಾಗೂ ಹಾರಾಟಗಳನ್ನು ಗಮನಿಸುತ್ತಲಿರುವ ನಗರಪ್ರದೇಶ ವಾಸಿಗಳು ಮಾತ್ರವಲ್ಲ, ಕುಗ್ರಾಮಗಳ ವಾಸಿಗಳೂ **"ಏನಿದೆಲ್ಲಾ"** ಎಂದು ಪ್ರಶ್ನಿಸುವುದು ಸಾಮಾನ್ಯವಾಗಿದೆ.

ಮುಖ–ಪರಿಚಿತರು, ಪತ್ರಕರ್ತರುಗಳನ್ನು ಕೈಹಿಡಿದು ನಿಲ್ಲಿಸಿ, ಲೋಕಾಭಿರಾಮದಲ್ಲಿ 'ಏನ್ರೀ ನಮ್ಮ ಅಸೆಂಬ್ಲಿ, ಪಾರ್ಲಿಮೆಂಟ್‌ಗಳಲ್ಲಿ ಬರೀ ಧರಣಿ, ಬೊಬ್ಬೆ, ಗಲಾಟೇನೇ ಆಗುತ್ತಿದೆಯಲ್ಲಾ, ಯಾಕೆ ಮೊದಲಿನಂತೆ ಏನು ನಡೆಯುತ್ತಿದೆ ಎಂಬ ವಿವರಗಳು ನಿಮ್ಮಿಂದ ಸರಿಯಾಗಿ ಬರುತ್ತಿಲ್ಲವಲ್ಲಾ ಎಂದು ಪ್ರಶ್ನಿಸುವವರು ಸಿಗುತ್ತಲೇ ಇರುತ್ತಾರೆ. ವಿಧಾನಮಂಡಲದಲ್ಲಿ ಮತ್ತು ಸಂಸತ್ತುಗಳಲ್ಲಿ ದಿನನಿತ್ಯವೂ ನಡೆಯುವ ಪ್ರಶ್ನೋತ್ತರ, ಚರ್ಚೆ, ಹೊಸ ಕಾನೂನು, ಮಂಜೂರಾತಿ ಮತ್ತು ತಿದ್ದುಪಡಿಗಳು, ಸಮುದಾಯದಲ್ಲಿ ಕಂಡು ಬರುವ ಅಗತ್ಯ, ಕೊರತೆಗಳ ವಿಶ್ಲೇಷಣೆ,



Download From : www.kpscvaani.com



ಸಕಾರಾತ್ಮಕ ತೀರ್ಮಾನಗಳು, ಪರಿಶೀಲನೆಗಳು ಕಾಲಕಾಲಕ್ಕೆ ಆಗುವ ಸಮಾಜದ ಬೆಳವಣಿಗೆಗಳು, ಅಸಮಾಧಾನದ ಪ್ರಸ್ತಾವನೆಗಳು ಅದೆಷ್ಟು ಮಾಹಿತಿಪೂರ್ಣ ಆಗಿರುತ್ತವೆ ಎಂಬುದನ್ನು ಕೆದಕುವವರು ಕೂಡಾ ಸಿಗುತ್ತಲಿರುತ್ತಾರೆ. ನಾನು ವೃತ್ತಿ ಅನುಭವದಿಂದಲೇ ಪಟ್ಟಿಮಾಡಬಲ್ಲೆನು. ಪಾಸಿಟೀವ್–ನೆಗಟೀವ್ ಪ್ರಸ್ತಾವಗಳೆರಡೂ ಚರ್ಚೆ, ವಿಮರ್ಶೆಗೊಳಪಟ್ಟು, ಸರ್ವಾನುಮತದಿಂದ ಒಪ್ಪಿಗೆ ಪಡೆದು ಕಾನೂನುಪಾಲನೆ, ಸಮಾಜ ರಕ್ಷಣೆ ಹಾಗೂ ಅಭಿವೃದ್ಧಿ ಯೋಜನೆಗಳಿಗೆ ಆಧಾರವಾಗುವುದು ಎಲ್ಲಾ ಪತ್ರಿಕೆಗಳಲ್ಲಿ ವರದಿಯಾಗುತ್ತಿದ್ದುದನ್ನು ಮರೆಯುವುದೆಂತು.

ಸಂಸತ್ತಿರಲಿ, ರಾಜ್ಯ ಮಟ್ಟದ ಪರಿಷತ್ತು–ಸಭೆಗಳಿರಲಿ, ನಿರ್ವಹಣೆ ಬಗ್ಗೆ ನಮ್ಮ ಸಂವಿಧಾನ ನಿರೂಪಿಸಿದ ಡಾ.ಬಿ.ಆರ್. ಅಂಬೇಡ್ಕರ್ ನೇತೃತ್ವದ ಮಂಡಳಿಯ ಕೊಡುಗೆಗೆ ನಮೋನಮಃ ಎನ್ನಲೇ ಬೇಕು. ಕಾಲ, ಕಾಲದ ಬೆಳವಣಿಗೆ, ನಿರ್ವಹಣೆಗಳಿಗೆ ಬೇಕಾದಂತಹ ತಿದ್ದುಪಡಿ, ಸುಧಾರಣೆ ತಂದು ಕೊಳ್ಳಲು ಅವಕಾಶ ಅದರಲ್ಲಿದೆ. ಹಾಗೆಯೇ, ಸಂಸದೀಯ ವ್ಯವಸ್ಥೆಯ ಕಾನೂನಿಗೊಳಪಟ್ಟಂತೆ ಪ್ರಿಂಟ್ ಹಾಗೂ ಇಲೆಕ್ಟ್ರಾನಿಕ್ ಮೀಡಿಯಾದಲ್ಲಿ ಪ್ರಕಟಣೆ, ಪ್ರಸಾರ ಮಾಡಲು ಅವಕಾಶವೂ ಇದೆ. ಅದಲ್ಲದೆ, ಸದನದಲ್ಲಿ ಪ್ರಸ್ತಾಪಿಸಲ್ಪಟ್ಟು ಅನುಚಿತವೆಂದು ಭಾವಿಸಲಾದುದನ್ನು ಕಡತದಿಂದ ತೆಗೆದು ಹಾಕುವ ಅವಕಾಶ ಪ್ರತಿಯೊಂದು ಸಭಾಧ್ಯಕ್ಷರುಗಳಿಗೂ ಇರುತ್ತದೆ. ರಾಜ್ಯ ಸಭೆ ಬಿಟ್ಟರೆ ದೇಶದ ಕೇವಲ 5 ರಾಜ್ಯಗಳಲ್ಲಿ ಮಾತ್ರ ಉಳಿದಿರುವ ಮೇಲ್ಮನೆಗಳಿಗೆ ಬಜೆಟ್ ಅಥವಾ ಆರ್ಥಿಕ ತೀರ್ಮಾನಗಳನ್ನು ತೆಗೆದುಕೊಳ್ಳಲು ಹಕ್ಕಿಲ್ಲವೆಂದು ಸಂವಿಧಾನವೇ ನಿರ್ಧರಿಸಿದೆ. ಅವರು ನೇರವಾಗಿ ಪ್ರಜೆಗಳಿಂದ ಆಯ್ಕೆಯಾದವರಲ್ಲ. ಉಳಿದೆಲ್ಲ ವಿಚಾರಗಳಲ್ಲಿ ಮೇಲ್ಮನೆಯ ನೀತಿನಿರೂಪಣೆ– ಮರ್ಯಾದೆ ಚೌಕಟ್ಟಿನೊಳಗೆ ಅಭಿಪ್ರಾಯ ಮಂಡಿಸುವ, ಟೀಕಿಸುವ ಅಧಿಕಾರವೂ ನಡೆದು ಬಂದಿದೆ.

ಸದನದೊಳಗೆ ಯಾರೇ ಸಚಿವರು, ಸದಸ್ಯರು ಬಹಿರಂಗವಾಗಿ ಉಲ್ಲೇಖಿಸಿದ ವಿಚಾರಗಳ ಔಚಿತ್ಯದ ಬಗ್ಗೆ, ಕಠಿಣ ಟೀಕೆಗಳು ತಪ್ಪೆಂದು ಗುರುತಿಸಲ್ಪಟ್ಟರೆ

> **ಪ್ರಜಾಪ್ರಭುತ್ವದಲ್ಲಿ ಆಡಳಿತ ಮತ್ತು ಜನತೆಯ ನಡುವಣ ಕೊಂಡಿಯೇ ಪತ್ರಿಕೋದ್ಯಮದ ವ್ಯವಸ್ಥೆ. ಈ ವ್ಯವಸ್ಥೆಯನ್ನು ತಮ್ಮ ಸಮುದಾಯ ಬದುಕಿಗೆ ಪೂರಕವಾದ ರಚನಾತ್ಮಕ ಮಾಹಿತಿಯನ್ನು ವಸ್ತುನಿಷ್ಠವಾಗಿ ಒದಗಿಸಿಕೊಡಲೆಂದೇ ಸೃಷ್ಟಿಸಿಕೊಂಡಂತಹ ಪ್ರಜಾಪ್ರಭುತ್ವದ ಫೋರ್ತ್ ಎಸ್ಟೇಟ್ ಮಾಧ್ಯಮ ಎಂದು ಮರ್ಯಾದೆ ಪಡೆದಿದೆ.**

ಅದನ್ನು ಹಿಂತೆಗೆದು ಕೊಳ್ಳುವ ಅವಕಾಶ ಸದಸ್ಯರಿಗಿದೆ. ಇಲ್ಲವೇ ಸ್ಪೀಕರ್ ಅಥವಾ ಸಭಾಪತಿಗಳೇ ಅದನ್ನು ಕಡತದಿಂದ ತೆಗೆದು ಹಾಕಿದರೆ ಮಾಧ್ಯಮಗಳು ಅವನ್ನು ಪ್ರಕಟಿಸುವಂತಿಲ್ಲ, ಉಲ್ಲೇಖಿಸುವಂತೆಯೂ ಇಲ್ಲ. ಹಾಗೇನಾದರೂ, ಕ್ಯಾರೇ ಮಾಡದೆ ಪ್ರಕಾಶನಕ್ಕೆ ಮುಂದುವರಿದರೆ ಸದನವು ಅಂಥವರ ಮೇಲೇ ಛೀಮಾರಿ ಹಾಕಲು ಕಾನೂನು ಅವಕಾಶವಿದೆ. ಕರ್ನಾಟಕ ವಿಧಾನಸಭೆಯೊಳಗೆ ಒಮ್ಮೆ ಸ್ವತಂತ್ರ ಶಾಸಕರೊಬ್ಬರು ಲಾಲ್‌ಬಾಗಿನಲ್ಲಿ ನಡೆದ ರೇಪ್ ವಿಕ್ಟಿಮ್ ಒಬ್ಬಾಕೆಯನ್ನು ಸಮಾವೇಶ ನಡೆಯುತ್ತಿರುವಾಗಲೇ ತನ್ನ ಜೊತೆ, ಸದನದೊಳಗೆ ಕರೆತಂದುದಕ್ಕೆ ಛೀಮಾರಿ ಹಾಕಿಸಿಕೊಂಡು ಅವರು ಕ್ಷಮಾಪಣೆ ಕೇಳಬೇಕಾಗಿ ಬಂದಾಗ ನಾನೂ ವರದಿಗಾರನಾಗಿ ಸದನದೊಳಗಿದ್ದೆ. ಹಾಗೆಯೇ, ಸದನದೊಳಗೆ ಶಾಸಕರುಗಳು ಒಂದು ಖಾಸಗಿ ವಿದ್ಯಾಸಂಸ್ಥೆಯ ಬಗ್ಗೆ ಮಾಡಿದ ಟೀಕಾ ಪ್ರಹಾರವನ್ನು ಸಂಪಾದಕೀಯ ಪುಟದಲ್ಲಿ ಟೀಕಿಸಿ, ಖಂಡಿಸಿ ಬರೆದ ಲೇಖನಗಳಿಗಾಗಿ ಸದನದ ಪ್ರಿವಿಲೇಜ್ಡ್ ಸಮಿತಿ ಪತ್ರಿಕೆಯ ಸಂಪಾದಕರನ್ನು ವಿಚಾರಣೆ ನಡೆಸಿ ಅವರು ತಮ್ಮ ಲೇಖನವನ್ನು ಸಮರ್ಥಿಸಿಕೊಂಡಾಗ ಛೀಮಾರಿ ಹಾಕಿ ವರದಿ ಕೊಟ್ಟಿದುದನ್ನು ನನಗೆ ಮರೆಯಲಾಗದು.

ಈ ಹಿನ್ನೆಲೆಯಲ್ಲಿ, ನಾನು ಪೊಲಿಟಿಕಲ್ ಸೈನ್ಸ್ ವಿದ್ಯಾರ್ಥಿಯಾಗಿದ್ದಾಗ ನಮ್ಮ ರಾಜಕೀಯ ವಿಜ್ಞಾನದ ಮೇಷ್ಟ್ರು ಹೇಳಿದ ಹಳೆ ಜೋಕು ನೆನಪಾಗುತ್ತದೆ. ಸಂಸತ್ತು ವ್ಯವಸ್ಥೆಯನ್ನು ನಿರೂಪಿಸಿದ ಬ್ರಿಟನ್ ಪಾರ್ಲಿಮೆಂಟಿನಲ್ಲಿ ಸಂಸದಿಕರೊಬ್ಬರು ಸಿಟ್ಟಿನ ಬರಾಟೆಯಲ್ಲಿ " ಫಿಫ್ಟಿ ಪರ್ಸೆಂಟ್ ಮೆಂಬರ್ಸ್ ಆಫ್ ದಿಸ್ ಹೌಸ್ ಆರ್ ಫೂಲ್ಸ್" ಎಂದು ಹೇಳಿಬಿಟ್ಟಾಗ ಸದನದಲ್ಲಿ ಸದಸ್ಯರು ಪ್ರತಿಭಟಿಸಿದರಂತೆ. ಸ್ಪೀಕರ್ ಕೂಡಾ ಅದನ್ನೊಪ್ಪಿಕೊಂಡು ಆ ಸದಸ್ಯ ಕ್ಷಮೆ ಕೋರಬೇಕು ಇಲ್ಲವೇ ಮಾತನ್ನು ಹಿಂತೆಗೆದು ಕೊಳ್ಳಬೇಕು ಎಂದು ಆದೇಶವಿತ್ತರಂತೆ. ಸದನವಿಡೀ ಒಗ್ಗಟ್ಟಿನಿಂದ ಸಭಾಧ್ಯಕ್ಷರನ್ನು ಬೆಂಬಲಿಸಿದಾಗ ಆ ಸದಸ್ಯರು ವಿಶಾದ ವ್ಯಕ್ತಪಡಿಸಿ " ಸದನದ 50% ಸದಸ್ಯರು ಮೂರ್ಖರಲ್ಲ" ಎಂದು ಹೇಳಿಕೆ ತಿದ್ದಿಕೊಂಡಾಗ ಸದನವಿಡೀ ಅದನ್ನು ಮೆಚ್ಚಿ ಟೇಬಲ್ ಗುದ್ದಿ ಸಂಭ್ರಮಿಸಿತಂತೆ.

ಗ್ರೀಕ್ ಭಾಷೆಯ ಡೆಮೋಸ್ (ಜನರಿಂದಾಗಿ) ಮತ್ತು ಕ್ರಾಟೋಸ್ (ಆಡಳಿತ) ಸೇರಿ ಡೆಮೋಕ್ರಸಿಯಾಯಿತು. ಅದರ ಕನ್ನಡಾರ್ಥವೇ ಪ್ರಜಾಪ್ರಭುತ್ವ. ಅದರಲ್ಲಿ ನಿರಂತರ ಸಂಸ್ಕಾರಗಳಾಗುತ್ತಾ ಬಂದಿದ್ದರೂ ನಮ್ಮ ಆಡಳಿತ ವ್ಯವಸ್ಥೆಯನ್ನು ಸಮಸ್ಯೆಗಳು ಕಾಡುವುದು ಬಿಟ್ಟಿಲ್ಲ. ಪ್ರಜಾಪ್ರಭುತ್ವಕ್ಕೆ ಸರಿಸಾಟಿಯಾದ ಮತ್ತೊಂದು ಆಡಳಿತ ಬುದ್ಧಿವಂತ ಮಾನವರಿಗಿನ್ನೂ ತೋಚಿಲ್ಲ. ಸಮಸ್ಯೆಗಳು ಕಾಡುವುದು ನಿಲ್ಲುತ್ತಲಿಲ್ಲ. ನಿರಂತರ ಬದಲಾವಣೆ ಆಗುತ್ತಲಿರುವ ಸಮಾಜಗಳಲ್ಲಿ ಅದಕ್ಕೆ ಬೇಕಾದ ಪರಿಷ್ಕರಣೆಯಾಗುತ್ತಿರಬೇಕಾದುದು ಸಹಜವೇ ಆಗಿದೆ. ಒಮ್ಮೆ ಪ್ರಜಾಪ್ರಭುತ್ವದ ಮಹಿಮೆ ಅರಿತ ಜನಸಮುದಾಯಗಳಾವುವೂ ಮತ್ತೆ ಹಿಂದಕ್ಕೆ ಹೋಗಲು ಬಯಸುವುದಿಲ್ಲ. ಪ್ರಜಾಪ್ರಭುತ್ವದಲ್ಲಿ ಆಡಳಿತ ಮತ್ತು ಜನತೆಯ ನಡುವಣ ಕೊಂಡಿಯೇ ಪತ್ರಿಕೋದ್ಯಮದ ವ್ಯವಸ್ಥೆ. ಈ ವ್ಯವಸ್ಥೆಯನ್ನು ತಮ್ಮ ಸಮುದಾಯ ಬದುಕಿಗೆ ಪೂರಕವಾದ ರಚನಾತ್ಮಕ ಮಾಹಿತಿಯನ್ನು ವಸ್ತುನಿಷ್ಠವಾಗಿ ಒದಗಿಸಿಕೊಡಲೆಂದೇ ಸೃಷ್ಟಿಸಿಕೊಂಡಂತಹ ಪ್ರಜಾಪ್ರಭುತ್ವದ ಫೋರ್ತ್ ಎಸ್ಟೇಟ್ ಮಾಧ್ಯಮ ಎಂದು ಮರ್ಯಾದೆ ಪಡೆದಿದೆ.

> **ಟೆಲಿವಿಶನ್ ಪ್ರಸಾರ ಪ್ರಾರಂಭವಾದ ಮೇಲೆ ಅದೆಂತಹ ಪರಿಣಾಮ ಶಾಸನಸಭೆಗಳ ಮೇಲೆ ಆಗಿವೆ ಎಂಬುದರ ವಸ್ತುನಿಷ್ಟ ಅಧ್ಯಯನ ಆಗಬೇಕಾಗಿದೆ ಎಂಬ ಅನಿಸಿಕೆಗಳು ವ್ಯಕ್ತಗೊಳ್ಳುತ್ತಾ ಬೆಳೆದಿವೆ. ಏಕೆಂದರೆ ಪ್ರಜಾಪ್ರಭುತ್ವದ 4ನೇ ಅನೌಪಚಾರಿಕ ಅಂಗವಾದ ಮಾಧ್ಯಮರಂಗ ಟೀಕೆಗಳನ್ನು ಮಾಡಲು ಹಕ್ಕು ಹೊಂದಿದರೂ, ಪಾಸಿಟೀವ್ ವಿಚಾರಗಳಲ್ಲಿ, ಅಭ್ಯುದಯ ವಿಚಾರಗಳಲ್ಲಿ ಆಡಳಿತ ಸಹವರ್ತಿಯಾಗಿ ನಿಂತಿದೆಯೇ ಎಂಬ ಪ್ರಶ್ನೆ ಶ್ರೀಸಾಮಾನ್ಯರ ಚರ್ಚಾ ವಿಷಯವಾಗಿ ಗಮನ ಸೆಳೆಯುತ್ತಲಿದೆ.**

ಏಕಪಕ್ಷೀಯ ಹಾಗೂ ತಾನು ಹೇಳಿದ್ದೇ ಅಂತಿಮ ಎನ್ನುವ ಚಕ್ರಾಧಿಪತಿ ಇಲ್ಲವೇ ಪಕ್ಷ/ಧರ್ಮಪತಿಗಳ ಆಡಳಿತಗಳೂ ಜಾಗತಿಕವಾಗಿ ಅಲ್ಲಲ್ಲಿ ಇದ್ದೇ ಇವೆ. ಕೆಲವು ರಾಷ್ಟ್ರಗಳಲ್ಲಿ ಜನಕ್ರಾಂತಿಗಳೇ ನಡೆದು ಆಡಳಿತವೇ ಬದಲಾದ ಸುದ್ದಿಗಳೂ ಮಾಧ್ಯಮದಲ್ಲಿ ಒಮ್ಮೊಮ್ಮೆ ಕಂಡು–ಕೇಳಿ ಬರುತ್ತವೆ. ಪ್ರಜಾಸ್ವಾತಂತ್ರ್ಯ ಕರಗತವಾದ ರಾಷ್ಟ್ರಗಳಲ್ಲಿಯೂ ಮತ್ತೆ ಡಿಕ್ಟೇಟರ್‌ಶಿಪ್ ಅಥವಾ ಮಿಲಿಟರಿ ಆಡಳಿತ ಮೇಲ್ಗೈ ಸಾಧಿಸುವುದೂ ಇದೆ. ಆದರೆ, ಸಣ್ಣ ಪುಟ್ಟ ದೇಶಗಳಲ್ಲಿ ಕೂಡಾ ಜನರಿಂದ ಜನರಿಗಾಗಿ, ಜನರಿಗೋಸ್ಕರ ಆಡಳಿತ ಒಮ್ಮೆ ಬೇರೂರಿದರೆ ಸುಲಭವಾಗಿ ಅದು ಬದಲಾಗುವುದಿಲ್ಲ. ಏಕೆಂದರೆ, ಪ್ರಜೆಗಳಿಗೆ ತಮ್ಮದೇ ಆಡಳಿತದಲ್ಲಿ ಸುಖ, ಅನುಕೂಲ ಹೆಚ್ಚೆಂದು ಅಷ್ಟರಲ್ಲಿ ಮನವರಿಕೆಯಾಗುವುದು ಕಂಡು ಬಂದಿದೆ. ಆದರೆ, ಬರ್ಮಾದಲ್ಲಿನ ಪ್ರಜಾಪ್ರಭುತ್ವ ಆಡಳಿತವನ್ನು ಚೀನಾದ ಒತ್ತಡದಿಂದ ರಂಗೂನ್ ಮಿಲಿಟರಿ ಮರು ವಶ ಪಡಿಸಿಕೊಂಡಿರುವುದು, ಹಾಗೆಯೇ ಅಲ್ಲಿ ಶ್ರೀಸಾಮಾನ್ಯ ದೊಡ್ಡ ಸಂಖ್ಯೆಯಲ್ಲಿ ಸೇರಿಕೊಂಡು ಮತ್ತೆ ಪ್ರಜಾಪ್ರಭುತ್ವ ಬೇಕೆಂದು ಪ್ರತಿಭಟಿಸುತ್ತಲಿರುವ ಸುದ್ದಿ ಸೋರಿಕೆಯಾಗಿ ಬರುತ್ತಲಿರುವುದು ಸಂತಸದ ಬೆಳವಣಿಗೆ. ಆರ್ಥಿಕವಾಗಿ ಹಿಂದುಳಿದು, ಅನಕ್ಷರತೆ ಕಾಡುತ್ತಿರುವಂತಹ ಸಮಾಜಗಳಲ್ಲಿ, ವಯಸ್ಕ ಮತದಾನವಿದ್ದರೆ, ಜಾತಿ, ಕೋಮು ಆಧಾರದಲ್ಲಿ ವೋಟ್ ಬ್ಯಾಂಕ್ ಸೃಷ್ಟಿಯಾಗುತ್ತಲಿರುತ್ತದೆ ಎಂಬ ಅನುಭವಾತಂಕವೂ ಕಾಡುತ್ತಲಿದೆ. ಚುನಾವಣಾ ಪದ್ಧತಿಯಲ್ಲಿ ಹಣ–ಪ್ರಭಾವ ಬೀರುವ ಕ್ರಿಮಿನಲ್ ಚಟುವಟಿಕೆಯೂ ನಡೆಯುತ್ತಲಿರುತ್ತದೆ ಎಂಬುದು ಬಹಿರಂಗ ಸತ್ಯ. ಸದನಾಂಗಣದಲ್ಲಿ ರಾಜಕೀಯ ಹೋರಾಟ ನಡೆಯುವಾಗ ಸದನ ಮುನ್ನಡೆಸುವುದೆಂತು ಎಂದ ಸಭಾಪತಿ, ಸಭಾಧ್ಯಕ್ಷರುಗಳು ಹಣೆ ಚಚ್ಚಿಕೊಳ್ಳುವುದು ಪದೇ ಪದೇ ಕಂಡು ಬರುತ್ತಲಿದೆ. ಇದನ್ನೆಲ್ಲಾ ಜನರ ಮುಂದಿಡುವ ಕರ್ತವ್ಯ ಮಾಧ್ಯಮದಾಗಿರಬೇಕು.

ಈಗ ನಮ್ಮಲ್ಲಿ ಅಂತರರಾಷ್ಟ್ರೀಯ ಹಣಹೂಡಿಕೆಯ ಕಾಂಗ್ಲಮರೇಟ್ ಮಾಧ್ಯಮಗಳು ಪ್ರಭಾವ ಬೀರತೊಡಗಿವೆಯೆಂದು ಜನರ ಮಾತುಕತೆಗಳಲ್ಲೂ ಟೀಕೆಟಿಪ್ಪಣಿಗಳು ಕೇಳಿ ಬರುತ್ತಲಿದೆ. ಆದರೆ, ಸಮುದಾಯಗಳಿಗೆ ಸ್ವತಂತ್ರವಾದ, ವಿಶ್ವಾಸಾರ್ಹ ಮತ್ತು ಕರಾರುವಾಕ್ಕಾದ ಸಮಗ್ರ ಮಾಹಿತಿ ಕೊಡುವ ಹೊಣೆಗಾರಿಕೆ ಮಾಧ್ಯಮದ್ದಾಗಿದೆ ಎಂಬುದನ್ನು ಮರೆಯುವಂತಿಲ್ಲ. ಹಾಗೆಯೇ, ಸಮುದಾಯಗಳ ನಡುವೆ ಅನಾಮಿಕರಾಗಿ ನಡೆದಾಡಿದರೆ "ಈ ಮಾಧ್ಯಮದವರಿಗೂ ಬೇರೆ ಕೆಲಸವಿಲ್ಲ" ಎಂದು ಗೊಣಗಾಡುವವರು ಸಿಗುತ್ತಲೇ ಇರುತ್ತಾರೆ.

ಪ್ರಜಾಧಿವೇಶನಗಳಲ್ಲಿ ರಾಷ್ಟ್ರಪತಿ–ರಾಜ್ಯಪಾಲರ ಭಾಷಣದೊಂದಿಗೆ ತೊಡಗುವ ಅಧಿವೇಶನಗಳು ವರ್ಷಕ್ಕೆ 60 ದಿನವಾದರೂ ನಡೆಯಬೇಕು. ಪ್ರಶ್ನೋತ್ತರ

Download From : www.kpscvaani.com

ಕಲಾಪ ಹಾಗೂ ಅಧಿಕೃತ ಕಡತಗಳ ಮಂಡನೆಯ ನಡುವಿನ ಘಳಿಗೆಯಲ್ಲಿ ಒಂದು ಝೀರೋ ಅವರ್ ಅಥವಾ ಶೂನ್ಯವೇಳೆಯೆಂಬುದು ಪ್ರತಿದಿನವೂ ಪ್ರಸ್ತಾವಗಳಾಗುತ್ತಲೇ ಇರುತ್ತವೆ. ವಸ್ತುಸ್ಥಿತಿಯೇನೆಂದರೆ ಸಂಸದೀಯ ನಡಾವಳಿಗಳಲ್ಲಿ ಈ ವಿಚಾರದ ಪ್ರಸ್ತಾವನೆಯೇ ದಾಖಲೆಯಲಿಲ್ಲ. ಇದು ಸ್ಪೀಕರ್ ಅನುಮತಿಕೊಟ್ಟರೆ ಮಾತ್ರ ನಡೆಯಲು ಸಾಧ್ಯ. ಝೀರೋ ಅವರ್ ಅನ್ನು ಬಿಟ್ಟರೆ, ಬೇರೇನೂ ಬರೆಯಲು ಇಲ್ವೇ ಇಲ್ವಾ ಸಾರ್ ಎಂದು ಪತ್ರಿಕೋದ್ಯಮ ವಿದ್ಯಾರ್ಥಿಗಳು ಒಮ್ಮೊಮ್ಮೆ ಪ್ರಶ್ನಿಸುವುದಿದೆ. ಯಾಕಿಲ್ಲಾ! ಬೇಕಾದಷ್ಟಿವೆ ಎನ್ನುವುದು ಸಾಮಾನ್ಯವಾಗಿ ಕೇಳಿ ಬರುವ ಉತ್ತರ. ವರ್ಷಾರಂಭದಲ್ಲಿ ದಿಲ್ಲಿಯಲ್ಲಿ ಮತ್ತು ಎರಡು ಸದನಗಳಿರುವ ರಾಜ್ಯಗಳಲ್ಲಿ ಜಂಟಿ ಅಧಿವೇಶನವನ್ನು ರಾಷ್ಟ್ರಪತಿಯವರು ಹಾಗು ಪ್ರತಿನಿಧಿಯಾಗಿರುವ ರಾಜ್ಯಪಾಲರುಗಳು ಉದ್ಘಾಟನೆ ಮಾಡಿದ ಮೇಲೆ ಬಜೆಟ್ ಸೆಶನ್ ನಡೆಯುತ್ತದೆ. ಬಳಿಕ ಇನ್ನೆರಡು ಬಾರಿ ಅಗತ್ಯವಿದ್ದರೆ ಸದನಗಳು ಸೇರಲು ಅವಕಾಶವಿದೆ.

ಜೊತೆಗೆ ಉಲ್ಲೇಖಿಸಲೇ ಬೇಕಾದ ಅಂಶವೆಂದರೆ ಪ್ರಶ್ನೋತ್ತರ, ಗಮನಸೆಳೆವ ಸೂಚನೆಗಳು, ಖಾಸಗಿ ಸದಸ್ಯರ ಬಿಲ್‌ಗಳು, ನಿರ್ಣಯಗಳು, ವಿಶೇಷ ಚರ್ಚೆಗಳು ಎಂಬ ಇತ್ಯಾದಿ ಅವಕಾಶಗಳಿದ್ದೇ ಇವೆ. ವಿಧಾನಮಂಡಲವನ್ನು ನಿರಂತರವಾಗಿ ವರದಿ ಮಾಡುವ ಪತ್ರಕರ್ತರುಗಳಿಗೆ ಇನ್‌ವೆಷ್ಟಿಗೇಟಿವ್, ಡೆವಲಪ್ಮೆಂಟ್ ವರದಿಗಳನ್ನು ಬೇಕಾದ ಸರಕು-ಸೂಚನೆಗಳನ್ನು ಸದನದ ಭಾಷಣ ದಾಖಲೆಗಳು ಒದಗಿಸಿಕೊಡುತ್ತವೆ ಎಂಬುದನ್ನು ಮರೆಯಬಾರದು.

ಅಂತಹದೊಂದು ಪುಟ್ಟ ಅನುಭವವನ್ನು ಹಂಚಿಕೊಳ್ಳಬಯಸುತ್ತಲಿದ್ದೇನೆ. 1980 ದಶಕದ ಕೊನೆಯಲ್ಲಿರಬೇಕು. ಸದನದಲ್ಲಿ ಬೆಳ್ತಂಗಡಿ ತಾಲೂಕು ನೀರು ಮಟ್ಟದ ಬಗ್ಗೆ ಸ್ಥಳೀಯ ಶಾಸಕರು ಕೇಳಿದ ಪ್ರಶ್ನೆಗಳಿದ್ದವು. ಪ್ರಶ್ನೆ, ಆಗಷ್ಟೆ ಬೋರ್‌ವೆಲ್‌ಗಳನ್ನು ಕೊರೆದ ಪ್ರದೇಶಗಳಲ್ಲಿ ನೀರಿನ ಮಟ್ಟದ್ದಾಗಿತ್ತು. "ನಿಮ್ಮ ತಾಲೂಕಿನಲ್ಲಿ ನೀರಿನ ಮಟ್ಟ ಕೆಲವು ಇಂಚುಗಳಷ್ಟು ಕಡಿಮೆಯಾಗಿದೆ" ಎಂದು ವಿವರಗಳು ಇದ್ದವು. ಆ ಬಗ್ಗೆ ನಾನು ಮಾಡಿದ ವರದಿ ನಮ್ಮ ಪತ್ರಿಕೆಯಲ್ಲಿ ವರದಿಯಾಗಿತ್ತು. ಕೆಲವು ಶಾಸಕರು-ಮಿತ್ರರುಗಳು " ಏನ್ರೀ ಮಾರಾಯರೆ ನೀರಿನ ಮಟ್ಟ ಹೆಚ್ಚಾದರೆ ಒಳ್ಳೆ ಸುದ್ದಿ, ಕಮ್ಮಿಯಾಗಿದೆಯೆಂಬುದೇನು ಮಹಾ ಸುದ್ದಿ ಎಂದು ರೇಗಿಸಿದ್ದರು. ನಾನು ಪೆಚ್ಚಾದೆನು.

ಆದರೆ, ಕೆಲವೇ ಕ್ಷಣಗಳಲ್ಲಿ ನಾನು ಕುಳಿತಿದ್ದ ವಿಧಾನಮಂಡಲ ಗ್ರಂಥಾಲಯಕ್ಕೆ ಬಂದ ಸಚಿವರೊಬ್ಬರ ಬಂಧು ಕಾನೂನು-ರಾಜಕೀಯ ಸೂಕ್ಷ್ಮಜ್ಞರೊಬ್ಬರು ( ಬಿ.ಆರ್.ಎಲ್. ಐಯ್ಯಂಗಾರ್) ಅದನ್ನೋದಿ " ಗುಡ್ ಈ ಪೇಪರ್‍ನಲ್ಲಿ ಹಾಕಿದ್ದಾರೆ. ನೋಡುತ್ತಾ ಇರೀ. ಇದೇ ರೀತಿಯಲ್ಲಿ ಬೋರ್ ವೆಲ್ ಕೊರೆಯುತ್ತಾ ಹೋದ್ರೆ ಮುಂದೊಂದು ದಿನ ಭೂಮಿಯೊಳಗಣ ನೀರುಮೂಲಗಳೆಲ್ಲ ಒಣಗಿ ಹೋಗದಿದ್ದೀತೇ? ಆಮೇಲೇನು ಗತಿ!" ಎಂದಿದ್ದರು. ಅಗಿನ ಸಚಿವರೊಬ್ಬರ ನಿಕಟ ಬಂಧುವಾಗಿದ್ದ ಅವರು ನಾನೇ ವರದಿ ಬರೆದವನೆಂದು ತಿಳಿದು ಗುಡ್ ಎಂದು ನನಗೊಂದು ಗುದ್ದು ಕೊಟ್ಟಿದ್ದರು. ಅದು ಮೂರು ದಶಕಗಳ ಹಿಂದಿನ ನಿಜಕಥೆ. ಇವತ್ತು, ನಮ್ಮ ಭೂಮಿಯಾಳ ನೀರು ಕೊರೆತದಿಂದ ಸೃಷ್ಟಿಯಾಗಿರುವ ಆತಂಕವನ್ನು ನೆನೆಸಿದರೆ ಭಯವಾಗುತ್ತಲಿದೆ. ಕುಡಿಯುವ ನೀರೂ ನಮಗಿಲ್ಲವಾಗುವ ದಿನಗಳು ಹತ್ತಿರವಾಗುತ್ತಿದೆಯೇನೋ ಎಂಬ ಭಯವಂತೂ ಸೃಷ್ಟಿಯಾಗಿ ಬಿಟ್ಟಿದೆ. ನೆಗೆಟಿವ್ ಸ್ಟೋರಿಗಳಾಗಿ ಪ್ರಸ್ತಾಪಗೊಳ್ಳುವ ಆರಂಭಿಕ ಸುದ್ದಿಗಳೆಷ್ಟೋ ಸದನದೊಳಗೆ ಬರುತ್ತಲೇ ಇರುತ್ತವೆಂಬುದನ್ನು ಅನುಭವಿ ಪತ್ರಕರ್ತರುಗಳು ಒಪ್ಪಿಕೊಳ್ಳುತ್ತಾರೆ.

ಸಂಸದೀಯ ಪ್ರಜಾಪ್ರಭುತ್ವ ನಮ್ಮಲ್ಲಿ ಬಂದ ಆರಂಭದಲ್ಲಿ ನಿಯಮಾವಳಿಗೊಳಪಟ್ಟು ಕಲಾಪ ನಡೆಯುತ್ತಿದ್ದವಂತೆ. ಈ 75ನೆ ವರ್ಷಕ್ಕೆ ಕಾಲಿಡುವ ಘಟ್ಟದಲ್ಲಿ ದಿಲ್ಲಿಯಲ್ಲಿರಲಿ, ರಾಜ್ಯಗಳಲ್ಲಿರಲಿ ಒಳಗೆ ರಣರಂಗವನ್ನು ಮತ್ತು ಹೊರಗೆ ಭಯೋತ್ಪಾದಕರ ಬೆದರಿಕೆಯನ್ನು ಕಣ್ಣಿಟ್ಟು ಕಾಯಬೇಕಾದ ಪರಿಸ್ಥಿತಿ ನಮ್ಮಲ್ಲಿ ಸೃಷ್ಟಿಯಾಗಿದೆ. ಆದರೆ, ನಡೆದ ಚುನಾವಣೆಗಳಲ್ಲಿ ಈ ದೇಶ ಮತದಾರರು ಪ್ರಜಾಪ್ರಭುತ್ವದ ಆಡಳಿತದಲ್ಲಿ ಪದೇ ಪದೇ ನಂಬಿಕೆಯಿಟ್ಟು ಮತದಾನ ಮಾಡುತ್ತಿದ್ದಾರೆಂಬುದು ಅಭಿಮಾನದ ವಿಚಾರವೇ. ಆದರೆ, ಪತ್ರಕರ್ತರುಗಳು ಕೂಡಾ ಸಂಸದೀಯ ವರದಿಗಳನ್ನು ಮಾಡುವುದಕ್ಕೆ ಬೇಕಾದ ನಿಪುಣತೆ, ಜವಾಬ್ದಾರಿ, ವಿವೇಚನೆ, ನಿರ್ವಹಣೆಗೆ ಅಗತ್ಯವುಳ್ಳ ತಿಳುವಳಿಕೆ ಮತ್ತು ಪ್ರಮಾಣ ಬದ್ಧ ಅಪ್ಡೇಟ್ ಹೊಂದಿದ್ದಾರೆಂದು ಪ್ರಶಂಸೆಯೂ ಇದೆ. ಆದರೆ, ಟೆಲಿವಿಶನ್ ಪ್ರಸಾರ ಪ್ರಾರಂಭವಾದ ಮೇಲೆ ಅದೆಂತಹ ಪರಿಣಾಮ ಶಾಸನಸಭೆಗಳ ಮೇಲೆ ಆಗಿವೆ ಎಂಬುದರ ವಸ್ತುನಿಷ್ಠ ಅಧ್ಯಯನ ಆಗಬೇಕಾಗಿದೆ ಎಂಬ ಅನಿಸಿಕೆಗಳು ವ್ಯಕ್ತಗೊಳ್ಳುತ್ತಾ ಬೆಳೆದಿವೆ. ಏಕೆಂದರೆ ಪ್ರಜಾಪ್ರಭುತ್ವದ 4ನೇ ಅನೌಪಚಾರಿಕ ಅಂಗವಾದ ಮಾಧ್ಯಮರಂಗ ಟೀಕೆಗಳನ್ನು ಮಾಡಲು ಹಕ್ಕು ಹೊಂದಿದರೂ, ಪಾಸಿಟೀವ್ ವಿಚಾರಗಳಲ್ಲಿ, ಅಭ್ಯುದಯ ವಿಚಾರಗಳಲ್ಲಿ ಆಡಳಿತ ಸಹವರ್ತಿಯಾಗಿ ನಿಂತಿದೆಯೇ ಎಂಬ ಪ್ರಶ್ನೆ ಶ್ರೀಸಾಮಾನ್ಯರ ಚರ್ಚಾ ವಿಷಯವಾಗಿ ಗಮನ ಸೆಳೆಯುತ್ತಲಿದೆ.

ಪತ್ರಿಕೆ ಮತ್ತು ಮಾಧ್ಯಮಗಳಲ್ಲಿ ಮತದಾರರಿಗೆ ಏನು ಬೇಕು ಎಂದು ಸಮುದಾಯಗಳ ಅಭಿಪ್ರಾಯ, ಅನಿಸಕೆಗಳಿಗೆ ಮಹತ್ವ ಬಂದಿಲ್ಲ. ಅಂತಹ ನಿರಂತರ ಅವಕಾಶ ಮತ್ತು ಅಧ್ಯಯನಗಳನ್ನು ನಡೆಸುತ್ತಲಿರಬೇಕು ಎಂಬ ಅನಿಸಿಕೆಗಳೂ ಮೂಡಿ ಬರುತ್ತಲಿದೆ. ಮಾಧ್ಯಮ ವ್ಯವಸ್ಥೆ ಆಡಳಿತದ ಸಹವರ್ತಿಯಾಗಿರಬೇಕು ಮತ್ತು ಪ್ರಗತಿ ಕಾರ್ಯ ಹೇಗೆ ನಡೆಯುತ್ತಲಿವೆಯೆಂದು ನಿರಂತರ ಅಧ್ಯಯನ ಮಾಡುತ್ತಲಿರಬೇಕು ಎಂದು ಸೂಚನೆಗಳೂ ಸಾಮಾಜಿಕ ನಾಯಕರುಗಳಿಂದ ಬರುತ್ತಲೇ ಇರುತ್ತದೆ. ಸಹವರ್ತಿತನದಲ್ಲಿ ಕೇವಲ ಉಪಚಾರ ಲೋಕಾಭಿರಾಮ ವರದಿಗಳು ಸಾಲದು, ಕಠಿಣ ಪ್ರಶ್ನೆಗಳನ್ನು ಕೇಳುವುದರ ಜೊತೆಗೆ ಸಮುದಾಯಗಳನ್ನು ನೇರವಾಗಿ ಸಂಪರ್ಕಿಸಿ ಅವರವರ ಅಭಿಪ್ರಾಯಗಳನ್ನು ನಿರಂತರ ನಮ್ಮ ಜನಪ್ರತಿನಿಧಿಗಳ ಮುಖಕ್ಕೆ ಹಿಡಿಯಬೇಕು ಎಂಬ ಸಲಹೆ, ಸೂಚನೆಗಳು, ಟೀಕೆ, ಟಿಪ್ಪಣಿಗಳು ಬರುತ್ತಿರುತ್ತವೆ ಎಂಬುದು ಸತ್ಯ. ಇತ್ತೀಚೆಗೆ ಕಣ್ಣು-ಕಿವಿ ತೆರೆದಿಟ್ಟು ಗಮನಿಸಿ ಶ್ರೀಸಾಮಾನ್ಯರ ಅನಿಸಿಕೆಗಳನ್ನು ದಾಖಲಿಸಿಕೊಂಡು ಪಕ್ಷಾತೀತವಾಗಿ ಸಮಾಜದ ಮುಂದೆ ಬಿಚ್ಚಿಡಬೇಕೆಂಬ ಅನಿಸಿಕೆ-ಅಭಿಪ್ರಾಯ ಹೆಚ್ಚೆಚ್ಚು ಕೇಳಿ ಬರುತ್ತಲಿದೆ. ಹಾಗಾಗಿ ಪತ್ರಿಕಾ ಸ್ವಾತಂತ್ರ್ಯವನ್ನು ಎತ್ತಿ ಹಿಡಿಯುವ ನಿಟ್ಟಿನಲ್ಲಿ ವರದಿಗಳು ಬರಲಿ ಎಂಬುದು ಎಲ್ಲರ ಆಶಯ. ■

















# ಕೃಷಿಕನ ಕೈಚಳಕದಲ್ಲಿ ಅರಳಿದ ವಿಭಿನ್ನ ಕಲಾಕೃತಿ





**ಉತ್ತರ ಕನ್ನಡ ಜಿಲ್ಲೆಯ ಮೂರುರಿನ ಕೃಷಿಕ ಶಿವಮೂರ್ತಿ ಭಟ್ ಅವರು ತಮ್ಮ ಕೃಷಿ ಚಟುವಟಿಕೆಯ ಜೊತೆಗೆ ಗಿಡ-ಮರದ ಬೇರು, ಕಾಂಡ ಮತ್ತು ತೆಂಗಿನ ಚಿಪ್ಪಿನಿಂದ ಸುಂದರ ಕಲಾಕೃತಿಗಳನ್ನು ಸಿದ್ಧಪಡಿಸುವ ಮೂಲಕ ತಮ್ಮ ಪ್ರತಿಭೆಯನ್ನು ಅನಾವರಣಗೊಳಿಸಿದ್ದಾರೆ.**

ಗಣಪತಿ ಹಾಸ್ಪುರ

ಪ್ರತಿಯೊಬ್ಬರಲ್ಲಿಯೂ ಒಂದೊಂದು ಪ್ರತಿಭೆಯಿರುತ್ತದೆ. ಯಾರಲ್ಲಿ ಯಾವ ಬಗೆಯ ಕಲಾ ಸರಸ್ವತಿ ಅಡಕವಾಗಿದೆ ಎಂದೇಳುವುದೇ ಕಷ್ಟಕರ. ಅವರವರ ಅಭಿರುಚಿಗೆ ಅನುಗುಣವಾಗಿ, ವೈವಿಧ್ಯಮಯವಾದ ಪ್ರವೃತ್ತಿಯಲ್ಲಿ ಸಕ್ರೀಯವಾಗಿ ತೊಡಗಿಕೊಂಡಿರುತ್ತಾರೆ. ಹಲವರು ತಮ್ಮ ಕಲಾ ಪ್ರೌಢಿಮೆಯನ್ನು ಸಮಾಜದ ಮುಂದೆ ಅಭಿವ್ಯಕ್ತಿ ಪಡಿಸುತ್ತಾ, ತಮ್ಮೊಳಗಿನ ಕಲೆಯನ್ನು ಮುಕ್ತವಾಗಿ ಸಾದರ ಪಡಿಸುತ್ತಾರೆ.

ಆದರೆ ಮತ್ತೆ ಕೆಲವರು ಯಾವುದೇ ಆಡಂಬರವಿಲ್ಲದೇ, ತಮ್ಮಷ್ಟಕ್ಕೇ ತಾವೇ ತಮಗಿಚ್ಛಿಸಿದ ಕಲಾ ಪ್ರವೃತ್ತಿಯಲ್ಲಿ ತೊಡಗಿಕೊಂಡು, ಸದ್ದಿಲ್ಲದೇ ಸಾಧನೆ ಮಾಡುತ್ತಾ ಇರುತ್ತಾರೆ. ದೊಡ್ಡ ದೊಡ್ಡ ಕಲಾ ಪ್ರದರ್ಶನದಲ್ಲಿ ಭಾಗವಹಿಸಬೇಕೆಂಬ ಆಸೆಯೂ ಅವರಿಗೆ ಇರುವುದಿಲ್ಲ. ಅಂತಹ ಅಪ್ರತಿಮ ಕಲಾವಿದರಲ್ಲಿ ಮೂರುರಿನ ಶಿವಮೂರ್ತಿ ಭಟ್ ವಿಶಿಷ್ಠವಾಗಿ ಕಾಣುವ ಕೃಷಿ ಕಲಾವಿದರು.

Download From : www.kpscvaani.com





ಶಿವಮೂರ್ತಿ ಭಟ್

ಇವರು ಉತ್ತರ ಕನ್ನಡ ಜಿಲ್ಲೆಯ ಕುಮಟಾ ತಾಲೂಕಿನ (ಸಿದ್ದರಮಠ) ಮೂರುರಿನವರು. ಇವರ ತಂದೆ ಸೂರ್ಯನಾರಾಯಣ ಭಟ್ರು, ಮೂರ್ತಿ ಕೆತ್ತನೆಯ ಕಾರ್ಯದಲ್ಲಿ ತಮ್ಮನ್ನು ಅರ್ಪಿಸಿಕೊಂಡಿದ್ದರು. ಶಿವಮೂರ್ತಿ ಅವರಿಗೆ ತಂದೆಯ ಕೈಚಳಕದಿಂದ ಮೂಡಿದ ಕಲಾಕೃತಿಗಳೇ ಸ್ಫೂರ್ತಿ ಮತ್ತು ಪ್ರೇರಣೆ. ಹಾಗಾಗಿ ಇವರಿಗೆ ಸಹಜವಾಗಿಯೇ ಈ ಪ್ರವೃತ್ತಿಯನ್ನು ರೂಢಿಸಿಕೊಳ್ಳಲು ಸಹಕಾರಿ ಆಗಿದೆ.

ಪದವಿ ಪೂರ್ವ ಶಿಕ್ಷಣದ ಬಳಿಕ ತಂದೆಯಿಂದ ಬಳುವಳಿಯಾಗಿ ಬಂದ ಕಲ್ಲಿನಲ್ಲಿ ಮೂರ್ತಿ ಕೆತ್ತನೆಯ ಕಾರ್ಯದಲ್ಲಿ ತೊಡಗಿಕೊಂಡರು. ಶಿವಮೂರ್ತಿ ಭಟ್ ಅವರು ಕಾಷ್ಠ ಶಿಲ್ಪದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ದೇವರ ವಿಗ್ರಹಗಳನ್ನು ಅತ್ಯಾಕರ್ಷಕವಾಗಿ ಕೆತ್ತನೆ ಮಾಡಿದರೂ, ಅದರಿಂದ ವಿಭಿನ್ನವಾದ ವಸ್ತುಗಳನ್ನು ಸಿದ್ಧ ಮಾಡುವುದರಲ್ಲಿಯೂ ತಮ್ಮನ್ನು ಅರ್ಪಿಸಿಕೊಂಡಿದ್ದು ವಿಶೇಷ. ನುಡಿಸಲು ಬರುವ "ಕೊಳಲು", "ಶಂಖ"ವನ್ನು ಸೂಕ್ಷ್ಮವಾಗಿ ಸಿದ್ಧಪಡಿಸಿದ್ದು ಶಿವಮೂರ್ತಿಯವರ ಸಾಹಸದ ಸಾಧನೆ ಎಂದರೂ ತಪ್ಪಾಗಲಾರದು. ಕಲ್ಲಿನಲ್ಲಿ ಮೂರ್ತಿ ಕೆತ್ತನೆಯನ್ನೇ ಮುಖ್ಯ ಕಸುಬಾಗಿ ಸ್ವೀಕರಿಸಿದ ಈ ಬಹುಮುಖ ಪ್ರತಿಭೆಯುಳ್ಳ ಕಲಾವಿದರು. ಸಾವಿರಾರು ವಿಗ್ರಹಗಳನ್ನು ತಮ್ಮ ಸ್ವ-ಸಾಮರ್ಥ್ಯದಿಂದ ಸಿದ್ಧಪಡಿಸಿದ್ದಾರೆ. ದೇವಸ್ಥಾನದ ಪ್ರಧಾನ ಬಾಗಿಲನ್ನು ಸಹಾ ಆಕರ್ಷಕವಾಗಿ ತಯಾರಿಸಬಲ್ಲರು. ಅನೇಕರು ಇವರ ಕೈಚಳಕದಿಂದ ರೂಪ ಪಡೆದುಕೊಂಡ ದೇವರ ವಿಗ್ರಹ, ಆಕರ್ಷಕ ಬಾಗಿಲನ್ನು ಖರೀದಿಸಿದ್ದಾರೆ.

**ಚಿಪ್ಪು, ಮರದಿಂದಲೂ ಕಲಾಕೃತಿ**

ಮೂರುರಿನ ಶಿವಮೂರ್ತಿ ಭಟ್ ಅವರದ್ದು ವಿಭಿನ್ನ ಆಲೋಚನೆಯುಳ್ಳ ವ್ಯಕ್ತಿತ್ವ, ತಮ್ಮ ಕೆಲಸದಲ್ಲಿಯೂ ಶಿಸ್ತು, ಅಚ್ಚುಕಟ್ಟುತನವನ್ನು ಬೆಳೆಸಿಕೊಂಡವರು. ನಿರುಪಯುಕ್ತ ವಸ್ತುಗಳಲ್ಲಿಯೂ ಯಾವ ಚಿತ್ರವನ್ನು ಚಿತ್ರಿಸಬಹುದು, ಅನುಪಯುಕ್ತ ವಸ್ತುವನ್ನು ಯಾವ ರೀತಿಯಲ್ಲಿ ಸದ್ಬಳಕೆ ಮಾಡಬಹುದು ಎನ್ನುವುದು ಇಂತಹ ಸೂಕ್ಷ್ಮ ಕಲಾವಿದರಿಗೆ ಮಾತ್ರ ಅದು ಸಾಧ್ಯ. ಅಂತಹ ವಿಶೇಷ ಗುಣ ಅವರಲ್ಲಿ ಅಡಕವಾಗಿ ಇರುವುದರಿಂದ, ಇವರು ಮರದ ಬೇರು, ತುಂಡು, ತೆಂಗಿನ ಕಾಯಿ ಚಿಪ್ಪು (ಕರಟ).... ಅದರಿಂದಲೂ ವೈವಿಧ್ಯಮಯವಾದ ಕಲಾಕೃತಿಗಳನ್ನು ಸಿದ್ಧಪಡಿಸುವುದರಲ್ಲಿ ಇವರದ್ದು ಎತ್ತಿದ ಕೈ.

ಸುಮಾರು ಹದಿನೈದು ವರುಷಗಳ ಹಿಂದೆ ಸುಮ್ಮನೆ ಆಲೋಚನೆ ಮಾಡುತ್ತಾ ಕೂತಿದ್ದರು. ಮರದ ಬೇರಿನಿಂದ ಹೊಸ ಬಗೆಯ 'ವಸ್ತು'ವನ್ನು ಸಿದ್ಧಪಡಿಸಬೇಕು ಎಂಬ ವಿಚಾರವನ್ನೇ ಕಾರ್ಯರೂಪಕ್ಕೆ ಇಳಿಸಿ, ಅದರಲ್ಲಿ ಯಶಸ್ವಿಯೂ ಆದರು. ನೈಸರ್ಗಿಕವಾಗಿ ಮೂಡಿರುವ ಬೇರು ಮತ್ತು ಕಾಂಡದಿಂದ ಮೊಸಳೆ, ಆನೆ, ತಾಯಿ-ಮಗು, ಉಡ, ಆಮೆ.... ಹೀಗೆ ವಿಭಿನ್ನವಾದ ವಸ್ತುಗಳನ್ನು ಸಿದ್ಧಪಡಿಸಿ ಸೈ ಎನಿಸಿಕೊಂಡರು. ಹಾಗೆಯೇ ತೆಂಗಿನ ಚಿಪ್ಪಿನಿಂದಲೂ ತಮ್ಮ ಕೈಚಳಕವನ್ನು ತೋರಿದರು. ಅದರಿಂದ ಗಣೇಶ, ಆಂಜನೇಯ, ಶಿಲಾ ಬಾಲಿಕೆ, ಹೂವಿನ ಕುಂಡ, ಮನುಷ್ಯನ ಆಕೃತಿ, ಪ್ರಾಣಿ, ಪಕ್ಷಿ, ಸ್ಪ್ರಿಂಗ್ ಬಳೆ, ಸರ.... ಹೀಗೆ ವಿಧವಿಧವಾದ ಕಲಾಕೃತಿಗಳನ್ನು ಸಿದ್ಧಪಡಿಸಿದ್ದಾರೆ.

ಕಳೆದ ಹತ್ತು ವರುಷದಿಂದ ತೆಂಗಿನ ಚಿಪ್ಪಿನಲ್ಲಿ ವಿಭಿನ್ನ ಕಲಾಕೃತಿಗಳನ್ನು ತಯಾರಿಸುತ್ತಿರುವ ಇವರು, ಇದುವರೆಗೆ 400 ಕ್ಕೂ ಹೆಚ್ಚು ಬಗೆಯ ವಸ್ತುಗಳನ್ನು ಸಿದ್ಧಪಡಿಸಿದ್ದಾರೆ. ಅವರು ಸಿದ್ಧಪಡಿಸಿದ ಕಲಾಕೃತಿಗಳನ್ನು ಮನೆಯಲ್ಲಿ ಅಚ್ಚುಕಟ್ಟಾಗಿ ಜೋಡಿಸಿಟ್ಟಿದ್ದಾರೆ. ಅವರ ಮನೆಗೆ ಹೋದವರಿಗೆ ಅವೆಲ್ಲವನ್ನು ನೋಡುತ್ತಿದ್ದರೆ ಎರಡು ಕಣ್ಣುಗಳೇ ಸಾಲದೇನೋ.... ಎಂದೆನಿಸಿದರೂ ಆಶ್ಚರ್ಯವಿಲ್ಲ. ಆ ರೀತಿಯಲ್ಲಿ ಅವರ ಮನೆಯೆ ಒಂದು ಸಣ್ಣ ಆರ್ಟ್ ಗ್ಯಾಲರಿಯಾಗಿ ರೂಪ ಪಡೆದುಕೊಂಡಿದೆ.

ಸೂಕ್ಷ್ಮ ಮತ್ತು ನಾಜೂಕಿನ ಕಾರ್ಯದಲ್ಲಿ ತಮ್ಮನ್ನು ಅರ್ಪಿಸಿಕೊಂಡಿರುವ ಮೂರೂರಿನ ಶಿವಮೂರ್ತಿ ಭಟ್‌ರು ಸ್ಥಳೀಯ ಪ್ರಗತಿ ವಿದ್ಯಾಲಯದಲ್ಲಿ "ಕ್ಲೇ ಮತ್ತು ಕ್ರಾಫ್ಟ್ ಟೀಚರ್" ಆಗಿಯೂ ಸೇವೆ ಸಲ್ಲಿಸುತ್ತಿದ್ದಾರೆ. ಸದಾ ಹೊಸತನ, ವೈವಿಧ್ಯತೆ, ಅತೀ ಸೂಕ್ಷ್ಮತೆಯ ಘನ ಕಾರ್ಯದಲ್ಲಿ ಸ್ವ-ಸಾಮರ್ಥ್ಯದಿಂದ ತೊಡಗಿಕೊಂಡಿರುವ ಇವರ ಸಾಹಸ, ಸಾಧನೆ ಅಮೂಲ್ಯವಾದುದು. ಈ ಕೃಷಿ ಕಲಾವಿದನಿಂದ ಇನ್ನಷ್ಟು ವೈವಿಧ್ಯಮಯವಾದ ಕಲಾಕೃತಿಗಳು ಅರಳಲಿ. ■








Download From : www.kpscvaani.com

# ಪದಬಂಧ-18



ವಿದ್ಯಾ ವಿ. ಹಾಲಭಾವಿ

### ಎಡದಿಂದ ಬಲಕ್ಕೆ

2. ನೇರವಲ್ಲದ ನುಡಿ (5)
4. ಕಾಯಕವೇ ಕೈಲಾಸ ಎಂದು ನುಡಿದ ಶರಣರು (4)
6. ದೇಹದ ಒಂದು ಭಾಗ (2)
7. ಒಂದನ್ನೊಂದು ಅಗಲದೇ ಇರುವ ಸಂಬಂಧ (8)
10. ಅಂತರ್ಜಲವನ್ನು ಹೆಚ್ಚಿಸಲು ಹಮ್ಮಿಕೊಳ್ಳಲಾಗಿರುವ ಅಭಿಯಾನ (8)
13. ಕಡಲ ಹತ್ತಿರ ನೀಡಿದ ಸಾಲ (2)
14. ಅತ್ಯಂತ ರುಚಿಕಟ್ಟಾದ ಅಡುಗೆ (4)
16. ನೀರಿನ ಅಲೆ ನೋಡಿದಾಗ ಈ ವಾದ್ಯ ನೆನಪಾದೀತೇ? (5)

### ಮೇಲಿಂದ ಕೆಳಕ್ಕೆ

1. ನೆನಪಿನಿಂದ ಮಾಸದ ತಿಂಗಳು! (2)
2. ಬಣ್ಣನೆಯಲ್ಲಿರುವ ರಂಗು! (2)
3. ಕುದುರೆ ಇಲ್ಲಿದೆ (3)
4. ಈಕೆ ದುಡ್ಡಿಲ್ಲದವಳು (3)
5. ಎಲೆ ಅಡಿಕೆ ಚೀಲವಿಲ್ಲಿ ತಿರುವುಮುರುವಾಗಿದೆ (2)
6. ಕುರುಡ ಇಲ್ಲಿದ್ದಾನೆ (2)
7. ಈಕೆ ಹಿರಿಯ ಸಹೋದರಿ (2)
8. ಕೊಂಕಾದ ಮಾತು (3)
9. ಅಧಮನ ಹತ್ತಿರವಿರುವ ಹಣ! (3)
10. ಆಲಸ್ಯ ಅಥವಾ ಸೋಮಾರಿತನ (2)
11. ಶರಧಿಯಲ್ಲಿರುವ ಬಾಣ (2)
12. ಬೇಡುವವ ಇಲ್ಲಿದ್ದಾನೆ (3)
13. ಧಾನ್ಯ ಸಂಗ್ರಹಿಸುವ ಸ್ಥಳ (3)
14. ನಗರದಲ್ಲಿ ಖರೀದಿಸಿದ ಆಭರಣ (2)
15. ಟಪಾಲು ಬಂದಾಗ ನೀಡಿದ ಹಿಸ್ಸೆ! (2)

### ಉತ್ತರ

**ಎಡದಿಂದ ಬಲಕ್ಕೆ**

2. ಬಳಸುಮಾತು 4. ಬಸವಣ್ಣ 6. ಅಂಗ 7. ಅವಿನಾಭಾವಸಂಬಂಧ 10. ಜಲಶಕ್ತಿಅಭಿಯಾನ 13.ಕಡ 14. ನಳಪಾಕ 16. ಜಲತರಂಗ

**ಮೇಲಿಂದ ಕೆಳಕ್ಕೆ**

1. ಮಾಸ 2. ಬಣ್ಣ 3. ತುರಗ 4. ಬಡವಿ 5. ಚಿಸಂ 6. ಅಂಧ 7. ಅಕ್ಕ 8. ವಕ್ರೋಕ್ತಿ 9. ಧನ 10. ಜಡ 11. ಶರ 12. ಯಾಚಕ 13. ಕಣಜ 14. ನಗ 15. ಪಾಲು

### -: ಸೂಚನೆ :-

ಲೇಖನಗಳನ್ನು ಬರೆಯುವ ಆಸಕ್ತರು ವಾರ್ತಾ ಜನಪದಕ್ಕೆ ಲೇಖನಗಳನ್ನು ಕಳುಹಿಸಬಹುದು. ಸರ್ಕಾರದ ಯೋಜನೆಗಳು, ಅಭಿವೃದ್ಧಿಗಳು, ಪ್ರಗತಿಪರ ರೈತರ ಯಶೋಗಾಥೆ, ಜನಜಾಗೃತಿ ಮೂಡಿಸುವ ವಿಚಾರಗಳು, ಕರ್ನಾಟಕದ ಪ್ರೇಕ್ಷಣೀಯ ಸ್ಥಳಗಳು, ಕರ್ನಾಟಕದ ಇತಿಹಾಸ ಸಾರುವ ಗತ ವೈಭವಗಳು, ವಿವಿಧ ವಲಯದಲ್ಲಿ ಸಾಧನೆ ಮಾಡಿರುವ ರಾಜ್ಯದ ಸಾಧಕರ ಪರಿಚಯ ಇಂತಹ ವಿಷಯಗಳಿಗೆ ಹೆಚ್ಚಿನ ಆದ್ಯತೆ ನೀಡಲಾಗುವುದು.

ನುಡಿ ತಂತ್ರಾಂಶದಲ್ಲಿ ಟೈಪ್ ಮಾಡಿದ ಕನಿಷ್ಠ 500 ಪದಗಳಿಂದ 750 ಪದಗಳಿಗೆ ಮೀರದಂತೆ ಲೇಖನವನ್ನು ಪೂರಕವಾದ ಛಾಯಾಚಿತ್ರದೊಂದಿಗೆ ನಮ್ಮ ಇ–ಮೇಲ್ ವಿಳಾಸ janapada2008@gmail.comಗೆ ಕಳುಹಿಸಬಹುದು. ಲೇಖನಗಳ ಆಯ್ಕೆ ತೀರ್ಮಾನ ಅಂತಿಮವಾಗಿ ಸಂಪಾದಕ ಮಂಡಳಿಯದಾಗಿರುತ್ತದೆ. ಲೇಖನದ ಜೊತೆಗೆ ತಮ್ಮ ಹೆಸರು ವಿಳಾಸ ಮತ್ತು ದೂರವಾಣಿಯನ್ನು ನಮೂದಿಸತಕ್ಕದ್ದು.

Published by : Dr P S Harsha, IPS, Commissioner, Department of Information & Public Relation, 17, Varthasoudha, Bhagwan Mahaveer Road, Bangalore - 560 001
Printed at : M/s Abhimaani Publications Pvt. Ltd.,, Dr Rajkumar Road, Rajajinagar, Bangalore - 560 010

Download From : www.kpscvaani.com



ಏಪ್ರಿಲ್ 2 ರಂದು ಪೊಲೀಸ್ ಧ್ವಜ ದಿನಾಚರಣೆಯ ಅಂಗವಾಗಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಅವರು ಕರ್ತವ್ಯ ನಿರ್ವಹಣೆಯಲ್ಲಿ ಉತ್ತಮ ಸಾಧನೆ ಮಾಡಿದ ಪೊಲೀಸ್ ಅಧಿಕಾರಿ ಮತ್ತು ಸಿಬ್ಬಂದಿ ವರ್ಗದವರಿಗೆ ಮುಖ್ಯಮಂತ್ರಿಗಳ ಪದಕವನ್ನು ಪ್ರದಾನ ಮಾಡಿದರು. ಈ ಸಂದರ್ಭದಲ್ಲಿ ಮುಖ್ಯಮಂತ್ರಿ ಅವರೊಂದಿಗೆ ವಿಜೇತರು ತೆಗೆಸಿಕೊಂಡ ಛಾಯಾಚಿತ್ರ. ಚಿತ್ರದಲ್ಲಿ ಗೃಹ ಸಚಿವ ಬಸವರಾಜ ಬೊಮ್ಮಾಯಿ, ಒಳಾಡಳಿತ ಇಲಾಖೆಯ ಅಪರ ಮುಖ್ಯ ಕಾರ್ಯದರ್ಶಿ ರಜನೀಶ್ ಗೋಯಲ್, ಪೊಲೀಸ್ ಮಹಾನಿರ್ದೇಶಕ ಹಾಗೂ ಮಹಾ ನಿರೀಕ್ಷಕ ಪ್ರವೀಣ್ ಸೂದ್ ಮೊದಲಾದವರು ಉಪಸ್ಥಿತರಿದ್ದಾರೆ

Download From : www.kpscvaani.com
"VARTHA JANAPADA" Monthly - May 2021
"ವಾರ್ತಾ ಜನಪದ" ಮಾಸಿಕ – ಮೇ 2021

RNI No. KAR/KAN/2017/75029

Regd No.KA/BGGPO/2583/2021-23 Licensed to post without prepayment Licence No. PMG/BG/ WPP-365/2021-23
Published on 27th, Dt. 29th & 30th Posted at (Every month), Bangalore PSO, Mysore Road, Bangalore - 26




## ಮನೆಯಿಂದ ಹೊರಗೆ ಹೆಜ್ಜೆ ಇಡುವ ಮುನ್ನ
## ಒಮ್ಮೆ ಯೋಚಿಸಿ !

ಅನಗತ್ಯ ಅಲೆದಾಟ ತಮಗೆ ಮಾತ್ರವಲ್ಲ,
ಇತರರಿಗೂ ಅಪಾಯವನ್ನು ತಂದೊಡ್ಡಬಹುದು.

ಕೊರೋನಾದ ಎರಡನೇ ಅಲೆಯಲ್ಲಿ
ಕೊಚ್ಚಿ ಹೋಗದಿರಿ.

ತಮ್ಮ ಚಲನವಲನ
ಅನಿವಾರ್ಯವಾಗಿದ್ದಲ್ಲಿ ಮಾತ್ರ ಹೊರಬನ್ನಿ.

ಆದರೆ .....

- ಮುಖಗವಸು ಧರಿಸಿ ಸಂಚರಿಸಿ.
- ಕಾಲಕಾಲಕ್ಕೆ ಸಾಬೂನು ಅಥವಾ
ಸ್ಯಾನಿಟೈಸರ್ ಬಳಸಿ ಕೈ ಶುಚಿಗೊಳಿಸಿಕೊಳ್ಳಿ,
- ಕನಿಷ್ಠ ಎರಡು ಮೀಟರ್ ಅಂದರೆ
ಆರು ಅಡಿ ಭೌತಿಕ ಅಂತರವನ್ನು ಕಾಯ್ದುಕೊಳ್ಳಿ.

ತಮ್ಮ ವಯೋಮಾನ 18 ವರ್ಷಗಳು ಮೀರಿದ್ದಲ್ಲಿ,
ಕೋವಿಡ್–19 ಪ್ರತಿರೋಧದ ಲಸಿಕೆ ಹಾಕಿಸಿಕೊಳ್ಳಿ.